بِسْمِ اللهِ الرَّحْمٰنِ الرَّحِيْمِ    نَحْمَدُهٗ وَنُصَلِّيْ عَلٰى رَسُوْلِهِ الْكَرِيْمِ    وَعَلٰى عَبْدِهِ الْمَسِيْحِ الْمَوْعُوْد

وَلَقَدْ نَصَرَكُمُ اللّٰهُ بِبَدْرٍ وَّاَنْتُمْ اَذِلَّةٌ

ವರ್ಷ: 02

ಕನ್ನಡ ಬದರ್ ವಾರ ಪತ್ರಿಕೆ
WEEKLY BADAR QADIAN KANNADA

ಸಂಚಿಕೆ: 32

ವಾರ್ಷಿಕ ಶುಲ್ಕ ರೂ.575/-

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

12 ಆಗಸ್ಟ್ 2021, 12 ಝುಹೂರ್ 1400 ತಬ್‌ಲೀಗ್ ಹಿಜರಿ ಶಮ್‌ಸಿ,
02 ಮುಹರ್ರಮ್ 1442 ಹಿಜರಿ ಖಮರಿ.


## ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಅಲ್ಲಾಹನು ಹುಝೂರ್ ರವರನ್ನು ಪ್ರತಿಕ್ಷಣ ಸಂರಕ್ಷಿಸಲಿ– **ಆಮೀನ್**

اَللّٰهُمَّ اَيِّدْ اِمَامَنَا بِرُوْحِ الْقُدُسِ
وَبَارِكْ لَنَا فِيْ عُمُرِهٖ وَاَمْرِهٖ۔

## ಅಲ್ಲಾಹನ ಉಪದೇಶ

اِنَّ الَّذِيْنَ اٰمَنُوْا وَالَّذِيْنَ هَادُوْا
وَالصّٰبِئُوْنَ وَالنَّصٰرٰى مَنْ اٰمَنَ بِاللّٰهِ
وَالْيَوْمِ الْاٰخِرِ وَعَمِلَ صَالِحًا فَلَا خَوْفٌ
عَلَيْهِمْ وَلَا هُمْ يَحْزَنُوْنَ ○ (المائدہ:70)

**(ಅಲ್‌ಮಾಇದ: 70)**

**ಅಂದರೆ: ಖಂಡಿತವಾಗಿಯೂ ವಿಶ್ವಾಸಿಗಳಿಗೂ ಹಾಗೂ ಯಹೂದ್ಯರು, ಸಾಬಿಗಳು, ಕ್ರೈಸ್ತರು (ಇವರ ಪೈಕಿ) ಯಾರೇ ಆಗಲಿ, ಪ್ರಾಮಾಣಿಕವಾಗಿ ಅಲ್ಲಾಹನಲ್ಲೂ ಅಂತ್ಯ ದಿನದ ಬಗ್ಗೆಯೂ ವಿಶ್ವಾಸವಿಟ್ಟು, ಸತ್ಕಾರ್ಯಗಳನ್ನು ಮಾಡಿದರೆ ಅವರಿಗೂ ಯಾವ ಭಯವೂ ಉಂಟಾಗಲಾರದು. ಅವರಿಗೆ ಯಾವ ಶೋಕವೂ ಇರಲಾರದು.**

## ಪ್ರವಾದಿ ಮುಹಮ್ಮದ್(ಸ)ರವರ ಉಪದೇಶ

### ಝುಕಾತ್ ನೀಡಲು ಬೈಅತ್

(1401) ಹಝ್ರತ್ ಜರೀರ್ ಬಿನ್ ಅಬ್ದುಲ್ಲ(ರ) ವರದಿ ಮಾಡುತ್ತಾರೆ. ನಾನು, ನಮಾಝ್ ನಿಷ್ಠೆಯಿಂದ ನಿರ್ವಹಿಸಲು, ಝುಕಾತ್ ನೀಡಲು ಮತ್ತು ಪ್ರತಿಯೊಬ್ಬ ಮುಸಲ್ಮಾನನ ಹಿತಕಾಂಕ್ಷಿಯಾಗಿರಲು ನಬಿ(ಸ) ರೊಡನೆ ಬೈಅತ್ ಮಾಡಿರುವೆನು.

### ಝುಕಾತ್ ಕೊಡದಿರುವುದು ಪಾಪವಾಗಿರುತ್ತದೆ

(1402) ಹಝ್ರತ್ ಅಬೂ ಹುರೈರ(ರ) ವರದಿ ಮಾಡುತ್ತಾರೆ. ನಬಿ(ಸ) ನುಡಿದರು. (ಅಂತ್ಯ ದಿನದಂದು) ಒಂಟೆಯು ತನ್ನ ಮಾಲೀಕನ ಬಳಿ ಸುಸ್ಥಿತಿಯಲ್ಲಿ ಬರುವುದು, ಅವು ಮೊದಲು ಇದ್ದ ಹಾಗೆಯೇ, ಅದರ ಹಕ್ಕು ಇರುವಂತೆ ಹಕ್ಕನ್ನು ನೀಡದಿದದ್ದರೆ ಅವು ತನ್ನ ಕಾಲುಗಳಿಂದ ತುಳಿಯುವುವು. ಮೇಕೆಗಳು ಸಹ ಮೊದಲು ಇದ್ದಂತೆಯೇ ಸುಸ್ಥಿತಿಯಲ್ಲಿ ತನ್ನ ಮಾಲೀಕನ ಬಳಿ ಬರುವುದು. ಅದಕ್ಕೆ ಇರುವಂತಹ ಹಕ್ಕುಗಳನ್ನು ನೀಡದವರಾಗಿದ್ದರೆ. ಅವು ತನ್ನ ಲತ್ತಿಯಿಂದ ಮತ್ತು ಕೊಂಬಿನಿಂದ ಹೊಡೆಯುವುವು. ನಿಮ್ಮಲ್ಲಿ ಯಾರೂ ಸಹ ಮೇಕೆಯನ್ನು ತನ್ನ ಕುತ್ತಿಗೆಯ ಮೇಲೆ ಹೇರಿಕೊಂಡು, ಅದು ಭ್ಯಾ, ಭ್ಯಾ ಹೇಳುವ ಸ್ಥಿತಿಯಲ್ಲಿ ಬರಕೂಡಕು. ಮತ್ತೆ ನೀವು ಮುಹಮ್ಮದ್! ಎಂದು, ಅಭಯ ಯಾಚಿಸಿದರೆ ನಾನು ಹೇಳುವೆನು. ನಾನು ನಿಮಗಾಗಿ ಏನೂ ಮಾಡಲು ಸಾಧ್ಯವಿಲ್ಲ. ನಾನಂತೂ ಪೂರ್ಣ ರೀತಿಯಲ್ಲಿ ಸತ್ಯ ಸಂದೇಶವನ್ನು ತಲುಪಿಸಿರುತ್ತೇನೆ. ಅಲ್ಲದೇ ಯಾರೂ ಸಹ ತನ್ನ ಕುತ್ತಿಗೆಯ ಮೇಲೆ ಒಂಟೆಯನ್ನು ಹೇರಿಕೊಂಡು ಬರುವುದು ಬೇಡ. ಅದು ಕೂಗುತ್ತಿರುವ ಸ್ಥಿತಿಯಲ್ಲಿ, ಆಗ ನೀವು ಮುಹಮ್ಮದ್! ಎಂದರೆ ನಾನು ಹೇಳುವೆನು. ನಾನು ನಿಮಗಾಗಿ ಏನು ಮಾಡಲು ಸಾಧ್ಯವಿಲ್ಲ. ನಾನಂತೂ ಅಲ್ಲಾಹನ ಸಂದೇಶ ಚೆನ್ನಾಗಿ ತಲುಪಿಸಿರುತ್ತೇನೆ.

**(ಸಹೀಹ್ ಬುಖಾರಿ, ಸಂಪುಟ–3, ಮುದ್ರಣ ಖಾದಿಯಾನ್ 2008)**

**ಅಲ್ಲಾಹನು ಕಳುಹಿಸಿದ ಸುಧಾಕರನ್ನು ಮತ್ತು ಅವನ ಸ್ನೇಹಿತರನ್ನು ವಿರೋದಿಸುವವರಿಗೆ ಮತ್ತು ಪೀಡನೆ ನೀಡುವವರಿಗೆ ಪರಿಣಾಮ ನೆಟ್ಟಗಿರುವುದಿಲ್ಲ.**
**ಯಾವ ವ್ಯಕ್ತಿ ಅವರಿಗೆ ಪೀಡನೆ ನೀಡಿ ಮತ್ತು ದುಃಖ ಕೊಟ್ಟು ನಾನು ಆರಾಮವಾಗಿರಬಹುದೆಂದು ಯೋಚಿಸುವನೋ ಅವನು ಕಠಿಣವಾದ ತಪ್ಪು ಹಾದಿಯಲ್ಲಿರುವನು ಮತ್ತು ಆತ್ಮವಂಚನೆ ಮಾಡಿಕೊಳ್ಳುವವನಾಗುತ್ತಾನೆ.**

### ಸಯ್ಯದುನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು

ಇದು ಕಾಯಿದೆಯ ಮಾತಾಗಿದೆ, ವ್ಯಕ್ತಿಯೊಬ್ಬನು ಒಬ್ಬನನ್ನು ಪ್ರೀತಿಸುವವನಾದರೆ, ತನ್ನ ಮಕ್ಕಳಂತೆ ಪ್ರೀತಿಸುವವನಾದರೆ, ಅವನಿಗೆ ನೀನು ಸಾಯಿ ಅಥವಾ ಅದೇ ರೀತಿಯ ಮನನೋಯಿಸುವ ಮಾತುಗಳನ್ನಾಡಿದರೆ, ಆ ವ್ಯಕ್ತಿ ಹೇಗೆ ತಾನೆ ಸಂತೋಷಪಡುವನು. ಯಾವನ ತಂದೆ ತನ್ನ ಪುತ್ರನಿಗಾಗಿ ಶಾಪ ಹಾಕುತ್ತಿರುವನು ಮತ್ತು ದು:ಖ ನೀಡುವ ರೀತಿಯ ಮಾತನ್ನಾಡುವನು, ಇಂತಹ ವ್ಯಕ್ತಿಯೊಂದಿಗೆ ಹೇಗೆ ಪ್ರೀತಿ ಮಾಡಲು ಸಾಧ್ಯ? ಅದೇ ರೀತಿಯಲ್ಲಿ ಅಲ್ಲಾಹನ ಸ್ನೇಹಿತರು ಸಹ, ಅಲ್ಲಾಹನ ಮಕ್ಕಳ ರೀತಿಯ ಪ್ರೀತಿ ಹೊಂದುವರು. ಏಕೆಂದರೆ ಅವರು ದೇವೇಚ್ಛೆಯ ವಸ್ತ್ರಗಳನ್ನು ಕಳಚಿ ಅಲ್ಲಾಹನ ಮಡಿಲಿಗೆ ಸೇರಿದವರಾಗುತ್ತಾರೆ. ಅಲ್ಲಾಹನೇ ಅವನ ಪೋಷಕ ಹಾಗೂ ರಕ್ಷಕನಾಗಿರುತ್ತಾನೆ. ಅವನು ಅವರಿಗಾಗಿ ಸ್ವಾಭಿಮಾನ ಹೊಂದುವವನಾಗಿರುತ್ತಾನೆ. ಯಾವನೇ ವ್ಯಕ್ತಿ (ಅವನು ಎಂತಹ ನಮಾಝ್ ಅನುಷ್ಠಿಸುವವನಾಗಲಿ, ಉಪವಾಸ ಮಾಡುವವನಾಗಲಿ) ಅವರನ್ನು ವಿರೋಧಿಸುವವರಾಗಿದ್ದರೆ ಮತ್ತು ಪೀಡನೆಗೆ ಸಿದ್ಧನಾದರೆ ಅಲ್ಲಾಹನ ಸ್ವಾಭಿಮಾನ ಜಾಗೃತಗೊಳ್ಳುತ್ತದೆ ಮತ್ತು ವಿರೋಧಿಸುವವರ ಮೇಲೆ ಅವರ ಪ್ರಕೋಪ ಉಂಟಾಗುತ್ತದೆ. ಏಕೆಂದರೆ ಅವರು ಅವನ ಸ್ತ್ರೀಯರನ್ನು ದು:ಖ ಕೊಡಬಯಸಿದ್ದಾರೆ. ಆ ಸಮಯ ಅವರಿಗೆ ನಮಾಝ್ ಸಹ ಅವರ ಸಹಾಯಕ್ಕೆ ಬಾರದು. ಉಪವಾಸವು ಸಹಾಯಕ್ಕೆ ಬಾರದು. ಏಕೆಂದರೆ ನಮಾಝ್ ಮತ್ತು ಉಪವಾಸ ಅವನಿಗೆ ರಾಜಿ ಮಾಡುವ ಉದ್ದೇಶದಿಂದಿತ್ತು. ಅದನ್ನು ಬೇರೆ ಉದ್ದೇಶದಿಂದ ಅಸಂತುಷ್ಟ ಪಡಿಸಿದಂತಾಯಿತು. ಹಾಗಾಗಿ ಹೇಗೆ ತಾನೇ ಅವರಿಗೆ ಅವನ ಸಂಪ್ರೀತಿ ದೊರೆಯಲು ಸಾಧ್ಯ. ಮೂರ್ಖನಾದ ಅವರು ಅವನ ಪ್ರಕೋಪದಿಂದ ಆಜ್ಞಾನಿಯಾಗಿರುತ್ತಾರೆ. ನಮಾಝ್, ಉಪವಾಸದ ಮೇಲೆ ಗರ್ವಪಡುವವರಾಗಿರುತ್ತಾರೆ. ಪರಿಣಾಮವಾಗಿ ದಿನೇ ದಿನೇ ಅಲ್ಲಾಹನ ಪ್ರಕೋಪ ಹೆಚ್ಚುತ್ತಲೇ ಹೋಗುತ್ತದೆ. ಹಾಗಾಗಿ ಅವರು ಅವನ ಸಂತೃಪ್ತಿ ಪಡೆಯವ ಬದಲಿಗೆ ಅಲ್ಲಾಹನಿಂದ ದೂರವಾಗುತ್ತಾರೆ. ಅವನಿಂದ ಧಿಕ್ಕರಿಸಲ್ಪಡುತ್ತಾರೆ. ಅದೇ ರೀತಿ ಯಾವ ವ್ಯಕ್ತಿ ಅಲ್ಲಾಹನ ಸಂಪ್ರೀತಿಯಲ್ಲಿ ತನ್ನನ್ನು ಕಳಕೊಂಡಿರುತ್ತಾನೆ. ಮತ್ತು ಅವನ ಮಡಿಲಲ್ಲಿ ಪೋಷಿಸಲ್ಪಡುತ್ತಾನೆ. ಅವನ ಅನುಗ್ರಹಕ್ಕೆ ಒಳಪಟ್ಟಿರುತ್ತಾನೆ. ಅವನು ಮಾತನಾಡುವುದು ದೇವನು ಮತನಾಡಿಸಿದಂತೆ, ಅವನ ಮಿತ್ರ ದೇವನ ಮಿತ್ರನಾಗುತ್ತಾನೆ, ಅವನ ಶತ್ರು ದೇವನ ಶತ್ರುವಾಗುತ್ತಾನೆ. ಅಂದ ಹಾಗೆ ದೇವನ ಶತ್ರು ಆದ ವ್ಯಕ್ತಿಯೊಬ್ಬನು ಹೇಗೆ ಸತ್ಯವಿಶ್ವಾಸಿಯಾಗಿರಲು ಸಾಧ್ಯ. ಹೀಗೆ ಅವನ ವಿಶ್ವಾಸ ಹರಣವಾಗುತ್ತದೆ. ಮತ್ತು ಅವನ ಪ್ರಕೋಪಕ್ಕೆ ಗುರಿಯಾಗುತ್ತಾನೆ. ಅಲ್ಲಾಹನು ಕಳುಹಿಸಿದ ಸುಧಾರಕರನ್ನು ಮತ್ತು ಅಲ್ಲಾಹನ ಸ್ನೇಹಿತರನ್ನು ವಿರೋಧಿಸುವವರು, ಪೀಡಿಸುವವರು ಎಂದೂ ಒಳ್ಳೆಯ ಫಲ ಪಡೆಯುವುದಿಲ್ಲ. ಯಾವ ವ್ಯಕ್ತಿ ಅವರನ್ನು ಪೀಡಿಸಿ ಮತ್ತು ದುಃಖ ನೀಡಿ ನಾನು ಆರಾಮವಾಗಿರಬಹುದು ಎಂದು ಭಾವಿಸುವವನು ತಪ್ಪು ಕಲ್ಪನೆಯಲ್ಲಿರುವನು ಮತ್ತು ತನ್ನ ಆತ್ಮಕ್ಕೆ ವಂಚಿಸುವವನಾಗುತ್ತಾನೆ.

**(ಮಲ್ಫೂಝಾತ್ ಸಂಪುಟ 1, ಪುಟ 314 ಮುದ್ರಣ 2018 ಖಾದಿಯಾನ್)**

**ದೇವ ಏಕತ್ವ ಮತ್ತು ಬಹುದೇವಾರಾಧನೆಗಳ ಕಾಲಗಳು ಲೋಕದಲ್ಲಿ ಬರುತ್ತಿರುತ್ತವೆ. ಏಕದೇವತ್ವದ ವಿಶ್ವಾಸ ಹೊಂದಿದ ಸಮುದಾಯಗಳು ಬಹುದೇವಾರಾದಕರಾಗಿ ಬಿಡುತ್ತಾರೆ ಮತ್ತು ಬಹುದೇವಾರಾಧಕರು, ಏಕತ್ವ ವಾದಿಗಳಾಗುತ್ತಾರೆ.**
**ದೇವೇಕತ್ವದ ಕಾಲವು ಯಾವಾಗಲೂ ಬಹುದೇವಾರಾಧನಾ ಕಾಲದಿಂದ ಮೊದಲು ಆಗಿರುತ್ತದೆ.**
**ಈ ತತ್ವದನ್ವಯ ಏಕತ್ವಕ್ಕಾಗಿ ಬಹುದೇವರಾಧನೆಯ ಅವನತಿಯ ಸ್ಥಾನ ಒಪ್ಪಿತವಾಗಿದೆ.**

ಸಯ್ಯದ್‌ನಾ ಹಝ್ರತ್ ಮುಸ್ಲಿಹ್ ಮೌಊದ್(ರ) ಸೂರಃ ಇಬ್ರಾಹಿಂ ವಚನ 36 **ವಇಝ್‌ಖಾಲ ಇಬ್ರಾಹೀಮು ರಬ್ಬಿಜ್‌ಅಲ್ ಹಾಝುಲ್ ಬಲದ ಆಮಿನವ್ವಜ್‌ನುಬ್ನಿ ವಬನಯ್ಯ ಅನ್ನಅಬುದಲ್ ಅಸ್ನಾಮ್** ರ ವ್ಯಾಖ್ಯಾನ ಮಾಡುತ್ತಾ ಹೇಳುತ್ತಾರೆ. ಈ ಪ್ರಾರ್ಥನೆ (ದುಆ) ಯಿಂದ ತಿಳಿದು ಬರುವುದೇನೆಂದರೆ ಮಕ್ಕ ಕ್ಷೇತ್ರದಲ್ಲಿ

*(ಪುಟ ಸಂಖ್ಯೆ–11 ರಲ್ಲಿ ಮುಂದುವರಿಸಲಾಗಿದೆ)*

لَآ اِلٰہَ اِلَّا اللّٰہُ مُحَمَّدٌ رَّسُوْلُ اللّٰہِ

# ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಬಹುಮಾನದ ಪಂಥಾಹ್ವಾನ

**ಹರ್ ಮುಖಾಲಿಫ್ ಕೊ ಮುಖಾಬಿಲ್ ಪೆ ಬುಲಾಯ ಹಮ್ ನೇ**

ಎಲ್ಲಾ ವಿರೋಧಿಯರನ್ನು ಪ್ರತಿವಾದಿಸಲು ಆಹ್ವಾನಿಸಿದೆವು ನಾವು.

اِنَّ السُّمُوْمَ لَشَرُّ مَا فِی العَالَمِ ✿ شَرَّ السُّمُوْمِ عَدَاوَۃُ الصُّلَحَاءِ

**ಮೌಲ್ವಿ ಅಬ್ದುಲ್ ಹಖ್ ಗಝ್ನವಿಗಾಗಿ ಐದು ನೂರು ರೂಪಾಯಿಗಳ ಬಹುಮಾನ**
**ಯಾವನಾದರೂ ನ್ಯಾಯವಂತನು ಆಣೆ ಮಾಡಿ ಹೇಳಬೇಕು ಮುಬಾಹಲದ ನಂತರ ಅಬ್ದುಲ್ ಹಖ್‌ನಿಗೆ ಯಾವ ಅಪಮಾನವು ಉಂಟಾಗಲಿಲ್ಲ ಎಂದು.**

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ರವರ ಈ ಬಹುಮಾನದ ಪಂಥಾಹ್ವಾನ ನಾವು ಅವರ ಗ್ರಂಥ "ಅನ್ವಾರುಲ್ ಇಸ್ಲಾಂ" ಸಂಪುಟ 9 ರಿಂದ ಪ್ರಸ್ತುತಪಡಿಸುತ್ತಿದ್ದೇವೆ. ಅದಕ್ಕಿಂತ ಮುಂಚೆ ನಾವು ಅಮೃತ್ಸರದಲ್ಲಿ ನಡೆದ "ಜಂಗ್ ಮುಖದ್ದಸ್" ಚರ್ಚಾಕೂಟದ ಅಂತಿಮ ದಿನ 5 ಜೂನ್ 1893 ರಂದು ಹಝ್ರತ್ ಮಸೀಹ್ ಮೌಊದ್(ಅ) ಆಥಮರ ಮರಣದ ಬಗ್ಗೆ ಭವಿಷ್ಯವಾಣಿ ನುಡಿದಿದ್ದರ ಬಗ್ಗೆ ವಿವರಿಸಿದ್ದೆವು. ಅದರ ಅವಧಿ 15 ತಿಂಗಳುಗಳಾಗಿತ್ತು. ಭವಿಷ್ಯವಾಣಿ ಶರತ್ತನ್ನು ಒಳಗೊಂಡಿತ್ತು. ಅದರ ಪದಗಳು ಹೀಗಿದ್ದವು. "ಶರತ್ತೇನೆಂದರೆ ಸತ್ಯದೆಡೆ ರುಜುಪಡಿಸಿಕೊಳ್ಳಬಾರದು". ಆದರೆ ಆಥಮನು ಸತ್ಯೆದೆಡೆ ರುಜುಪಡಿಸಿಕೊಂಡನು. ಅಂದ ಹಾಗೆ ಅಲ್ಲಾಹನು ಅವರಿಗೆ ಕೆಲ ಸಮಯಕ್ಕಾಗಿ ರಿಯಾಯಿತಿ ನೀಡಿದನು ಮತ್ತು ಅವರು ಮರಣದಿಂದ ಬಚಾವಾದರು. ಆಗ ಮೌಲ್ವಿಗಳು ಮತ್ತು ಮುಸಲ್ಮಾನ ಪಂಡಿತರು ಬೊಬ್ಬೆ ಹಾಕಿದರು. ಭವಿಷ್ಯವಾಣಿ ಸುಳ್ಳಾಯಿತು ಎಂದು. ಅವರು ಕ್ರೈಸ್ತರ ಒಳಗೂಡಿ ಸಂತೋಷ ಹಂಚಿಕೊಂಡರು.  ಮತ್ತು ಕ್ರೈಸ್ತ ಧರ್ಮವನ್ನು ವಿಜಯಿ ಎಂದು ಹಾಗೂ ಇಸ್ಲಾಂ ಧರ್ಮವನ್ನು ಪರಾಜಿತವಾಗಿದೆ ಎಂದರು. ಕ್ರೈಸ್ತರನ್ನೊಳಗೂಡಿ ಸಂತೋಷ ಹಂಚಿಕೊಳ್ಳುವುದರಲ್ಲಿ ಹಝ್ರತ್ ಮಸೀಹ್ ಮೌಊದ್(ಅ) ರವರ ಕಡುವೈರಿ ಮತ್ತು ವಿದ್ರೋಹಿ ಮೌಲ್ವಿ ಅಬ್ದುಲ್ ಹಖ್ ಗಝ್ನನವಿ ಸಹ ಶಾಮೀಲಾಗಿದ್ದರು. ಮತ್ತು ಅವರ ಇತರ ಗಝ್ನವಿ ಸಹೋದರರು ಸಹ ಶಾಮೀಲಾಗಿದ್ದರು. ಅವರ ಸಂಬಂಧ ಅಮೃತ್ಸರದಿಂದಿತ್ತು.

ಇಲ್ಲಿ ಉಲ್ಲೇಖನೀಯ ವಿಷಯವೇನೆಂದರೆ ಮೌಲ್ವಿ ಅಬ್ದುಲ್ ಹಖ್ ಗಝ್ನವಿ ಮೌಲ್ವಿ ಅಬ್ದುಲ್ಲ ಗಝ್ನವಿಯ ಪುತ್ರನಲ್ಲ. ಬದಲು ಶಿಷ್ಯನಾಗಿದ್ದಾನೆ. ಅವರ ಪುತ್ರರಾದ ಮೌಲ್ವಿ ಅಬ್ದುಲ್ ಜಬ್ಬಾರ್ ಗಝ್ನವಿ ಮತ್ತು ಮೌಲ್ವಿ ಅಬ್ದುಲ್ ವಾಹಿದ್ ಗಝ್ನವಿ ಮುಂತಾದವರಿದ್ದರು. ಮೌಲ್ವಿ ಅಬ್ದುಲ್ಲ ಗಝ್ನವಿ ಓರ್ವ ಸಜ್ಜನ ಭಯಭಕ್ತಿಯುಳ್ಳ ವ್ಯಕ್ತಿಯಾಗಿದ್ದರು. ಅವರು ಅಫ್‌ಗಾನಿಸ್ಥಾನದಿಂದ ಹಿಜ್ರತ್ ಮಾಡಿ ಅಮೃತ್ಸರದಲ್ಲಿ ನೆಲೆಸಿದ್ದರು. ಅವರು ಹಝುರತ್ ಮಸೀಹ್ ಮೌಊದ್(ಅ) ಸತ್ಯವನ್ನು ದೃಢೀಕರಿಸಿದ್ದರು. ಅವರ ಬಗ್ಗೆ ಮಸೀಹರು ಹೀಗೆ ನುಡಿದಿದ್ದರು. "ಏಕ್ ನೂರ್ ಆಸ್ಮಾನ್ ಸೇ ಉತ್ರಾ ಹೈ ಔರ್ ವೋ ಮಿರ್ಝಾ ಗುಲಾಂ ಅಹ್ಮದ್ ಖಾದಿಯಾನಿ ಹೈ" –ಅರ್ಥಾತ್ (ಆಕಾಶದಿಂದ ಒಂದು ಪ್ರಕಾಶ ಅವತರಿಸಿದೆ ಅವರು ಮಿರ್ಝಾ ಗುಲಾಮ್ ಅಹ್ಮದ್ ಖಾದಿಯಾನಿ ಆಗಿದ್ದಾರೆ).
**(ತೊಹ್‌ಫಾ ಗಝ್ನವಿಯ, ರೂಹಾನಿ ಖಝಾಈನ್, ಸಂಪುಟ–15, ಪುಟ–546)** ಅಲ್ಲದೇ ಹೀಗೆ ಸಹ ನುಡಿದಿದ್ದರು ಏಕ್ ನೂರ್ ಆಸ್ಮಾನ್ ಸೇ ಗಿರಾ ಔರ್ ವೋ ಖಾದಿಯಾನ್ ಫರ್ ನಾಝಿಲ್ ಹುಆ ಔರ್ ಮೇರಿ ಔಲಾದ್ ಉಸ್ಸೆ ಮಹ್ರೂಮ್ ರಹಗಯಿ **(ತೊಹ್‌ಫಾ ಗಝ್ನವಿಯ, ರೂಹಾನಿ ಖಝಾಈನ್, ಸಂಪುಟ–15, ಪುಟ–565)** ಅನುವಾದ: ಒಂದು ಪ್ರಕಾಶ ಆಕಾಶದಿಂದ ಇಳಿದಿದೆ. ಮೌಲ್ವಿ ಅಬ್ದುಲ್ಲ ಗಝುವಿ ಅವರ ಭವಿಷ್ಯವಾಣಿ ಪೂರ್ಣಗೊಂಡಿದೆ. ಅವರ ಸಂತಾನ ಕೇವಲ ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ರವರ ಮೇಲೆ ವಿಶ್ವಾಸ ತರುವುದರಿಂದ ವಂಚಿತವಾಗಿದೆ. ಬದಲು ಅವರು ಹಝ್ರತ್ ಮಸೀಹ್ ಮೌಊದ್(ಅ) ರವರನ್ನು ವಿರೋಧಿಸುವಲ್ಲಿ ಹೆಚ್ಚೆಚ್ಚು ಪಾಲ್ಗೊಂಡಿದ್ದಾರೆ. ಮೌಲ್ವಿ ಅಬ್ದುಲ್ ಹಖ್ ಗಝ್ನವಿ ಅವರು ಅಬ್ದುಲ್ಲ ಗಝ್ನವಿ ಅವರ ಶಿಷ್ಯರೆಂದು ಗರ್ವಪಡುತ್ತಿದ್ದ. ಅವನು ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ರವರನ್ನು ಅಪಹಾಸ್ಯ ಮಾಡುವುದೆಂದರೆ ತನ್ನ ಗುರುಗಳೊಡನೆ ಹಾಸ್ಯ ಮಾಡಿದಂತೆಯೇ ಸರಿ. ತನ್ನ ಗುರುಗಳ ವಿರೋಧ ಮಾಡಿದಂತೆಯೇ ಆಯಿತು. ಹಝ್ರತ್ ಮಸೀಹ್ ಮೌಊದ್(ಅ) ಅಬ್ದುಲ್ ಹಖ್ ಅವರನ್ನು ಸಂಬೋಧಿಸಿ ಹೇಳುತ್ತಾರೆ. "ಯಾರ ಶಿಷ್ಯನ ಕುರಿತು ನೀವು ಗೌರವ ತೋರುವವರಾಗಿದ್ದೀರಿ. ಅವರೇ ಸಾಕ್ಷ್ಯ ನೀಡಿರುವರು. ನೀವು ಸುಳ್ಳುಗಾರರು ಮತ್ತು ಗುಲಾಂ ಅಹ್ಮದ್ ಖಾದಿಯಾನಿ, ಸತ್ಯವಂತರೆಂದು, ತನ್ನ ಗುರುಗಳಾದ ಅಬ್ದುಲ್ಲ ಗಝ್ನವಿ ಅವರ ಮಾತನ್ನು ನಂಬದಿದ್ದರೆ ಧಿಕ್ಕಾರವಿದೆ ನಿಮ್ಮ ಮೇಲೆ. ಏಕೆಂದರೆ ನೀವೆನೆಲ್ಲ ಆಗಿದ್ದೀರಿ. ಅದರಲ್ಲಿ ನಿಮ್ಮ ಗುರುಗಳ ಫಲವಿದೆ. ಅವರನ್ನು ಸುಳ್ಳಾಗಿಸಿದ್ದೀರೆಂದರೆ ನೀವು ನಾಲಾಯಕ್ಕೂ ಶಿಷ್ಯವೇ ಸರಿ. **(ತೊಹ್‌ಫ ಗಝ್ನವಿಯ, ರೂಹಾನಿ ಖಝಾಈನ್, ಸಂಪುಟ–15, ಪುಟ–546)**

ಮೌಲ್ವಿ ಅಬ್ದುಲ್ ಗಝ್ನವಿ ಕುರಿತು "ಹಯಾತೆ ತಯ್ಯಬ" ಲೇಖಕರು, ಶೇಖ್ ಅಬ್ದುಲ್ ಖಾದರ್ ಸಾಹಿಬ್ ಮಾಜಿ ಸೌದಾಗರ್‌ಮಲ್ ಬರೆಯುತ್ತಾರೆ. "ಈ ಸಜ್ಜನ ಪುರುಷರು ಗಝ್ನಿ (ಅಫಗಾನಿಸ್ತಾನ) ಜಿಲ್ಲೆಯ ಒಂದು ಗ್ರಾಮವಾದ ಗೇರು ಎಂಬಲ್ಲಿ ಜನಿಸಿದರು. ಅವರು ಆರಾಧನಾ ಪುರುಷರು ಮತ್ತು ಯಾವಾಗಲೂ ದೇವಸ್ಮರಣೆಯಲ್ಲಿ ತಲ್ಲೀನರಾಗುತ್ತಿದ್ದರು. ರಸೂಲುಲ್ಲಾಹ್(ಸ) ರವರ ಪ್ರೇಮಿಯಾಗಿದ್ದರು. ಆದುದರಿಂದ ಒಂದು ದಿವ್ಯ ಸ್ವಪ್ನದಲ್ಲಿ ಅವರು ಸಹೀ ಬುಖಾರಿಯನ್ನು ಧೂಳಿನಲ್ಲಿ ಕಂಡರು ಮತ್ತು ಸ್ವಪ್ನದಲ್ಲಿಯೇ ಅದನ್ನು ಸ್ವಚ್ಛಗೊಳಿಸಿದರು. ಈ ಸ್ವಪ್ನದ ನಂತರ ಅವರು ಸಹೀ ಬುಖಾರಿಯ ಅಧ್ಯಯನ ಮಾಡಲು ಪ್ರಾರಂಭಿಸಿದರು. ಗಝ್ನಿಯ ದುಷ್ಕರ್ಮಿ  ಮೌಲ್ವಿಗಳು ಅವರನ್ನು ಈ ಸ್ಥಿತಿಯಲ್ಲಿ ಕಂಡು ಅವರನ್ನು ವಹಾಬಿ ಎಂದು ಪ್ರಚುರಪಡಿಸಿ ಅವರ ಮೇಲೆ ಅವಿಶ್ವಾಸ(ಕುಫ್ರ್) ದ ಫತ್ವಾ ಹೊರಡಿಸಿದರು. ಮತ್ತು ಮುಖಕ್ಕೆ ಕಪ್ಪು ಮಸಿ ಬಳಿದು ಕತ್ತೆ ಸವಾರಿ ನಡೆಸಿ ಗಡಿಪಾರು ಮಾಡಿದರು. ಆಗ ಅವರು ಹಿಜ್ರತ್ ಕೈಗೊಂಡು ಅಮೃತ್ಸರಕ್ಕೆ ಬಂದರು. (ಪುಟ 2139).

ಸಯ್ಯದ್‌ನಾ ಹಝ್ರತ್ ಮುಸ್ಲಿಹ್ ಮೌಊದ್(ರ) ತನ್ನ ಒಂದು ಕುತುಬಾದಲ್ಲಿ ಅವರ ಬಗ್ಗೆ ವಿವರ ನೀಡುತ್ತಾ ಹೇಳುತ್ತಾರೆ. ಯಾವ ರೀತಿ ಧರ್ಮ ನಿಷ್ಠರನ್ನು ಭಿನ್ನ ಮಾತುಗಳಲ್ಲಿ ತೊಡಗಿಸಿ ಕಾಲದ ಆಡಳಿತಗಾರರನ್ನು ಹುರಿದುಂಬಿಸಿ ಕಷ್ಟ ಕಾರ್ಪಣ್ಯಗಳನ್ನು ಒಡ್ಡಿದರು. ಅವರು ಹೇಳುತ್ತಾರೆ. ಹಝ್ರತ್ ಅಬ್ದುಲ್ಲ ಸಾಹಿಬ್ ಗಝ್ನಿ ಅವರನ್ನು ಅಫಗಾನಿಸ್ತಾನದಿಂದ ಗಡಿಪಾರು ಮಾಡಿ, ಕತ್ತೆಯ ಮೆರವಣಿಗೆ ಮಾಡಿಸಿದರು. ಅವರ ಮುಖಕ್ಕೆ ಕಪ್ಪು ಮಸಿ ಬಳಿಯಲಾಯಿತು. ಭಿನ್ನತೆ ಎಂದರೆ ಆಮೀನ್ ಧ್ವನಿ ಸಹಿತ ಹೇಳುವರು. ಕೈಗಳನ್ನು ಎತ್ತುವುದು (ರಫ ಯದೈನ್) ಮತ್ತು ತರಹುದ್‌ನಲ್ಲಿ ಬೆರಳೆತ್ತುವುದು ಹಿಂಬಾಲಿಸುತ್ತಿದ್ದರು. ಅದೇ ರೀತಿ ಇನ್ನೂ ಹಲವು ಸಣ್ಣ ಪುಟ್ಟ ಭಿನ್ನತೆಗಳಿವೆ. ಅದನ್ನು ನೆಪವಾಗಿಸಿ ಧರ್ಮನಿಷ್ಠರನ್ನು ಪೀಡನೆಗೆ ಒಳಗಾಗಿಸಿದರು. ಆದರೆ ಪೀಡನೆ ನೀಡಿದವರು ಅವರನ್ನು ಆಧರಿಸುವವರೇ ಆಗಿದ್ದರು.     (ಖುತ್‌ಬಾತೆ ಮಹ್ಮೂದ್, ಸಂಪುಟ–14, ಪುಟ–237, ಖುತ್‌ಬ ಜುಮುಅ 6 ಅಕ್ಟೋಬರ್ 1933).

ಹಝ್ರತ್ ಮಸೀಹ್ ಮೌಊದ್(ಅ) ತನ್ನ ದಾವೆಯ ಪೂರ್ವದಲ್ಲಿ ಎರಡು ಸಲ ಅವರೊಡನೆ ಭೇಟಿಯಾದ ವಿವರ ನೀಡುತ್ತಾ ಹೇಳುತ್ತಾರೆ. ಅವರು ಜೀವಂತವಾಗಿರುವಾಗ ಒಮ್ಮೆ ಖೈರ್‌ದಿ ಸ್ಥಳ (ಅಮೃತ್ಸರ ಸಮೀಪದಲ್ಲಿರುವ ಒಂದು ಗ್ರಾಮ), ಇನ್ನೊಮ್ಮೆ ಅಮೃತ್ಸರದಲ್ಲಿ ಅವರೊಂದಿಗೆ ನನ್ನ ಭೇಟಿಯಾಯಿತು.  ನಾನು ಅವರೊಡನೆ ಹೇಳಿದೆ. ತಾವು ದೇವವಾಣಿ ಹೊಂದಿದವರಾಗಿದ್ದೀರಿ. ನಮ್ಮ ಒಂದು ಧ್ಯೇಯವಿದೆ.  ಅದಕ್ಕಾಗಿ ನೀವು ಪ್ರಾರ್ಥಿಸಿರಿ. ಆದರೆ ನಾನು ಈಗ ನಿಮಗೆ ಏನು ಧ್ಯೇಯ ಎಂದು ಹೇಳಲಾರೆ. ಅವರು ಹೇಳಿದರು. **"ದರ್‌ಪೋಶಿದ ದಾಶ್ತನ್ ಬರ್ಕತ್ ಅಸ್ತ್ ವಮನ್ ಇನ್‌ಶಾಅಲ್ಲಾಹ್ ದುಆ ಖಾಹಮ್ ಕರ್‌ದೋ ಇಲ್ಹಾಮ್ ಅಮರ್ ಇಖ್ತಿಯಾರಿ ನೇಸ್ತ್"** ನನ್ನ ಧ್ಯೇಯವಾಗಿತ್ತು. ಮುಹಮ್ಮದ್ ಮುಫಫಾ(ಸ) ಅವರ ಧರ್ಮ ದಿನೇ ದಿನೇ ಅವನತಿಗೆ ಗುರಿಯಾಗುತ್ತಿದೆ. ಅಲ್ಲಾಹನ ಪುಷ್ಟಿ ಅದಕ್ಕೆ ದೊರೆಯಬೇಕು. ಅನಂತರ ನಾನು ಖಾದಿಯಾನಿಗೆ ತೆರಳಿದೆ. ಕೆಲವು ದಿನಗಳ ನಂತರ ಅಂಚೆ ಕಛೇರಿಯಿಂದ ಅವರ ಪತ್ರ ನನಗೆ ದೊರೆಯಿತು. ಅದರಲ್ಲಿ ಬರೆಯಲಾಗಿತ್ತು. "ಈಂ ಆಜಿಝ್ ಬರಾಯೆ ಶುಮಾ ದುಆ ಕರದ್ ಏ ಬೂದ್–ಅಲ್‌ಖಾಶದ್ **–ವಸಸುರ್‌ನಾ ಅಲಲ್ ಔಮಿಲ್ ಕಾಫಿರೀನ್**–ಪಖೀರ್ ರಾಕುಂ ಇತ್ತಿಫಾಖ್ ಮೀ ಉಫ್ತದ್ ಕೆ ಬದೀಂ ಜಲ್ದೀ ಇಲ್ ಖಾಶೂದ್– ಈಂ ಅಝ್ ಇಖ್ಲಾಸ್ ಶಿಮಾ ಮೇ ಬೀನಮ್"

(ಹಯಾತ್ ತಯ್ಯಬಾ, ಶೇಖ್ ಅಬ್ದುಲ್ ಖಾದರ್ ಸಾಹಿಬ್, ಸೌದಾಗರ್ ಮಿಲ್, ಪುಟ–539)

ಫಾರ್ಸಿ ಬರಹದ ಅನುವಾದ: ಧೈಯವು ಗೌಪ್ಯವಾಗಿಡುವುದರಲ್ಲಿಯೇ

*(ಪುಟ 10 ರಲ್ಲಿ ಮುಂದುವರಿಸಲಾಗಿದೆ)*

# ಖುತ್‌ಬ ಜುಮುಅ

**ನ್ಯಾಯಾಂಗದಲ್ಲಿ ಸಮಾನತೆ ಮತ್ತು ನೀತಿಗೆ ಬೆಲೆಕೊಡಲು ಹಝ್ರ‌ತ್ ಉಮರ್(ರ) ಉಪದೇಶಿಸಿದ್ದರು.**

**ಹಝ್ರ‌ತ್ ಉಮರ್(ರ) ಇಫ್‌ತಾದ ಕರ್ಮಶಾಸ್ತ್ರ ವಿಭಾಗವನ್ನು ಸಹ ಜಾರಿಯಲ್ಲಿರಿಸಿದರು. ಶರೀಅತಿನ ಕಾನೂನನ್ನು ಅರಿಯಲಿಕ್ಕಾಗಿ ಕರ್ಮಶಾಸ್ತ್ರದ ವಿಭಾಗವನ್ನು ಸ್ಥಾಪಿಸಿದ್ದರು. ಕೆಲವು ಸಹಾಬರನ್ನು ಅದಕ್ಕಾಗಿ ನೇಮಕ ಮಾಡಿದರು.**

**ಹಝ್ರ‌ತ್ ಉಮರ್(ರ) ಶಾಂತಿಯನ್ನು ನೆಲೆಸಲಿಕ್ಕಾಗಿ ಪೊಲೀಸ್ ವಿಭಾಗವನ್ನು ಸ್ಥಾಪಿಸಿದರು.**

**ರಸೂಲುಲ್ಲಾಹ್(ಸ) ರವರ ಪ್ರೀಯ ಬದರಿ ಹಾಗೂ ನಿಷ್ಠಾವಂತ ಸಹಾಬಿ ಖಲೀಫ ರಾಶಿದ, ಫಾರೂಖೇ ಆಝಮ್ ಹಝ್ರ‌ತ್ ಉಮರ್ ಬಿನ್ ಖತ್ತಾಬ್(ರ)ರವರ ಪವಿತ್ರ ಜೀವನ ಚರಿತ್ರೆಯ ಪ್ರಸ್ತಾವನೆ**

**ಹಝ್ರ‌ತ್ ಉಸ್ಮಾನ್(ರ) ಹೇಳಿದರು: ಯಾರಾದರೂ ಶಕ್ತಿಶಾಲಿ ಮತ್ತು ವಿಶ್ವಾಸಯೋಗ್ಯನಾದ ವ್ಯಕ್ತಿಯನ್ನು ನೋಡಲು ಬಯಸುವರಾದರೆ, ಹಝ್ರ‌ತ್ ಉಮರ್‌ರನ್ನು(ರ) ನೋಡಲಿ.**

**ಎಲೈ ಜನರೇ, ಉಮರ್ ಮತ್ತು ಅವರ ಕುಟುಂಬಕ್ಕೆ ಅವರು ನಿಕಟ ಸಂಬಂಧಿಕರಾದರೂ ದೂರದ ಸಂಬಂಧಿಕರಾದರೂ ಅವರಿಗೆ ಸಾಮಾನ್ಯ ಮುಸ್ಲಿಮರಿಗೆ ಇರುವ ಅದೇ ಹಕ್ಕು ಲಭಿಸುವುದು. ಅದಕ್ಕಿಂತ ಹೆಚ್ಚು ಇಲ್ಲ. (ಹಝ್ರ‌ತ್ ಉಮರ್(ರ))**

**ಹಝ್ರ‌ತ್ ಉಮರ್(ರ)ರವರ ಸುಮಾರು 44 ಅವ್ವಲಿಯಾತ್‌ನ ಪ್ರಸ್ತಾವನೆ**

**ಆರು(6) ದಿವಂಗತರಾದ ನೇಶ್ಯದ ಸನ್ಮಾನ್ಯ ಸುರಿಪ್‌ತೋ ಹಾದಿ ಸಿಸ್‌ವೋಯೋ ಸಾಹಿಬ್, ನಂಕಾನ ಜಿಲ್ಲೆಯ ಅಲ್ಲಾದಾದ್ ಸಾಹಿಬ್ ಘೋಡೂರ ಮಗನಾದ ಚೌಧರಿ ಬಶೀರ್ ಅಹ್ಮದ್ ಭಟ್ಟಿ ಸಾಹಿಬ್, ರಬ್ವದ ದಾರುನ್ನಸ್‌ರ್ ಗರ್ಬಿಯ ಚೌಧರಿ ಅಲ್ಲಾ ರಖಾ ಮಲ್‌ಹಿ ಸಾಹಿಬ್‌ರ ಮಗನಾದ ಹಮೀದುಲ್ಲಾಹ್ ಖ಼ಾದಿಂ ಸಾಹಿಬ್, ಪಿಶಾವರಿನ ಮುಹಮ್ಮದ್ ಅಲಿ ಖ಼ಾನ್ ಸಾಹಿಬ್, ಅಮೇರಿಕದ ಮೇರಿಲ್ಯಾಂಡಿನ ಸಾಹಿಬ್‌ಝಾ಼ದ ಮಹದಿ ಲತೀಫ್ ಸಾಹಿಬ್ ಮತ್ತು ಶಹ್‌ಝಾ಼ದ ಅಕ್ಬರ್ ಸಾಹಿಬ್‌ರ ಮಗನಾದ ಫೈಝಾ಼ನ್ ಅಹ್ಮದ್ ಸಮೀರ್ ಸಾಹಿಬ್‌ರವರ ಸದ್ಗುಣಗಳ ಪ್ರಸ್ತಾವನೆ ಹಗೂ ನಮಾಝೆ ಜನಾಝ ನಿರ್ವಹಣೆ**

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರ‌ತ್ ಮಿರ್ಝಾ಼ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **09–07–2021** ರಂದು ನೀಡಿದ **ಜುಮುಅ ಖುತ್‌ಬ**

أَشْهَدُ أَنْ لَّا إِلٰهَ إِلَّا اللّٰهُ وَحْدَهُ لَا شَرِيكَ لَهُ وَأَشْهَدُ أَنَّ مُحَمَّدًا عَبْدُهُ وَرَسُولُهُ
أَمَّا بَعْدُ فَأَعُوذُ بِاللّٰهِ مِنَ الشَّيْطٰنِ الرَّجِيمِ - بِسْمِ اللّٰهِ الرَّحْمٰنِ الرَّحِيمِ
اَلْحَمْدُ لِلّٰهِ رَبِّ الْعَالَمِيْنَ ۔ اَلرَّحْمٰنِ الرَّحِيْمِ ۔ مٰلِكِ يَوْمِ الدِّيْنِ ۔
اِيَّاكَ نَعْبُدُ وَاِيَّاكَ نَسْتَعِيْنُ ۔ اِهْدِنَا الصِّرَاطَ الْمُسْتَقِيْمَ ۔
صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ ۔

ಹಝ್ರ‌ತ್ ಉಮರ್ ರಝಿಯಲ್ಲಾಹುರ ಪ್ರಸ್ತಾಪ ನಡೆಯುತ್ತಿತ್ತು. ನ್ಯಾಯಾಂಗ ವಿಭಾಗದ ಆರಂಭದ ಬಗ್ಗೆ ಹೀಗೆ ವರದಿಯಿದೆ: ಹಝ್ರ‌ತ್ ಉಮರ್(ರ) ಖಝಾ಼ ವಿಭಾಗವನ್ನು ಜಾರಿಗೊಳಿಸಿದರು. ಎಲ್ಲ ಜಿಲ್ಲೆಗಳಲ್ಲಿ ನ್ಯಾಯಾಲಯವನ್ನು ಸ್ಥಾಪಿಸಿದರು. ಖಾಝಿ಼ಗಳನ್ನು ಅಥವಾ ನ್ಯಾಯಾಧೀಶರನ್ನು ನಿಶ್ಚಯಿಸಿದರು. ಹಝ್ರ‌ತ್ ಉಮರ್(ರ) ಖಝಾ಼ದ ಕುರಿತು ಎಂದರೆ ನ್ಯಾಯಾಂಗದ ಕುರಿತು ಕಾನೂನು ಆಜ್ಞೆಗಳನ್ನು ಜಾರಿಗೊಳಿಸಿದರು. (ಅಲ್‌ಫಾರೂಖ್, ಶಿಬ್ಲಿ ನುಮಾನ, ಪುಟ–195–198, ಇಸ್ಲಾಮಿಯಾತ್ ಕರಾಚಿ 2004)

ಖಾಝಿ಼ಗಳನ್ನು ಆಯ್ಕೆ ಮಾಡುವಾಗ ಫಿಖದ ಎಂದರೆ ಕರ್ಮಶಾಸ್ತ್ರ ಪಂಡಿತರನ್ನು ಆಯ್ಕೆ ಮಾಡಿದರು. ಹಝ್ರ‌ತ್ ಉಮರ್(ರ) ಅಷ್ಟಕ್ಕೆ ತೃಪ್ತರಾಗುತ್ತಿರಲಿಲ್ಲ. ಬದಲಾಗಿ ಅವರ ಪರೀಕ್ಷೆ ನಡೆಸುತ್ತಿದ್ದರು. ತಪ್ಪು ತೀರ್ಮಾನವನ್ನು ಮಾಡದಿರಲಿಕ್ಕಾಗಿ ಖಾಝಿ಼ಗಳಿಗೆ ಉತ್ತಮ ಸಂಬಳವನ್ನು ನಿಶ್ಚಯಿಸಿದ್ದರು. ಯಾರನ್ನೂ ಭಯಪಡದಿರಲು ಮತ್ತು ಯಾರ ಪ್ರಭಾವಕ್ಕೂ ಒಳಪಡದಿರಲಿಕ್ಕಾಗಿ ಶ್ರೀಮಂತ ಮತ್ತು ಗೌರವಾನ್ವಿತ ವ್ಯಕ್ತಿಯನ್ನು ಖಾಝಿ಼ಯನ್ನಾಗಿ ನಿಶ್ಚಯಿಸುತ್ತಿದ್ದರು. ನ್ಯಾಯಾಂಗದಲ್ಲಿ ಸಮಾನತೆ ಮತ್ತು ನೀತಿಗೆ ಬೆಲೆಕೊಡಲು ಹಝ್ರ‌ತ್ ಉಮರ್(ರ) ಉಪದೇಶಿಸಿದ್ದರು. ಒಂದು ಬಾರಿ ಹಝ್ರ‌ತ್ ಉಬಯ್ಯ್ ಬಿನ್ ಕಅ್‌ಬ್‌ರೊಡನೆ(ರ) ಹಝ್ರ‌ತ್ ಉಮರ್‌ರಿಗೆ(ರ) ಒಂದು ಜಗಳವಿತ್ತು. ಹಝ್ರ‌ತ್ ಝೈದ್ ಬಿನ್ ಸಾಬಿತ್‌ರ ನ್ಯಾಯಾಂಗದಲ್ಲಿ ಹಝ್ರ‌ತ್ ಉಬಯ್ಯ್(ರ) ಮೊಕದ್ದಮೆ ಹೂಡಿದರು. ಹಝ್ರ‌ತ್ ಉಮರ್(ರ) ಮತ್ತು ಉಬಯ್ಯ್‌ರನ್ನು(ರ) ಝೈದ್(ರ) ಕರೆಯಿಸಿದರು. ಹಝ್ರ‌ತ್ ಉಮರ್‌ರಿಗೆ(ರ) ಝೈದ್(ರ) ಗೌರವ ಸೂಚಿಸಿದಾಗ ಹಝ್ರ‌ತ್ ಉಮರ್(ರ) ಹೇಳಿದರು: ಇದು ನಿನ್ನ ಮೊದಲ ಅನೀತಿಯಾಗಿದೆ. ಹೀಗೆ ಹೇಳಿಕೊಂಡು ಉಬಯ್ಯ್‌ರೊಡನೆ(ರ) ಹೋಗಿ ಕುಳಿತುಕೊಂಡರು. (ಅಲ್‌ಫಾರೂಖ್, ಶಿಬ್ಲಿ ನುಮಾನ, ಪುಟ–199–200, ಇಸ್ಲಾಮಿಯಾತ್ ಕರಾಚಿ 2004)

ಎಂದರೆ ನಾವಿಬ್ಬರು ಉಭಯ ಕಕ್ಷಿಗಾರರಾಗಿರುವರು. ಇಬ್ಬರನ್ನು ಎರಡು ಪಕ್ಷದವರನ್ನಾಗಿ ಕಾಣಬೇಕು. ಇಬ್ಬರನ್ನು ಒಟ್ಟಿಗೆ ಕುಳ್ಳಿರಿಸಬೇಕು. ನನಗೆ ವಿಶೇಷವಾದ ಗೌರವ ಕೊಡಬಾರದು.

ಹಝ್ರ‌ತ್ ಮುಸ್ಲಿಹ್ ಮೌಊದ್(ರ) ಈ ಘಟನೆಯನ್ನು ಪ್ರಸ್ತಾಪಿಸುತ್ತಾ ಹೇಳುತ್ತಾರೆ: ಹಝ್ರ‌ತ್ ಉಬಯ್ಯ ಬಿನ್ ಕಅ್‌ಬ್‌ರೊಡನೆ(ರ) ಹಝ್ರ‌ತ್ ಉಮರರ(ರ) ಒಂದು ಜಗಳವುಂಟಾಯಿತು. ಖಾಝಿ಼ಯ ಬಳಿ ವಿಷಯವನ್ನು ಇರಿಸಲಾಯಿತು. ಅವರು ಹಝ್ರ‌ತ್ ಉಮರ್‌ರನ್ನು(ರ) ಕರೆದರು. ಹಝ್ರ‌ತ್ ಉಮರ್(ರ) ಬಂದಾಗ, ಖ಼ಲೀಫ ಎಂಬ ಕಾರಣದಿಂದ ಅವರು ಕುಳಿತಲ್ಲಿಂದ ಎದ್ದು ನಿಂತು ಹಝ್ರ‌ತ್ ಉಮರ್‌ರಿಗೆ(ರ) ಜಾಗ ಬಿಟ್ಟುಕೊಡಲು ಹೋದರು. ಹಝ್ರ‌ತ್ ಉಮರ್(ರ) ಎದುರು ಕಕ್ಷಿಗಾರರಾದ ಹಝ್ರ‌ತ್ ಉಬಯ್ಯ್‌ರೊಡನೆ ಹೋಗಿ ಕುಳಿತುಕೊಂಡರು ಮತ್ತು ಖಾಝಿ಼ಯೊಡನೆ ಹೇಳಿದರು: ಇದು ನೀವು ಮಾಡಿರುವ ಮೊದಲ ಅನೀತಿಯಾಗಿದೆ. ಈ ಸಮಯದಲ್ಲಿ ನನ್ನ ಮತ್ತು ನನ್ನ ಎದುರು ಕಕ್ಷಿಗಾರರ ನಡುವೆ ಯಾವುದೇ ವ್ಯತ್ಯಾಸವನ್ನು ಉಂಟುಮಾಡಬಾರದು. (ಅಹ್ಮದೀಯತ್ ಯಾನಿ ಹಖೀಖಿ ಇಸ್ಲಾಮ್, ಅನ್ವಾರುಲ್ ಉಲೂಮ್, ಸಂಪುಟ–8, ಪುಟ–300)

ಹಝ್ರ‌ತ್ ಉಮರ್(ರ) ಇಫ್‌ತಾದ ಕರ್ಮಶಾಸ್ತ್ರ ವಿಭಾಗವನ್ನು ಸಹ ಜಾರಿಯಲ್ಲಿರಿಸಿದರು. ಶರೀಅತಿನ ಕಾನೂನನ್ನು ಅರಿಯಲಿಕ್ಕಾಗಿ ಕರ್ಮಶಾಸ್ತ್ರದ ವಿಭಾಗವನ್ನು ಸ್ಥಾಪಿಸಿದ್ದರು. ಕೆಲವು ಸಹಾಬರನ್ನು ಅದಕ್ಕಾಗಿ ನೇಮಕ ಮಾಡಿದರು. ಅವರಲ್ಲದೇ ಬೇರೆ ಯಾರಿಂದಲೂ ಫತ್ವ ಅಥವಾ ಧರ್ಮಶಾಸ್ತ್ರ ವಿಧಿಯನ್ನು ಪಡೆಯಲಾಗದು ಎಂದು ಹೇಳಿದರು. ಹೀಗೆ ಫತ್ವಾ ನೀಡುವವರಲ್ಲಿ ಹಝ್ರ‌ತ್ ಅಲಿ(ರ), ಹಝ್ರ‌ತ್ ಉಸ್ಮಾನ್(ರ), ಹಝ್ರ‌ತ್ ಮುಆಧ಼್ ಬಿನ್ ಜಬಲ್(ರ), ಹಝ್ರ‌ತ್ ಅಬ್ದುರ್ರಹ್ಮಾನ್ ಬಿನ್ ಔಫ್(ರ), ಹಝ್ರ‌ತ್ ಉಬಯ್ಯ ಬಿನ್ ಕಅ್‌ಬ್(ರ), ಹಝ್ರ‌ತ್ ಝೈದ್ ಬಿನ್ ಸಾಬಿತ್(ರ), ಹಝ್ರ‌ತ್ ಅಬೂಹುರೈರ(ರ), ಹಝ್ರ‌ತ್ ಅಬೂದರ್‌ದ(ರ) ಇದ್ದರು. ಈ ಜನರಲ್ಲದೆ ಬೇರೆ ಯಾರಾದರೂ ವಿಧಿಸಿದರೆ, ಹಝ್ರ‌ತ್ ಉಮರ್(ರ) ಅದನ್ನು ಸ್ವೀಕರಿಸುತ್ತಿರಲಿಲ್ಲ. ಹಝ್ರ‌ತ್ ಉಮರ್(ರ) ಈ ಮುಫ್ತಿಗಳನ್ನು ಸಹ ಪದೇ ಪದೇ ಪರೀಕ್ಷಿಸುತ್ತಿದ್ದರು.

(ಅಲ್‌ಫಾರೂಖ್, ಶಿಬ್ಲಿ ನುಮಾನಿ, ಪುಟ–202, ಇಸ್ಲಾಮಿಯಾತ್ ಕರಾಚಿ 2004)

ಹಝ್ರತ್ ಮುಸ್ಲಿಹ್ ಮೌಊದ್(ರ) ಇದರ ಬಗ್ಗೆ ಹೇಳುತ್ತಾರೆ: ಒಂದು ವಿಭಾಗ ಕರ್ಮಶಾಸ್ತ್ರ ವಿಧಿಯದ್ದಾಗಿದೆ. ಹಝ್ರತ್ ಪೈಗಂಬರ್(ಸ) ಮತ್ತು ಹಝ್ರತ್ ಪೈಗಂಬರ್‌ರ(ಸ) ನಂತರ ಅವರ ಕೆಲವು ಸಹಾಬರು ಖಲೀಫರ ಕಾಲದಲ್ಲಿ, ನಿಯಮವೇನಾಗಿತ್ತು ಎಂದರೆ, ಶರೀಅತ್ ಮತ್ತು ಕರ್ಮಶಾಸ್ತ್ರದ ವಿಧಿ ನೀಡುವುದಕ್ಕೆ ಎಲ್ಲರಿಗೂ ಅನುಮತಿ ಇರಲಿಲ್ಲ. ಹಝ್ರತ್ ಉಮರ್(ರ) ಎಷ್ಟು ಮುನ್ನೆಚ್ಚರಿಕೆ ವಹಿಸುತ್ತಿದ್ದರು ಎಂದರೆ, ಒಬ್ಬ ಸಹಾಬಿ ಬಹುಶಃ ಅಬ್ದುಲ್ಲಾಹ್ ಬಿನ್ ಮಸ್‌ಊದ್(ರ) ಆಗಿರಬೇಕು. ಧಾರ್ಮಿಕ ಜ್ಞಾನದಲ್ಲಿ ಅವರು ತುಂಬ ಅರಿವುಳ್ಳ ಪರಿಣತ ಮತ್ತು ಶ್ರೇಷ್ಠ ವ್ಯಕ್ತಿಯಾಗಿದ್ದರು. ಅವರು ಒಂದು ಬಾರಿ ಯಾವುದೇ ಒಂದು ಧರ್ಮವಿಧಿಯ ಬಗ್ಗೆ ಜನರಿಗೆ ಹೇಳಿದರು. ಈ ಸುದ್ದಿ ಹಝ್ರತ್ ಉಮರ್‌ರಿಗೆ(ರ) ತಲುಪಿತು. ಹಝ್ರತ್ ಉಮರ್(ರ) ತಕ್ಷಣವೇ ಅವರನ್ನು ಕರೆದು ಇದರ ಬಗ್ಗೆ ಪ್ರಶ್ನಿಸಿದರು. ನೀವು ಅಮೀರರೇ? ಅಥವಾ ಅಮೀರ್ ನಿಮ್ಮನ್ನು ಫತ್ವ ನೀಡಲು ನಿಶ್ಚಯಿಸಿರುವರೇ? ಎಂದು ಕೇಳಿದರು. ಸತ್ಯದಲ್ಲಿ, ಪ್ರತಿಯೊಬ್ಬರಿಗೂ ಫತ್ವ ನೀಡುವ ಹಕ್ಕಿದ್ದರೆ, ಅನೇಕ ತೊಂದರೆಗಳು ಉಂಟಾಗಬಹುದು. ಜನಸಾಮಾನ್ಯರು ಹಲವಾರು ಫತ್ವಗಳಿಂದ ವಿಪತ್ತಿಗೆ ತುತ್ತಾಗುವರು. ಏಕೆಂದರೆ, ಕೆಲವು ಬಾರಿ ಒಂದೇ ಸಂಗತಿಯ ಬಗ್ಗೆ ಎರಡು ವ್ಯತ್ಯಸ್ತ ವಿಧಿಗಳು ಇರಬಹುದು. ಎರಡೂ ಸರಿಯಾಗಿರುತ್ತವೆ. ಎಂದರೆ, ಸಂದರ್ಭಾನುಸಾರ, ಸ್ಥಿತಿಗತಿಗಳನ್ನು ಮುಂದಿರಿಸಿಕೊಂಡು ಫತ್ವ ಅಥವಾ ವಿಧಿ ನೀಡಲಾಗುತ್ತದೆ. ವಿಷಯವನ್ನು ಆಳವಾಗಿ ನೋಡಿದರೆ ಅದರಲ್ಲಿ ಮೃದುತ್ವವಿರುತ್ತದೆ. ಎಂದರೆ ಇಂತಹ ಸ್ಥಿತಿಯಲ್ಲಿ ವಿಧಿ ಹೀಗಿರುವುದು, ಅಂತಹ ಸ್ಥಿತಿಯಲ್ಲಿ ವಿಧಿ ಹೀಗಿರುವುದು ಎಂಬ ಸ್ಥಿತಿ ಇರುತ್ತದೆ. ಜನಸಾಮಾನ್ಯರಿಗೆ ಅದನ್ನು ತಿಳಿಯಲು ಕಷ್ಟವಾಗುತ್ತದೆ. ಎರಡೂ ಹೇಗೆ ಸರಿಯಾಗುವುವು ಎಂದು ಯೋಚಿಸುತ್ತಾರೆ. ಆದ್ದರಿಂದ ಅವರು ವಿಪತ್ತಿಗೆ ಅಥವಾ ಪರೀಕ್ಷಣೆಗೆ ತುತ್ತಾಗುತ್ತಾರೆ. (ಖಿತಾಬ್ ಜಲ್ಸ ಸಾಲಾನ 17–03–1919, ಅನ್ವಾರುಲ್ ಉಲೂಮ್, ಸಂಪುಟ–4, ಪುಟ–404)

ಅದೇ ರೀತಿಯಲ್ಲಿ ಪೊಲೀಸ್ ವಿಭಾಗವನ್ನು ಜಾರಿಗೊಳಿಸಿದರು. ಹಝ್ರತ್ ಉಮರ್(ರ) ಶಾಂತಿಯನ್ನು ನೆಲೆಸಲಿಕ್ಕಾಗಿ ಪೊಲೀಸ್ ವಿಭಾಗವನ್ನು ಸ್ಥಾಪಿಸಿದರು. ಈ ವಿಭಾಗಕ್ಕೆ ಶಾಂತಿ ಸ್ಥಾಪನೆ ಮತ್ತು ಮಾರುಕಟ್ಟೆಯ ಮೇಲ್ನೋಟದ ಅಧಿಕಾರಗಳು ನೀಡಲಾಗಿದ್ದುವು. ಎಂದರೆ ಆಜ್ಞೆಗಳ ಪ್ರಕಾರ ಜನರು ನಡೆಯುತ್ತಿದ್ದಾರೆಯೇ ಎಂದು ನೋಡಲಾಗುತ್ತಿತ್ತು. ಯಾರದಾದರೂ ಹಕ್ಕುಗಳನ್ನು ಕಸಿಯಲಾಗುತ್ತಿದ್ದರೆ ಅದನ್ನು ಈಡೇರಿಸಿ ಕೊಡಿಸುವುದು, ಖಾಝಿಯ ಬಳಿಗೆ ವಿಷಯ ಹೋಗದೇ ಇರುವ ತನಕ, ಶಾಂತಿ ಸ್ಥಾಪನೆ ಮತ್ತು ಮಾರುಕಟ್ಟೆಯ ಮೇಲ್ನೋಟ ಇತ್ಯಾದಿ ಎಲ್ಲ ತರದ ಮೇಲ್ನೋಟಗಳು ಪೊಲೀಸಿನ ಅಧಿಕಾರದಲ್ಲಿ ಇದ್ದುವು. ಹಝ್ರತ್ ಉಮರ್(ರ) ಜೈಲುಗಳನ್ನು ಸಹ ನಿರ್ಮಿಸಿದರು. ಅದಕ್ಕಿಂತ ಮುಂಚೆ ಜೈಲುಗಳು ರೂಢಿಯಲ್ಲಿರಲಿಲ್ಲ. ಅಪರಾಧಿಗಳಿಗೆ ಕಠಿಣ ಶಿಕ್ಷೆಗಳನ್ನು ಸಹ ನೀಡಲಾಗುತ್ತಿದ್ದುವು.

ಅದೇ ರೀತಿಯಲ್ಲಿ ಬೈತುಲ್ ಮಾಲಿನ ಸ್ಥಾಪನೆ. ಹಝ್ರತ್ ಉಮರ್‌ರಿಗೆ(ರ) ಮುಂಚೆ ಸಂಪತ್ತು ಬಂದ ಕೂಡಲೆ ವಿತರಿಸಲಾಗುತ್ತಿತ್ತು. ಹಝ್ರತ್ ಅಬೂಬಕರರ(ರ) ಕಾಲಘಟ್ಟದಲ್ಲಿ ಒಂದು ಮನೆಯನ್ನು ಖರೀದಿ ಮಾಡಿಕೊಂಡು ಬೈತುಲ್‌ಮಾಲಿಗೆ ವಖ್ಫ್ ಮಾಡಲಾಗಿತ್ತು. ಆದರೆ ಅದು ಮುಚ್ಚಿಯೇ ಇಡಲಾಗಿತ್ತು. ಏಕೆಂದರೆ ಸಂಪತ್ತು ಬಂದ ಕೂಡಲೆ ವಿತರಿಸಲಾಗುತ್ತಿತ್ತು. ಹಿಜರೀ 15ರಲ್ಲಿ ಬಹ್ರೈನ್‌ನಿಂದ ಐದು ಲಕ್ಷದಷ್ಟು ಹಣ ಬಂತು. ಆಗ ಈ ಹಣವನ್ನು ಏನು ಮಾಡುವುದು ಎಂದು ಹಝ್ರತ್ ಉಮರ್(ರ) ಸಹಾಬರೊಂದಿಗೆ ಸಮಾಲೋಚನೆ ನಡೆಸಿದರು. ಒಂದು ಅಭಿಪ್ರಾಯ ಹೀಗಿತ್ತು: ಸಿರಿಯ ಸರ್ಕಾರದಲ್ಲಿ ಖಜಾನೆಯನ್ನು ಶೇಖರಿಸುವ ವಿಭಾಗವಿದೆ. ಅದೇ ರೀತಿಯದ್ದು ಮದೀನದಲ್ಲಿ ಮಾಡಬೇಕು ಎಂದಾಗಿತ್ತು. ಈ ಅಭಿಪ್ರಾಯವನ್ನು ಹಝ್ರತ್ ಉಮರ್(ರ) ಇಷ್ಟಪಟ್ಟರು. ಮದೀನದಲ್ಲಿ ಬೈತುಲ್ ಮಾಲಿಗೆ ಬುನಾದಿ ಹಾಕಲಾಯಿತು. ಹಝ್ರತ್ ಅಬ್ದುಲ್ಲಾಹ್ ಬಿನ್ ಅರ್ಖಮ್‌ರನ್ನು ಖಜಾನೆಯ ಆಫೀಸರ್ ಆಗಿ ನಿಶ್ಚಯಿಸಲಾಯಿತು. ಅನಂತರ ಮದೀನ ಅಲ್ಲದೇ, ಎಲ್ಲ ರಾಜ್ಯಗಳಲ್ಲಿ ಮತ್ತು ರಾಜಧಾನಿಗಳಲ್ಲಿ ಬೈತುಲ್‌ಮಾಲನ್ನು ಸ್ಥಾಪಿಸಲಾಯಿತು. ಹಝ್ರತ್ ಉಮರ್(ರ) ಕಟ್ಟಡ ನಿರ್ಮಾಣದ ಕೆಲಸದಲ್ಲಿ ಮಿತವ್ಯಯ ಮಾಡುತ್ತಿದ್ದರು. ಆದರೆ ಬೈತುಲ್‌ಮಾಲಿಗಾಗಿ ಅತ್ಯಂತ ಸುದೃಢ ಮತ್ತು ವೈಭವಶಾಲಿ ಕಟ್ಟಡವನ್ನು ನಿರ್ಮಿಸುತ್ತಿದ್ದರು. ಅನಂತರ ಅದಕ್ಕೆ ಕಾವಲುಗಾರರನ್ನು ಸಹ ನಿಶ್ಚಯಿಸಿದ್ದರು. (ಅಲ್‌ಫಾರೂಖ್, ಶಿಬ್ಲಿ ನುಮಾನಿ, ಪುಟ–203–205, ಇಸ್ಲಾಮಿಯಾತ್ ಕರಾಚಿ 2004)

ಅದಕ್ಕೆ ಸೆಕ್ಯೂರಿಟಿಯ ಸಂಪೂರ್ಣ ವ್ಯವಸ್ಥೆಯಿತ್ತು. ಬೈತುಲ್ ಮಾಲಿನ ಸಂಪತ್ತಿನ ಮೇಲ್ನೋಟ ಮತ್ತು ಸಂರಕ್ಷಣೆಯನ್ನು ಹಝ್ರತ್ ಉಮರ್(ರ) ಸ್ವತಃ ವಹಿಸುತ್ತಿದ್ದರು. ಒಂದು ಘಟನೆ ಚರಿತ್ರೆಯಲ್ಲಿ ಬರುತ್ತದೆ. ಹಝ್ರತ್ ಉಸ್ಮಾನ್ ಬಿನ್ ಅಫ್ಫಾನ್‌ರ(ರ) ಒಬ್ಬ ಸ್ವತಂತ್ರಗೊಳಿಸಲ್ಪಟ್ಟ ಗುಲಾಮ ವರದಿ ಮಾಡುತ್ತಾರೆ: ಒಂದು ದಿನ ಕಠಿಣವಾದ ಸೆಖೆಯಿತ್ತು. ಹಝ್ರತ್ ಉಸ್ಮಾನ್‌ರ(ರ) ಜೊತೆಗೆ 'ಆಲಿಯ' ಎಂಬ ಸ್ಥಳದಲ್ಲಿ ಜಾನುವಾರುಗಳ ಜೊತೆಗೆ ಇದ್ದೆನು. 'ಆಲಿಯ' ಎಂಬುದು ಮದೀನದಿಂದ ನಜದಿನ ದಿಕ್ಕಿನ ಕಡೆಗೆ ನಾಲ್ಕರಿಂದ ಎಂಟು ಮೈಲುಗಳ ನಡುವೆಯಿರುವ ಕಣಿವೆಯಾಗಿದೆ. ಎರಡು ಯುವ ಒಂಟೆಗಳನ್ನು ಅಟ್ಟಿಸುತ್ತಾ ಒಬ್ಬ ವ್ಯಕ್ತಿ ಹೋಗುತ್ತಿರುವುದನ್ನು ಹಝ್ರತ್ ಉಸ್ಮಾನ್(ರ) ನೋಡಿದರು. ನೆಲವು ಬಹಳ ಬಿಸಿಯಾಗಿತ್ತು. ಆಗ ಹಝ್ರತ್ ಉಸ್ಮಾನ್(ರ) ಹೇಳಿದರು: ಈ ವ್ಯಕ್ತಿಗೆ ಏನಾಗಿದೆ? ಇವನು ಮದೀನದಲ್ಲಿ ಇದ್ದುಕೊಂಡು ಹವಾಮಾನ ತಂಪುಗೊಂಡ ನಂತರ ಹೊರಟಿದ್ದರೆ ಒಳ್ಳೆಯದಾಗಿತ್ತು. ಆ ವ್ಯಕ್ತಿ ಸಮೀಪಕ್ಕೆ ಬಂದಾಗ, ಹಝ್ರತ್ ಉಸ್ಮಾನ್(ರ) ನನ್ನೊಡನೆ ಹೇಳಿದರು: ನೋಡು, ಇವನು ಯಾರೆಂದು? ನಾನು ಹೇಳಿದೆ. ಚಾದರವನ್ನು ಹೊದ್ದುಕೊಂಡು ಇರುವ ಒಬ್ಬ ವ್ಯಕ್ತಿಯಾಗಿರುವನು. ಎರಡು ಒಂಟೆಗಳನ್ನು ಅಟ್ಟಿಸಿ ಬಂದಿದ್ದಾನೆ. ಅನಂತರ ಆ ವ್ಯಕ್ತಿ ಇನ್ನೂ ಸಮೀಪಕ್ಕೆ ಬಂದಾಗ, ಅವರು ಯಾರೆಂದು ನೋಡು ಎಂದು ನನ್ನೊಡನೆ ಹೇಳಿದರು. ನಾನು ನೋಡಿದಾಗ, ಅವರು ಹಝ್ರತ್ ಉಮರ್ ಬಿನ್ ಖತ್ತಾಬ್(ರ) ಆಗಿದ್ದರು. ನಾನು ಹೇಳಿದೆ: ಇವರು ಅಮೀರುಲ್ ಮೂಮಿನೀನ್ ಆಗಿರುವರು. ಹಝ್ರತ್ ಉಸ್ಮಾನ್(ರ) ನಿಂತುಕೊಂಡರು. ಬಾಗಿಲಿಂದ ತಲೆಯನ್ನು ಹೊರಗೆ ಹಾಕಿದರು. ಆದರೆ ಬಿಸಿ ಗಾಳಿ ಬೀಸಿದಾಗ ತಲೆಯನ್ನು ಒಳಗೆ ಹಾಕಿದರು. ಬೇಗನೇ ಹಝ್ರತ್ ಉಮರರ(ರ) ಕಡೆಗೆ ಮುಖ ಮಾಡಿಕೊಂಡು ಹೇಳಿದರು: ನೀವು ಯಾವ ಅತ್ಯಾವಶ್ಯಕ ಕಾರಣದಿಂದ ಮನೆಯಿಂದ ಹೊರಗೆ ಬಂದಿದ್ದೀರಿ. ಹಝ್ರತ್ ಉಮರ್(ರ) ಹೇಳಿದರು: ಸದಖದ ಒಂಟೆಗಳಲ್ಲಿ ಈ ಎರಡು ಒಂಟೆಗಳು ಹಿಂದೆ ಬಾಕಿಯುಳಿದಿದ್ದುವು. ಇದಲ್ಲದೇ ಬಾಕಿ ಎಲ್ಲ ಒಂಟೆಗಳನ್ನು ಅಟ್ಟಿಸಿಕೊಂಡು ಹೋಗಲಾಗಿದ್ದುವು. ಆದ್ದರಿಂದ ಇವುಗಳನ್ನು ಸಹ ಮೇಯುವ ಸ್ಥಳಕ್ಕೆ ಕೊಂಡುಹೋಗಲು ನಾನು ಬಯಸಿದೆ. ಈ ಎರಡು ಒಂಟೆಗಳು ಕಾಣೆಯಾಗಬಹುದು ಎಂಬ ಭಯ ನನಗೆ ಇತ್ತು. ಏಕೆಂದರೆ ಅಲ್ಲಾಹನು ಇವುಗಳ ಬಗ್ಗೆ ನನ್ನೊಡನೆ ಕೇಳುವನು. ಹಝ್ರತ್ ಉಸ್ಮಾನ್(ರ) ಹೇಳಿದರು: ಹೇ ಅಮೀರಲ್ ಮೂಮಿನೀನ್, ನೀವು ನೆರಳಿನ ಕಡೆಗೆ ಬನ್ನಿರಿ. ನೀರನ್ನು ಕುಡಿಯಿರಿ. ನಿಮಗೆ ನಾವು ಸಾಕು. ನಾವು ಸೇವೆ ಮಾಡುವೆವು. ಅದನ್ನು ತಲುಪಿಸುವ ಏರ್ಪಾಡನ್ನು ನಾನು ಮಾಡುತ್ತೇನೆ. ಹಝ್ರತ್ ಉಮರ್(ರ) ಹೇಳಿದರು: ನೀವು ನೆರಳಿನ ಕಡೆಗೆ ಮರಳಿ ಹೋಗಿರಿ. ಹಝ್ರತ್ ಉಸ್ಮಾನ್‌ರ(ರ) ಸ್ವತಂತ್ರಗೊಳಿಸಿದ ಗುಲಾಮ ಹೇಳುತ್ತಾನೆ: ನಾನು ಹೇಳಿದೆ: ನಿಮಗೆ ಬೇಕಾಗಿರುವ ಏರ್ಪಾಡು ನಮ್ಮ ಬಳಿಯಿದೆ. ಹಝ್ರತ್ ಉಮರ್(ರ) ಹೇಳಿದರು: ನೀವು ನೆರಳಿನ ಕಡೆಗೆ ಮರಳಿ ಹೋಗಿರಿ. ಅನಂತರ ಹಝ್ರತ್ ಉಮರ್(ರ) ಹೊರಟು ಹೋದರು. ಹಝ್ರತ್ ಉಸ್ಮಾನ್(ರ) ಹೇಳಿದರು: ಯಾರಾದರೂ ಶಕ್ತಿಶಾಲಿ ಮತ್ತು ವಿಶ್ವಾಸಯೋಗ್ಯನಾದ ವ್ಯಕ್ತಿಯನ್ನು ನೋಡಲು ಬಯಸುವರಾದರೆ, ಹಝ್ರತ್ ಉಮರ್‌ರನ್ನು(ರ) ನೋಡಲಿ.

ಬೇರೊಂದು ವರದಿಯಲ್ಲಿ ಹೀಗೆ ಬರುತ್ತದೆ: ಅಬೂಬಕರ್ ಈಸಾರಿಂದ ಉಮರ್ ಬಿನ್ ನಾಫೀ ವರದಿ ಮಾಡುತ್ತಾರೆ. ನಾನು ಹಝ್ರತ್ ಉಮರ್ ಬಿನ್ ಖತ್ತಾಬ್(ರ), ಹಝ್ರತ್ ಉಸ್ಮಾನ್ ಬಿನ್ ಅಫ್ಫಾನ್(ರ) ಮತ್ತು ಹಝ್ರತ್ ಅಲಿ ಬಿನ್ ಅಬೀ ತಾಲಿಬ್‌ರೊಂದಿಗೆ(ರ) ಸದಖ ಮಾಡುವ ಸಮಯದಲ್ಲಿ ಹೋದೆನು. ಹಝ್ರತ್ ಉಸ್ಮಾನ್(ರ) ನೆರಳಿನಲ್ಲಿ ಕುಳಿತುಕೊಂಡರು. ಹಝ್ರತ್ ಅಲಿ(ರ) ಅವರ ಬಳಿಯಲ್ಲಿ ನಿಂತುಕೊಂಡು ಹಝ್ರತ್ ಉಮರ್(ರ) ಹೇಳುತ್ತಿದ್ದ ಮಾತುಗಳನ್ನು ಅವರಿಗೆ ಹೇಳಿಕೊಡುತ್ತಿದ್ದರು. ಹಝ್ರತ್ ಉಮರ್(ರ) ಕಠಿಣವಾದ ಬಿಸಿಲಿನ ದಿನವಾಗಿದ್ದು ಕೂಡ ಬಿಸಿಲಿನಲ್ಲಿ ನಿಂತುಕೊಂಡಿದ್ದರು. ಅವರ ಬಳಿಯಲ್ಲಿ ಎರಡು ಕಪ್ಪು ಚಾದರವಿತ್ತು. ಒಂದನ್ನು ಲುಂಗಿಯಾಗಿ ಧರಿಸಿದರು ಮತ್ತೊಂದನ್ನು ತಲೆಯಲ್ಲಿ ಧರಿಸಿದರು. ಸದಖದ ಒಂಟೆಗಳ ಮೇಲ್ನೋಟವಹಿಸುತ್ತಿದ್ದರು. ಒಂಟೆಯ ಬಣ್ಣ ಮತ್ತು ವಯಸ್ಸನ್ನು ಬರೆಯುತ್ತಿದ್ದರು. ಹಝ್ರತ್ ಅಲಿ(ರ) ಹಝ್ರತ್ ಉಸ್ಮಾನ್‌ರೊಡನೆ(ರ) ಹೇಳಿದರು: ಅಲ್ಲಾಹನ ಗ್ರಂಥದಲ್ಲಿ ನೀವು ಹಝ್ರತ್ ಶುಐಬ್‌ರ ಮಗಳ ಹೇಳಿಕೆಯನ್ನು ಕೇಳಿದ್ದೀರಿ ಅಲ್ಲವೇ? **ಇನ್ನ ಖೈರ ಮನಿಸ್ತಅ್‌ಜರ್‌ತಲ್ ಖವಿಯುಲ್ ಅಮೀನ್**. ಎಂದರೆ, ಖಂಡಿತವಾಗಿಯೂ ನೀವು ಯಾರನ್ನು ಕೆಲಸಕ್ಕಾಗಿ ಇಡುವರಾದರೂ ಅವರಲ್ಲಿ ಶಕ್ತಿಶಾಲಿ ಮತ್ತು ವಿಶ್ವಾಸಯೋಗ್ಯನಾದ ವ್ಯಕ್ತಿಯೇ ಅತ್ಯಂತ ಉತ್ತಮವಾಗಿರುವರು. ಅನಂತರ ಹಝ್ರತ್ ಅಲಿ(ರ)

ಹಝ್ರತ್ ಉಮರರ(ರ) ಕಡೆಗೆ ಬೊಟ್ಟು ಮಾಡುತ್ತಾ ಹೇಳಿದರು: ಇವರೇ ಆ ಶಕ್ತಿಶಾಲಿ ಮತ್ತು ವಿಶ್ವಾಸಯೋಗ್ಯನಾದ ವ್ಯಕ್ತಿ.

(ಉಸದುಲ್‌ಗಾಬ ಫೀ ಮಾರಿಫತಿಸ್ಸಹಾಬ, ಸಂಪುಟ-3, ಪುಟ-667, ದಾರುಲ್ ಫಿಕರ್ ಬೈರೂತ್ ಲೆಬನಾನ್ 2003) (ಉಮ್ದತುಲ್ ಖಾರಿ ಶರಹ್ ಸಹೀಹ್ ಬುಖಾರಿ, ಸಂಪುಟ-16, ಪುಟ-279, ದಾರ್ ಅಹ್ಯಾಉತ್ತುರಾಸುಲ್ ಅರಬಿ ಬೈರೂತ್)

ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಹಝ್ರತ್ ಉಮರರ(ರ) ಒಂದು ಘಟನೆಯಿದೆ. ಹಝ್ರತ್ ಉಸ್ಮಾನ್(ರ) ವರದಿ ಮಾಡುತ್ತಾರೆ: ನಾನು ಒಂದು ಸಲ ಹೊರಗೆ ಖುಬ್ಬ(ಗುಮ್ಮಟ)ದಲ್ಲಿ ಕುಳಿತುಕೊಂಡಿದ್ದೆ. ಎಷ್ಟು ಕಠಿಣ ಬಿಸಿಲಿತ್ತು ಎಂದರೆ, ಬಾಗಿಲು ತೆರೆಯುವ ಧೈರ್ಯ ಬರುತ್ತಿರಲಿಲ್ಲ. ಅಷ್ಟರಲ್ಲಿ ನನ್ನ ಗುಲಾಮ ಹೇಳಿದನು: ನೋಡಿರಿ, ಇಷ್ಟು ಕಠಿಣ ಬಿಸಿಲಿನಲ್ಲಿ ಹೊರಗೆ ಒಬ್ಬ ವ್ಯಕ್ತಿ ಸುತ್ತುತ್ತಿದ್ದಾನೆ. ನಾನು ಕರ್ಟನ್ ನೀಗಿಸಿ ನೋಡಿದಾಗ ಒಬ್ಬ ವ್ಯಕ್ತಿಯನ್ನು ಕಂಡೆನು. ಅವರ ಮುಖ ಬಿಸಿಲಿನ ಬೇಗೆಯಿಂದ ಸುಟ್ಟಂತೆ ಇತ್ತು. ಯಾರಾದರೂ ಯಾತ್ರಿಕನು ಆಗಿರಬಹುದು ಎಂದು ನಾನು ಹೇಳಿದೆ. ಆದರೆ ಸ್ವಲ್ಪ ಸಮಯದಲ್ಲೇ ಆ ವ್ಯಕ್ತಿ ನನ್ನ ಖುಬ್ಬದ(ಗುಮ್ಮಟ) ಸಮೀಪಕ್ಕೆ ಬಂದರು. ನಾನು ನೋಡಿದಾಗ ಅವರು ಹಝ್ರತ್ ಉಮರ್(ರ) ಆಗಿದ್ದರು. ಅವರನ್ನು ನೋಡಿದ ಕೂಡಲೇ ಭಯಪಟ್ಟು ಹೊರಗೆ ಬಂದೆನು. ಈ ಸೆಖೆಯಲ್ಲಿ ನೀವು ಎಲ್ಲಿಗೆ ಹೋಗುತ್ತಿದ್ದೀರಿ ಎಂದು ನಾನು ಅವರೊಡನೆ ಕೇಳಿದೆ. ಹಝ್ರತ್ ಉಮರ್(ರ) ಹೇಳಿದರು: ಬೈತುಲ್‌ಮಾಲಿನ ಒಂದು ಒಂಟೆ ಕಾಣೆಯಾಗಿತ್ತು. ಅದನ್ನು ಹುಡುಕಿಕೊಂಡು ನಾನು ಹೊರಗೆ ಸುತ್ತುತ್ತಿದ್ದೇನೆ.

(ತಫ್ಸೀರೆ ಕಬೀರ್, ಸಂಪುಟ-8, ಪುಟ-314-315)

ಒಂಟೆ ಕಾಣೆಯಾದ ಒಂದು ಘಟನೆ ಸಹ ವರದಿಯಲ್ಲಿ ಬಂದಿದೆ. ಮೊದಲು ಸಹ ಒಂದು ಬಾರಿ ಪ್ರಸ್ತಾಪಿಸಿದ್ದೇನೆ.

ಹಝ್ರತ್ ಉಮರ್(ರ) ಒಂದು ಸಲ ಬೈತುಲ್‌ಮಾಲಿನ ಸಂಪತ್ತನ್ನು ವಿತರಿಸುತ್ತಿದ್ದರು. ಅವರೊಬ್ಬಳು ಮಗಳು ಬಂದಳು. ಅವಳು ಆ ಸಂಪತ್ತಿನಿಂದ ಒಂದು ದಿರ್ಹಮ್ ತೆಗೆದಳು. ಹಝ್ರತ್ ಉಮರ್(ರ) ಅದನ್ನು ಮರಳಿ ಪಡೆಯಲು ಎದ್ದರು. ಅವರ ಒಂದು ತೋಳಿಂದ ಅವರ ಚಾದರ ತೂಗಿಬಿತ್ತು. ಆ ಮಗಳು ಅಳುತ್ತಾ ಮನೆಗೆ ಓಡಿ ಹೋದಳು. ಆ ದಿರ್ಹಮನ್ನು ಅವಳು ತನ್ನ ಬಾಯಿಗೆ ಹಾಕಿದಳು. ಹಝ್ರತ್ ಉಮರ್(ರ) ಬೆರಳು ಹಾಕಿಕೊಂಡು ಆ ದಿರ್ಹಮನ್ನು ಬಾಯಿಂದ ತೆಗೆದರು. ಅದನ್ನು ಮರಳಿ ಸಂಪತ್ತಿನಲ್ಲಿ ಹಾಕಿದರು ಮತ್ತು ಹೀಗೆ ಹೇಳಿದರು: ಎಲೈ ಜನರೇ, ಉಮರ್ ಮತ್ತು ಅವರ ಕುಟುಂಬಕ್ಕೆ ಅವರು ನಿಕಟ ಸಂಬಂಧಿಕರಾದರೂ ದೂರದ ಸಂಬಂಧಿಕರಾದರೂ ಅವರಿಗೆ ಸಾಮಾನ್ಯ ಮುಸ್ಲಿಮರಿಗೆ ಇರುವ ಅದೇ ಹಕ್ಕು ಲಭಿಸುವುದು. ಅದಕ್ಕಿಂತ ಹೆಚ್ಚು ಇಲ್ಲ. ಮತ್ತೊಂದು ವರದಿ ಹೀಗಿದೆ: ಹಝ್ರತ್ ಅಬೂಮೂಸಾ ಒಂದು ಬಾರಿ ಬೈತುಲ್‌ಮಾಲಿನಲ್ಲಿ ಗುಡಿಸುತ್ತಿದ್ದರು. ಆಗ ಒಂದು ದಿರ್ಹಂ ಲಭಿಸಿತು. ಹಝ್ರತ್ ಉಮರರ ಒಬ್ಬ ಕಿರಿಯ ಮಗನೂ ಅಲ್ಲಿಂದ ಸಾಗುತ್ತಿದ್ದನು. ಆಗ ಅಬೂ ಮೂಸಾ ಅದು ಅವನಿಗೆ ಕೊಟ್ಟರು. ಹಝ್ರತ್ ಉಮರ್(ರ) ಆ ದಿರ್ಹಮನ್ನು ಮಗುವಿನ ಕೈಯಲ್ಲಿ ನೋಡಿದರು. ಅದರ ಬಗ್ಗೆ ಪ್ರಶ್ನಿಸಿದರು. ಮಗು ಹೇಳಿದನು: ಇದು ನನಗೆ ಅಬೂಮೂಸಾ ನೀಡಿದ್ದರು. ಹೀಗೆ ದಿರ್ಹಂ ಬೈತುಲ್‌ಮಾಲಿನದ್ದು ಎಂದು ಹಝ್ರತ್ ಉಮರ್‌ರಿಗೆ ಗೊತ್ತಾದಾಗ ಅವರು ಹೇಳಿದರು: ಹೇ ಅಬೂಮೂಸಾ ಮದೀನ ನಿವಾಸಿಗಳಲ್ಲಿ ಉಮರರ ಮನೆಗಿಂತ ದರಿದ್ರ ಮನೆ ನಿನ್ನ ಪ್ರಕಾರ ಬೇರೆ ಇಲ್ಲವೇ? ಅನಂತರ ಆ ದಿರ್ಹಮನ್ನು ಬೈತುಲ್‌ಮಾಲಿಗೆ ಮರಳಿಸಿದರು.

(ಇಝಾಲತುಲ್‌ಖಫಾ ಅನ್ ಖಿಲಾಫತುಲ್ ಖುಲಫಾ, ಅನುವಾದ ಇಶ್ತಿಯಾಖ್ ಅಹ್ಮದ್ ಸಾಹಿಬ್, ಸಂಪುಟ-3, ಪುಟ-286, ಖದೀಮಿ ಕುತುಬ್ ಖಾನ ಆರಾಮ್ಬಾಗ್ ಕರಾಚಿ)

ಜನಸಾಮಾನ್ಯರ ಏಳಿಗೆಗೆ ಮಾಡಲಾದ ಕೆಲಸದ ಕುರಿತು ಹೀಗೆ ವರದಿಯಾಗಿದೆ: ಹಝ್ರತ್ ಉಮರ್(ರ) ಜನಸಾಮಾನ್ಯರ ಒಳಿತು ಮತ್ತು ಏಳಿಗೆಗಾಗಿ ಅನೇಕ ಕೆಲಸಗಳನ್ನು ಮಾಡಿದ್ದರು.

ಕೃಷಿಯಲ್ಲಿ ಅಭಿವೃದ್ಧಿ ಮತ್ತು ಜನಸಾಮಾನ್ಯರಿಗೆ ನೀರಿನ ಸರಬರಾಜಿಗಾಗಿ ಕಾಲುವೆಗಳನ್ನು ನಿರ್ಮಿಸಿದರು. ಅವು ಕೆಳಗಿನಂತಿವೆ: 1. ಅಬೂಮೂಸಾ ಕಾಲುವೆ; ಇದು ದಜ್ಲ ನದಿಯಿಂದ 9 ಮೈಲು ಉದ್ದದ ಕಾಲುವೆಯನ್ನು ನಿರ್ಮಿಸಿ ಬಸ್ರ ತನಕ ತರಲಾಯಿತು. 2. ಮುಅ್‌ಖಿಲ್ ಕಾಲುವೆ; ಈ ಕಾಲುವೆ ಸಹ ದಜ್ಲ ನದಿಯಿಂದ ಹೊರಡಿಸಲಾಯಿತು. 3. ಅಮೀರುಲ್ ಮೂಮಿನೀನ್ ಕಾಲುವೆ; ಹಝ್ರತ್ ಉಮರರ ಆಜ್ಞೆಯಂತೆ ನೈಲ್ ನದಿಯನ್ನು ಖುಲ್‌ಝುಂ ಸಮುದ್ರದೊಂದಿಗೆ ಸೇರಿಸಲಾಯಿತು. ಹಿಜರೀ 18ರಲ್ಲಿ ಬರಗಾಲ ಉಂಟಾದಾಗ, ಹಝ್ರತ್ ಉಮರ್(ರ) ಹಝ್ರತ್ ಅಮ್ರ್ ಬಿನ್ ಆಸ್‌ರಿಗೆ ಸಹಾಯಕ್ಕಾಗಿ ಪತ್ರ ಬರೆದಿದ್ದರು. ದೂರ ಅಧಿಕವಿದ್ದ ಕಾರಣದಿಂದ ಸಹಾಯ ತಲುಪುವಾಗ ತಡವಾಯಿತು. ಹಝ್ರತ್ ಉಮರ್(ರ) ಹಝ್ರತ್ ಅಮ್ರ್‌ರನ್ನು ಕರೆದು ಹೇಳಿದರು: ನೈಲ್ ನದಿಯನ್ನು ಸಮುದ್ರದೊಂದಿಗೆ ಸೇರಿಸಿದರೆ, ಅರೇಬಿಯದಲ್ಲಿ ಎಂದಿಗೂ ಬರಗಾಲ ಬರಲಿಕ್ಕಿಲ್ಲ. ಅಲ್ಲಿಯ ಗವರ್ನರ್ ಆಗಿದ್ದ ಅಮ್ರ್ ಮರಳಿ ಹೋಗಿ ಫಿಸ್ತಾತ್‌ನಿಂದ ಖುಲ್‌ಝುಂ ತನಕ ಕಾಲುವೆಯನ್ನು ನಿರ್ಮಿಸಿದರು. ಅದರ ಮೂಲಕ ಹಡಗು ಮದೀನದ ಬಂದರು ಪ್ರದೇಶದ ವರೆಗೆ ತಲುಪುತ್ತಿತ್ತು. ಈ ನದಿ 29 ಮೈಲು ಉದ್ದವಾಗಿತ್ತು. ಆರು ತಿಂಗಳಲ್ಲಿ ತಯಾರು ಮಾಡಲಾಗಿತ್ತು. ರೋಮ್ ಸಮುದ್ರ ಮತ್ತು ಖುಲ್‌ಝುಮ್ ಸಮುದ್ರವನ್ನು ಪರಸ್ಪರ ಸೇರಿಸಲು ಹಝ್ರತ್ ಅಮ್ರ್ ಬಿನ್ ಆಸ್(ರ) ಉದ್ದೇಶಿಸಿದರು. ಖುಲ್‌ಝುಂ ಸಮುದ್ರ ಮತ್ತು ರೋಮ್ ಸಮುದ್ರದಿಂದ ಎಪ್ಪತ್ತು ಮೈಲು ದೂರದಲ್ಲಿದ್ದ ಫರ್ಮಾದ ಸಮೀಪದಿಂದ ಕಾಲುವೆಯನ್ನು ಹೊರಡಿಸಿ ಅವರೆಡನ್ನು ಸೇರಿಸಲು ಅವರು ಬಯಸಿದರು. ಫರ್ಮಾ ಎಂಬುದು ಈಜಿಪ್ಟಿನ ಪರಿಸರ ತೀರ ಪ್ರದೇಶದಲ್ಲಿ ಇರುವ ಒಂದು ಪಟ್ಟಣವಾಗಿತ್ತು. ಆದರೆ ಗ್ರೀಕರ ಕೈಗಳಿಂದ ಹಾಜಿಗಳು ಮರಳಬೇಕಾದ ಸ್ಥಿತಿ ಉಂಟಾಗುವ ಭಯದಿಂದ ಅದಕ್ಕೆ ಅನುಮತಿ ಕೊಡಲಿಲ್ಲ. ಅಮ್ರ್ ಬಿನ್ ಆಸ್‌ರಿಗೆ ಅದರ ಅನುಮತಿ ಸಿಕ್ಕಿದ್ದರೆ, ನಂತರ ಕಾಲದಲ್ಲಿ ನಿರ್ಮಿಸಲಾದ ಸ್ವೀಝ್ ಕಾಲುವೆ ಅರೇಬಿಯರ ಹೆಸರಲ್ಲಿ ಆಗುತ್ತಿತ್ತು.

ಹಝ್ರತ್ ಉಮರ್(ರ) ಜನಸಾಮಾನ್ಯರ ಸೌಕರ್ಯಕ್ಕಾಗಿ ಅನೇಕ ಕಟ್ಟಡಗಳನ್ನು ನಿರ್ಮಿಸಿದರು. ಅವುಗಳಲ್ಲಿ ಮಸೀದಿಗಳ ನಿರ್ಮಾಣ, ಸೈನಿಕ ಚಾವಣಿಗಳು, ಬೇರೆಕ್ಸ್, ದೇಶೀಯ ನಿರ್ಮಾಣ ಕೆಲಸಕ್ಕಾಗಿ ಅನೇಕ ಆಫೀಸ್‌ಗಳು, ರಸ್ತೆಗಳು, ಪುಲ್, ಅತಿಥಿಗೃಹಗಳು, ಚೌಕಿಗಳು, ಛತ್ರಗಳು ಮುಂತಾದವು ಸೇರುತ್ತವೆ. ಮದೀನದಿಂದ ಮಕ್ಕದ ವರೆಗೆ ಪ್ರತಿಯೊಂದು ತಂಗುದಾಣದಲ್ಲಿ ಕಾರಂಜಿಗಳನ್ನು ಮತ್ತು ಛತ್ರಗಳನ್ನು ನಿರ್ಮಿಸಿದ್ದರು. ಚೌಕಿಗಳನ್ನು ಸಹ ತಯಾರಿಸಿದರು. (ಅಲ್‌ಫಾರೂಖ್, ಶಿಬ್ಲಿ ನುಮಾನಿ, ಪುಟ-206-210, ಇಸ್ಲಾಮಿಯಾತ್ ಕರಾಚಿ 2004)

ಎಂದರೆ ಸೆಕ್ಯೂರಿಟಿಯ ವ್ಯವಸ್ಥೆಯಿತ್ತು. ಜನರ ವಸತಿಗಾಗಿ, ಆರಾಮಕ್ಕಾಗಿ, ಹೋಟೆಲ್, ಛತ್ರಗಳ ಸೌಕರ್ಯ ಮಾಡಿದರು.

ಹಝ್ರತ್ ಉಮರ್(ರ) ತನ್ನ ಖಿಲಾಫತ್ ಕಾಲದಲ್ಲಿ ಅನೇಕ ಹೊಸ ಪಟ್ಟಣಗಳನ್ನು ನೆಲೆಸಿದರು. ಅವರು ಅದನ್ನು ನೆಲೆಸಿದಾಗ ಆರ್ಥಿಕ ಪ್ರಯೋಜನಗಳನ್ನು ಮುಂದಿರಿಸಿದರು. ಈ ಪಟ್ಟಣಗಳು ಇರುವ ಸ್ಥಳಗಳು ಹಝ್ರತ್ ಉಮರರಿಗೆ(ರ) ಯುದ್ಧದ ವಿಷಯದಲ್ಲಿ ಇದ್ದ ದೂರದೃಷ್ಟಿ, ಜನವಸತಿಯ ತತ್ವದ ಬಗ್ಗೆ ಅವರಿಗೆ ಇದ್ದ ಸೂಕ್ಷ್ಮದೃಷ್ಟಿಯ ಬಗ್ಗೆ ಪುರಾವೆ ನೀಡುತ್ತದೆ. ಈ ಪಟ್ಟಣ ಯುದ್ಧ ಮತ್ತು ಶಾಂತಿ ಎರಡೂ ಸ್ಥಿತಿಯಲ್ಲೂ ಪ್ರಯೋಜನಕರವಾಗಿದ್ದುವು. ಅಚಾನಕ್ಕಾದ ಆಕ್ರಮಣಗಳಿಂದ ಸುರಕ್ಷಿತವಾಗಿರಲು ಅರೇಬಿಯಕ್ಕೆ ಸೇರಿರುವ ಅರೇಬಿಯೇತರ ಗಡಿಗಳಲ್ಲಿ ಪಟ್ಟಣವನ್ನು ನೆಲೆಸಲು ಹಝ್ರತ್ ಉಮರ್(ರ) ಪ್ರಯತ್ನಿಸಿದ್ದರು. ಈ ಪಟ್ಟಣಗಳ ಒಂದು ಕಡೆ ಅರೇಬಿಯದ ಭೂಮಿಯಿತ್ತು. ಅದು ಹುಲ್ಲುಗಾವಲಿನ ಪ್ರಯೋಜನವನ್ನು ನೀಡುತ್ತಿತ್ತು. ಮತ್ತೊಂದು ಕಡೆ ಅರೇಬಿಯೇತರ ಹಚ್ಚಹಸುರು ಭೂಮಿಯಿತ್ತು. ಅಲ್ಲಿಂದ ಹಣ್ಣುಗಳು, ಧಾನ್ಯಗಳು ಮತ್ತು ಇತರ ವಸ್ತುಗಳು ಲಭ್ಯವಾಗಿತ್ತು. ಎಂದರೆ ಕೃಷಿ ಮತ್ತೊಂದು ಕಡೆ ಮಾಡಲಾಗುತ್ತಿತ್ತು. ಪಟ್ಟಣಗಳ ನೆಲೆಸುವಿಕೆಯಲ್ಲಿ ಗಮನದಲ್ಲಿ ಇರಿಸಲಾದ ಒಂದು ಸಂಗತಿಯೇನೆಂದರೆ, ಮಧ್ಯದಲ್ಲಿ ನದಿ ಅಥವಾ ಸಮುದ್ರ ಇಲ್ಲದಂತೆ ನೋಡಲಾಗುತ್ತಿತ್ತು. ಹಝ್ರತ್ ಉಮರ್(ರ) ಬಸ್ರ, ಕೂಫ, ಫಿಸ್ತಾತ್ ಇತ್ಯಾದಿ ಪಟ್ಟಣಗಳನ್ನು ನೆಲೆಸಿದರು.

ಹಝ್ರತ್ ಉಮರ್(ರ) ದೃಢ ಮತ್ತು ಸರಿಯಾದ ಬುನಾದಿಗಳಲ್ಲಿ ಈ ಪಟ್ಟಣಗಳನ್ನು ನೆಲೆಸಿದ್ದರು. ಅವುಗಳ ರಸ್ತೆಗಳು ಮತ್ತು ಮಾರ್ಗಗಳನ್ನು ವಿಶಾಲವಾಗಿ ತಯಾರಿಸಲಾಗಿದ್ದುವು. ವಿಶಾಲವಾದ, ತೆರೆದ ಮತ್ತು ಅತ್ಯುತ್ತಮ ಶೈಲಿಯಲ್ಲಿ ತಯಾರಿಸಿದ್ದರು. ಅವರು ಈ ಅರಿವಲ್ಲಿ ಎಷ್ಟು ನುರಿತ ಮತ್ತು ವಿಶಿಷ್ಟರು ಎಂದು ಅವರ ಈ ರೀತಿಯ ಯೋಚನೆಯಿಂದ ಸಾಬೀತಾಗುತ್ತದೆ.

(ಸೀರತ್ ಅಮೀರುಲ್ ಮುಮಿನೀನ್ ಉಮರ್ ಬಿನ್ ಖತ್ತಾಬ್, ಅಲ್‌ಸಲಾಬಿ, ಪುಟ-214,217,221, ದಾರುಲ್ ಮಾರಿಫ ಬೈರೂತ್ 2007)

ಅದೇ ರೀತಿಯಲ್ಲಿ ಹಝ್ರತ್ ಉಮರ್(ರ) ಸೈನ್ಯವನ್ನು ಸ್ಥಾಪಿಸಿಕೊಂಡು ಅದನ್ನು ವ್ಯವಸ್ಥಿತವಾಗಿ ವಿನ್ಯಾಸಗೊಳಿಸಿದರು. ಪದವಿಗಳಿಗೆ ಅನುಸಾರ ಸೈನಿಕರ ರಿಜಿಸ್ಟರ್ ತಯಾರಿಸಿದರು ಮತ್ತು ಅವರಿಗೆ ಸಂಬಳಗಳನ್ನು ನಿಶ್ಚಯಿಸಿದರು. ಹಝ್ರತ್ ಉಮರ್(ರ) ಸೈನ್ಯವನ್ನು ಎರಡು ಭಾಗಗಳನ್ನಾಗಿ ವಿಂಗಡಿಸಿದರು. ಒಂದು ಭಾಗ ಯುದ್ಧದಲ್ಲಿ ಭಾಗಿಯಾಗುತ್ತಿದ್ದರು ಮತ್ತು ಮತ್ತೊಂದು ಭಾಗ ಸ್ವಯಂಸೇವಕರದ್ದಾಗಿತ್ತು. ಅವರನ್ನು ಬೇಕಾದ

ಸಮಯದಲ್ಲಿ ಕರೆಯಲಾಗುತ್ತಿತ್ತು. ಹಝ್ರತ್ ಉಮರ್‌ರಿಗೆ(ರ) ಸೈನಿಕರ ತರಬೇತು ಬಗ್ಗೆ ಬಹಳ ಕಾಳಜಿಯಿತ್ತು. ವಶಪಡಿಸಲಾದ ದೇಶಗಳಲ್ಲಿ ಯಾವನೇ ವ್ಯಕ್ತಿ ಕೃಷಿ ಅಥವಾ ವ್ಯಾಪಾರವನ್ನು ಮಾಡಬಾರದು ಎಂದು ಹಝ್ರತ್ ಉಮರ್(ರ) ತಾಕೀತು ಮಾಡಿದ್ದರು. ಇದು ಸೈನಿಕರಿಗೆ ಇದ್ದ ತಾಕೀತಾಗಿತ್ತು. ಏಕೆಂದರೆ ಇದರಿಂದ ಸೈನಿಕರ ಕೌಶಲಕ್ಕೆ ನಷ್ಟವುಂಟಾಗುವ ಸಾಧ್ಯತೆಯಿತ್ತು. ಇಂದು ಮುಸ್ಲಿಮರ ದೇಶಗಳಲ್ಲಿ ಸೈನಿಕರು ವ್ಯಾಪಾರದಲ್ಲಿ ನಿರತರಾಗಿರುವರು. ಮಾತ್ರವಲ್ಲ ಒಂದು ದೇಶದಲ್ಲಿ ಕಮೀಶನ್ ಪಡೆಯುತ್ತಲೇ, ಎಲ್ಲಿ ಪ್ಲಾಟ್ ಅಲಾಟ್ ಮಾಡಿಸಬೇಕು ಎಂದು ಆಫೀಸರರು ನೋಡುತ್ತಾರೆ ಎಂದು ಹೇಳಲಾಗುತ್ತದೆ. ಹೀಗೆ ಅವರ ಸೈನ್ಯ ಕೌಶಲಗಳು ಕಡಿಮೆಯಾಗುತ್ತಿವೆ.

ಹಝ್ರತ್ ಉಮರರ(ರ) ಖಿಲಾಫತ್ ಕಾಲದಲ್ಲಿ, ಸೈನಿಕರ ಆರೋಗ್ಯಕ್ಕೆ ಹಾನಿಯುಂಟಾಗದಿರಲು ತಂಪು ಮತ್ತು ಬಿಸಿ ದೇಶಗಳನ್ನು ಆಕ್ರಮಣ ನಡೆಸುವಾಗ ಅಲ್ಲಿಂಯ ಹವಾಮಾನದ ಬಗ್ಗೆ ಗಮನವಹಿಸಲಾಗುತ್ತಿತ್ತು. ಸೈನಿಕರೆಲ್ಲರೂ ಈಜು, ಬರಿಗಾಲಲ್ಲಿ ನಡೆಯು ಅರಿತಿರಬೇಕು ಎಂದು ಹಝ್ರತ್ ಉಮರ್(ರ) ಶಕ್ತವಾಗಿ ತಾಕೀತು ಮಾಡಿದ್ದರು. ಪ್ರತಿ ನಾಲ್ಕು ತಿಂಗಳಲ್ಲಿ ಒಮ್ಮೆ ಸೈನಿಕರಿಗೆ ತನ್ನ ಊರಿಗೆ ಹೋಗಿ ತನ್ನ ಕುಟುಂಬ ಮಕ್ಕಳನ್ನು ಭೇಟಿಯಾಗಲಿಕ್ಕಾಗಿ ರಜೆ ನೀಡಲಾಗುತ್ತಿತ್ತು. ಮೃದು ಬಟ್ಟೆಗಳನ್ನು ಧರಿಸಬಾರದು, ಬಿಸಿಲಿನಿಂದ ದೂರವಿರಬೇಕು ಎಂಬಿತ್ಯಾದಿ ನಿರ್ದೇಶನಗಳು ನೀಡಲಾಗಿತ್ತು. ವಸಂತಕಾಲದಲ್ಲಿ ಸೈನ್ಯವನ್ನು ಹಚ್ಚುಹಸುರಾಗಿರುವ ಪ್ರದೇಶಗಳಿಗೆ ಕಳುಹಿಸುತಿದ್ದರು. ಸೈನಿಕ ಬೇರೆಕ್ಸ್ ಮತ್ತು ಛಾವಣಿಗಳನ್ನು ನಿರ್ಮಿಸುವಾಗ ಹವಾಮಾನವನ್ನು ನೋಡಲಾಗುತ್ತಿತ್ತು. ತಾಜಾ ವಾತಾವರಣದಿಂದ ಸೈನಿಕರ ಆರೋಗ್ಯ ಉತ್ತಮವಾಗಿರಲಿಕ್ಕಾಗಿ ಸೈನಿಕರನ್ನು ಹಚ್ಚಹಸುರು ಪ್ರದೇಶಗಳಿಗೆ ಕಳುಹಿಸುವುದು ಸಹ ಆವಶ್ಯಕವಾಗಿತ್ತು. ಎಲ್ಲ ಜಿಲ್ಲೆಗಳಲ್ಲಿ ಸೈನಿಕ ಛಾವಣಿಗಳನ್ನು ನಿರ್ಮಿಸಿದ್ದರು. ಮದೀನ, ಕೂಫ, ಬಸ್ರ, ಮೋಸಲ್, ಫಿಸ್‌ತಾತ್, ಡಮಸ್ಕಸ್, ಹಮ್ಸ್ ಅರ್ದನ್, ಫೆಲಸ್ತೀನನ್ನು ಸೈನ್ಯದ ಕೇಂದ್ರವನ್ನಾಗಿ ಮಾಡಲಾಗಿತ್ತು. ಅಲ್ಲೇ ಸೈನಿಕರ ನೇಮಕಾತಿ ಮಾಡಲಾಗುತ್ತಿತ್ತು. ಸೈನಿಕ ಕೇಂದ್ರದಲ್ಲಿ ಒಂದೇ ಸಮಯದಲ್ಲಿ ನಾಲ್ಕು ಸಾವಿರ ಕುದುರೆಗಳು ಇರುತ್ತಿದ್ದವು. ಅದರ ಪಾಲನೆ ಪೋಷಣೆ ಮಾಡಲಾಗುತ್ತಿತ್ತು. ಕುದುರೆಗಳ ತೊಡೆಗಳಲ್ಲಿ **ಜೈಶ್ ಫೀ ಸಬೀಲಿಲ್ಲಾಹ್** ಎಂದು ಬರೆ ಹಾಕಲಾಗುತ್ತಿತ್ತು. ಎಂದರೆ ಅಲ್ಲಾಹನ ಮಾರ್ಗದಲ್ಲಿರುವ ಸೈನ್ಯ. ಸಿಪಾಯಿಗಳನ್ನು ಪರಿಶ್ರಮ ಮತ್ತು ಆಯುಧಗಳಿಂದ ಸಜ್ಜುಗೊಳಿಸುತ್ತಿದ್ದರು. (ಅಲ್‌ಫಾರೂಖ್, ಶಿಬ್ಲಿ ನುಮಾನಿ, ಪುಟ-216-218, ಇಸ್ಲಾಮಿಯಾತ್ ಕರಾಚಿ 2004) (ಸೈರುಸ್ಸಹಾಬ, ಸಂಪುಟ-1, ಪುಟ-126-127, ದಾರುಲ್ ಇಶಾಅತ್ ಕರಾಚಿ ಪಾಕಿಸ್ತಾನ 2004) (ಲಿಸಾನುಲ್ ಅರಬಿ)

ಇಸ್ಲಾಮಿಕ ಆಡಳಿತದ ಅಡಿಯಲ್ಲಿ ಅನ್ಯ ಸಮುದಾಯಗಳ ವ್ಯಕ್ತಿಗಳು ಸಹ ಉನ್ನತ ಹುದ್ದೆಗಳಲ್ಲಿ ಇದ್ದರು.

ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಹಝ್ರತ್ ಉಮರ್(ರ) ಯುದ್ಧ ವಿಭಾಗವನ್ನು ವಿಸ್ತೀರ್ಣಗೊಳಿಸುವಾಗ ಯಾವುದೇ ಸಮುದಾಯ ಮತ್ತು ದೇಶಕ್ಕೆ ವಿಶೇಷ ಸ್ಥಾನ ನೀಡಿರಲಿಲ್ಲ. ಸ್ವಯಂ ಸೇವಕ ಸೈನ್ಯದಲ್ಲಿ ಸಾವಿರಾರು ಅಗ್ನಿಪೂಜಕರು ಇದ್ದರು. ಅವರಿಗೆ ಮುಸ್ಲಿಮರಿಗೆ ಸಮಾನವಾದ ಸಂಬಳ ಸಿಗುತ್ತಿತ್ತು.

ಯುನಾನಿ ಮತ್ತು ರೋಮಿನ ಶೂರರು ಸಹ ಸೈನ್ಯದಲ್ಲಿ ಇದ್ದರು. ಈಜಿಪ್ಟನ್ನು ಪರಾಜಯಗೊಳಿಸಿದಾಗ ಅವರ ಐನ್ನೂರು ವ್ಯಕ್ತಿಗಳು ಯುದ್ಧದಲ್ಲಿ ಇದ್ದರು. ಆದರೆ ಇಂದು ಪಾಕಿಸ್ತಾನದಲ್ಲಿ, ಅಹ್ಮದಿಯರನ್ನು ಸೈನ್ಯದಿಂದ ಹೊರಹಾಕಲು ಹೇಳಲಾಗುತ್ತದೆ. ಬಹಳ ಸೆನ್ಸಟಿವ್ ಪೋಸ್ಟ್‌ಗಳಾಗಿವೆ. ಪಾಕಿಸ್ತಾನಕ್ಕಾಗಿ ಅತ್ಯಂತ ಹೆಚ್ಚಿನ ತ್ಯಾಗಗಳನ್ನು ಅಹ್ಮದೀ ಆಫೀಸರರು ಮಾಡಿದ್ದರು ಎಂದು ಚರಿತ್ರೆ ಓದಿದರೆ ಗೊತ್ತಾಗುವುದು. ಹೇಗಿದ್ದರೂ ಅವು ಅವರ ಕೃತ್ಯಗಳಾಗಿವೆ. ಅನ್ಯ ಸಮುದಾಯಗಳ ವ್ಯಕ್ತಿಗಳನ್ನು ಹಝ್ರತ್ ಉಮರ್(ರ) ಸೇನಾಧಿಪತಿಗಳನ್ನಾಗಿ ನಿಶ್ಚಯಿಸುತ್ತಿದ್ದರು ಎಂದು ಚರಿತ್ರೆಯಿಂದ ಸಾಬೀತಾಗುತ್ತದೆ. ಹಝ್ರತ್ ಉಮರರ(ರ) ಕಾಲದಲ್ಲಿ ಇರಾನಿಯರನ್ನು ಸೇನಾಧಿಪತಿಗಳನ್ನಾಗಿ ಮಾಡಲಾಗಿದ್ದುವು. ಅವರಲ್ಲಿ ಕೆಲವರ ಹೆಸರುಗಳು ಸಹ ಚರಿತ್ರೆಯಲ್ಲಿ ಇವೆ. ಅಲ್ಲಾಮ ಶಿಬ್‌ಲಿ ಆರು ಆಫೀಸರರ ಹೆಸರನ್ನು ಬರೆದಿರುವರು. ಸಿಯಾಹ್ ಖುಸ್‌ರೋ, ಶಹರ್‌ಯಾರ್, ಶೇರ್‌ವಿಯ, ಅಫ್‌ರೋದೀನ್. ಆಫೀಸರರಿಗೆ ಸಂಬಳ ಸಹ ಸರ್ಕಾರಿ ಖಜಾನೆಯಿಂದ ಲಭಿಸುತ್ತಿತ್ತು. (ತಫ್ಸೀರೆ ಕಬೀರ್, ಸಂಪುಟ-6, ಪುಟ-534) (ತಾರೀಖ್ ಅತ್ತಿಬರಿ, ಸಂಪುಟ-2, ಪುಟ-54, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 1987)

ವಸ್ತುಗಳ ಬೆಲೆಗಳನ್ನು ಅನ್ಯಾಯವಾಗಿ ಕಡಿಮೆಗೊಳಿಸುವುದನ್ನು ಹಝ್ರತ್ ಉಮರ್(ರ) ಕಠಿಣವಾಗಿ ತಡೆದಿದ್ದರು. ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ವಸ್ತುಗಳ ಬೆಲೆಗಳನ್ನು ಅನ್ಯಾಯವಾಗಿ ಕಡಿಮೆಗೊಳಿಸುವುದನ್ನು ಹಝ್ರತ್ ಉಮರ್(ರ) ಕಠಿಣವಾಗಿ ತಡೆದಿದ್ದರು. ಬೆಲೆಯನ್ನು ಕಡಿಮೆಗೊಳಿಸುವುದು ಸಹ ಅನ್ಯಾಯವಾಗಿ ಸಂಪತ್ತು ಗಳಿಸುವ ಮಾರ್ಗವಾಗಿದೆ. ಏಕೆಂದರೆ ಶ್ರೀಮಂತ ವ್ಯಾಪಾರಿಗಳು ಈ ರೀತಿಯಲ್ಲಿ ಬಲಹೀನ ವ್ಯಾಪಾರಿಗಳು ಸಹ ಕಡಿಮೆ ಬೆಲೆಗೆ ತಮ್ಮ ವಸ್ತುಗಳನ್ನು ಮಾರಾಟ ಮಾಡುವಂತೆ ಮಾಡುತ್ತಾರೆ. ಹೀಗೆ ಅವರನ್ನು ದೀವಾಳಿಯನ್ನಾಗಿ ಮಾಡಲು ಅವರು ಯಶಸ್ವಿಯಾಗುತ್ತಾರೆ. ಹಝ್ರತ್ ಉಮರರ(ರ) ಕಾಲದಲ್ಲಿ ಒಂದು ಘಟನೆಯಿದೆ. ಒಂದು ಸಲ ಅವರು ಮಾರುಕಟ್ಟೆಯನ್ನು ಸಂದರ್ಶಿಸುತ್ತಿದ್ದರು. ಹೊರಗಿನಿಂದ ಬಂದ ಒಬ್ಬ ವ್ಯಕ್ತಿಯನ್ನು ಅವರು ನೋಡಿದರು. ಅವರು ಒಣದ್ರಾಕ್ಷೆಯನ್ನು ಅತ್ಯಂತ ಕಡಿಮೆ ಬೆಲೆಗೆ ಮಾರಾಟ ಮಾಡುತ್ತಿದ್ದರು. ಆ ಬೆಲೆಗೆ ಮದೀನದ ವ್ಯಾಪಾರಿಗಳಿಗೆ ಮಾರಾಟ ಮಾಡಲು ಸಾಧ್ಯವಿರಲಿಲ್ಲ. ಹಝ್ರತ್ ಉಮರ್(ರ) ಅವರಿಗೆ ಹೀಗೆ ಆಜ್ಞಾಪಿಸಿದರು: ನಿನ್ನ ಮಾಲನ್ನು ಮಾರುಕಟ್ಟೆಯಿಂದ ತೆಗೆದುಕೊಂಡು ಹೋಗು ಅಥವಾ ಮದೀನದ ವ್ಯಾಪಾರಿಗಳು ಮಾರಾಟ ಮಾಡುವ ಬೆಲೆಗೆ ಮಾರಾಟ ಮಾಡು. ಮದೀನದ ವ್ಯಾಪಾರಿಗಳು ಹೆಚ್ಚು ಬೆಲೆಗೆ ಮಾರಾಟ ಮಾಡುತ್ತಿರಲಿಲ್ಲ. ಬದಲಾಗಿ ಸರಿಯಾದ ಬೆಲೆಗೆ ಮಾರುತ್ತಿದ್ದರು. ಹಝ್ರತ್ ಉಮರ್(ರ) ರವರು ನೀವು ಅದೇ ಬೆಲೆಗೆ ಮಾರಾಟ ಮಾಡಿ ಎಂದು ಹೇಳಿದರು. ಈ ಆದೇಶದ ಕಾರಣವನ್ನು ಕೇಳಿದಾಗ, ಅವರು(ರ) ಈ ರೀತಿ ಮಾರಾಟ ಮಾಡಲು ಅನುಮತಿಸಿದರೆ, ಸಮಂಜಸವಾದ ಬೆಲೆಗೆ ಸರಕುಗಳನ್ನು ಮಾರಾಟ ಮಾಡುತ್ತಿರುವ ಮದೀನಾದ ವ್ಯಾಪಾರಿಗಳಿಗೆ ಹಾನಿವುಂಟಾಗುತ್ತದೆ ಎಂದು ಉತ್ತರಿಸಿದರು. ಪ್ರವಾದಿ(ಸ)ರವರ ಕೆಲವು ಸಹಾಬರವರು ಹಝ್ರತ್ ಉಮರ್(ರ) ಅವರ ಈ ಕ್ರಮಕ್ಕೆ ವಿರೋಧ ವ್ಯಕ್ತಪಡಿಸಿ ಪ್ರವಾದಿ(ಸ)ರವರ 'ಮಂಡಿಯ ದರಗಳಲ್ಲಿ ಹಸ್ತಕ್ಷೇಪ ಮಾಡಬಾರದು' ಎಂಬ ಹೇಳಿಕೆಯನ್ನು ಪ್ರಸ್ತುತಪಡಿಸಿದ್ದರು ಇದರಲ್ಲಿ ಯಾವ ಸಂದೇಹವಿಲ್ಲ. ಆದರೆ ಇವರ ಆಕ್ಷೇಪವು ಸರಿಯಾಗಿರಲಿಲ್ಲ ಏಕೆಂದರೆ ಮಂಡಿಯ ದರದಲ್ಲಿ ಹಸ್ತಕ್ಷೇಪ ಮಾಡುವುದು ಎಂದರೆ ಬೇಡಿಕೆಯ (Supply & Demand) ತತ್ವಗಳಲ್ಲಿ ಹಸ್ತಕ್ಷೇಪ ಎಂದರ್ಥ. ಹೀಗೆ ಮಾಡುವುದರಲ್ಲಿ ನಿಸ್ಸಂದೇಹವಾಗಿಯು ರಾಷ್ಟ್ರಕ್ಕೆ ಹಾನಿವುಂಟಾಗುತ್ತದೆ ಇದರಿಂದ ಸರಕಾರವೂ ಉಳಿದಿರಬೇಕು." ಮಾರುಕಟ್ಟೆಯು ಸ್ವತಃ ಸಪ್ಲೈ ಮತ್ತು ಡಿಮಾಂಡಿಗೆ ಹೊಂದಿಕೊಳ್ಳುತ್ತಾರೆ. ಇಲ್ಲದಿದ್ದಲ್ಲಿ ಜನಸಾಮಾನ್ಯರಿಗಂತೂ ಯಾವುದೇ ಹಾನಿ ಆಗುವುದಿಲ್ಲ ಆದರೆ ವ್ಯಾಪಾರಿಗಳು ನಾಶವಾಗುತ್ತಾರೆ." (ಇಸ್ಲಾಮಿ ಇಖ್ತೆಸಾದಿ ನಿಝಾಮ್, ಅನ್ವರ್-ಉಲ್-ಉಲೂಮ್, ಸಂಪುಟ-18, ಪುಟ 53) ಇದನ್ನು ಅನುಮತಿಸಬಾರದು ಆದರೆ ಬೆಲೆ ನಿಯಂತ್ರಣವನ್ನು ಅನುಮತಿಸಲಾಗಿದೆ.

ಶಿಕ್ಷಣದ ವ್ಯವಸ್ಥೆಯನ್ನು ಹಝ್ರತ್ ಉಮರ್(ರ) ಬಹಳವಾಗಿ ಅಭಿವೃದ್ಧಿಗೊಳಿಸಿದರು. ಎಲ್ಲ ದೇಶಗಳಲ್ಲಿ ಮದ್ರಸಗಳನ್ನು ಸ್ಥಾಪಿಸಿದರು. ಅವುಗಳಲ್ಲಿ ಪವಿತ್ರ ಖುರ್‌ಆನ್, ಹದೀಸ್, ಫಿಖವನ್ನು ಕಲಿಸಲಾಗುತ್ತಿತ್ತು. ಶ್ರೇಷ್ಠ ಪಂಡಿತರಾದ ಸಹಾಬರನ್ನು ಶಿಕ್ಷಣ ಮತ್ತು ತರಬೇತಿಗಾಗಿ ನೇಮಕಮಾಡಲಾಗಿತ್ತು. ಅಧ್ಯಾಪಕರ ಸಂಬಳವನ್ನು ಸಹ ನಿಶ್ಚಯಿಸಲಾಗಿತ್ತು. (ಅಲ್‌ಫಾರೂಖ್, ಶಿಬ್ಲಿ ನುಮಾನಿ, ಪುಟ-233, ಇಸ್ಲಾಮಿಯಾತ್ ಕರಾಚಿ 2004)

ಅದೇ ರೀತಿ ಹಿಜರಿ ಕ್ಯಾಲೆಂಡರ್ ಹೇಗೆ ಆರಂಭವಾಯಿತು? ಒಂದು ಸಹೀಹ್ ಬುಖಾರಿಯ ವರದಿ ಇದೆ. ಹಝ್ರತ್ ಸಹಲ್ ಬಿನ್ ಸಅದ್ ಹೇಳಿದರು ಸಹಾಬರವರು ಪ್ರವಾದಿ(ಸ)ರವರ ಬೇಸತ್ತಿನಿಂದ ಅಥವಾ ಅವರ ನಿಧನದಿಂದ ದಿನಾಂಕವನ್ನು ಪರಿಗಣಿಸಲಿಲ್ಲ ಬದಲಿಗೆ ಪ್ರವಾದಿ(ಸ)ರು ಮದೀನಾಗೆ ಬಂದ ನಂತರವೇ ದಿನಾಂಕವನ್ನು ಪರಿಗಣಿಸಿದರು.

(ಸಹೀಹ್ ಬುಖಾರಿ, ಕಿತಾಬ್ ಮನಾಖಿಬುಲ್ ಅನ್ಸಾರ್, ಹದೀಸ್-3934) ಅಂದರೆ ವಲಸೆಯ ದಿನದಿಂದ.

ಬುಖಾರಿಯ ವ್ಯಾಖ್ಯಾನಕಾರ ಅಲ್ಲಮ ಇಬ್ನ್ ಹಜಾರ್ ಅಸ್ಕಲಾನಿ ಹೇಳುತ್ತಾರೆ: ಇಮಾಮ್ ಸುಹೈಲಿ ಪ್ರಕಾರ, ಸಹಾಬರವರು ಹಿಜ್ರತ್‌ನಿಂದ ಇತಿಹಾಸವನ್ನು ಆರಂಭಿಸುವ ಕಲ್ಪನೆಯನ್ನು ಅಲ್ಲಾಹನ ಮಾತುಗಳಿಂದ **ಲಮಸ್‌ಜಿದುನ್ ಉಸ್ಸಿಸತ್ತಖ್ವ ಮಿನ್ ಅವ್ವಲಿ ಯೌಮಿನ್** ನಿಂದ ತೆಗೆದುಕೊಂಡಿದ್ದಾರೆ. ಆದ್ದರಿಂದ, **ಮಿನ್ ಯೌಮಿನ್** ಎಂದರೆ ಪ್ರವಾದಿ(ಸ.ಅ) ಮತ್ತು ಅವರ ಸಹಾಬರವರು ಮದೀನಕ್ಕೆ ಪ್ರವೇಶಿಸಿದ ದಿನವಾಗಿತ್ತು. ಎಂದರ್ಥ. **ವಲ್ಲಾಹುಆಲಮು**

ಹಿಜ್ರಿ ಕ್ಯಾಲೆಂಡರ್‌ನ ಅವಶ್ಯಕತೆ ಏಕೆ ಬೀರಿತು? ಈ ಬಗ್ಗೆ ವಿಭಿನ್ನ ಸಂಪ್ರದಾಯಗಳಿವೆ. ಹಝ್ರತ್ ಅಬು ಮೂಸಾ ಅವರು ಹಝ್ರತ್ ಉಮರ್ ಅವರಿಗೆ ಪತ್ರವನ್ನು ಬರೆದರು ನಿಮ್ಮಿಂದ ನಮಗೆ ಪತ್ರಗಳು ಬರುತ್ತವೆ ಆದರೆ ಅವುಗಳ ಮೇಲೆ ಯಾವುದೇ ದಿನಾಂಕ ಇತ್ಯಾದಿಗಳನ್ನು ಬರೆದಿರುವುದಿಲ್ಲ. ಇದರ ನಂತರ, ಹಝ್ರತ್ ಉಮರ್(ರ) ಜನರನ್ನು

ಸಲಹೆಗಾಗಿ ಒಗ್ಗೂಡಿಸಿದರು. ಅಲ್ಲಾಮಾ ಇಬ್ನ್ ಹಜರ್ ಬುಖಾರಿ ಕಿತಾಬ್ ಅಲ್-ಅದಾಬ್‌ನಲ್ಲಿ ಹೇಳಿದ್ದಾರೆ ಮತ್ತು ಹಕೀಮ್ ಮೈಮೂನ್ ಬಿನ್ ಮೆಹ್ರಾನ್ ಮೂಲಕ ಹಝ್ರತ್ ಉಮರ್(ರ) ಅವರ ಸೇವೆಯಲ್ಲಿ ಒಂದು ಚೆಕ್‌ಅನ್ನು ನೀಡಲಾಯಿತು ಅದರ ಮುಕ್ತಾಯದ ಸಮಯ ಶಅಬಾನದ ಆಗಿತ್ತು ಎಂದು ಹೇಳಿದ್ದಾರೆ. ಅದಕ್ಕೆ ಹಝ್ರತ್ ಉಮರ್(ರ)ರವರು ಹೇಳಿದರು, "ಯಾವ ಶಅಬಾನ್?" ಏನು ಹಾದುಹೋಗಿದೆ ಅಥವಾ ನಾವು ಏನನ್ನು ಹಾದು ಹೋಗುತ್ತಿದ್ದೇವೆ ಅಥವಾ ಯಾವ ಶಾಬನ್ ಬರುತ್ತದೆ. ಅವರು ಹೇಳಿದರು, "ಜನರಿಗೆ ತಿಳಿಯಲು ಒಂದು ದಿನಾಂಕವನ್ನು ನಿಗದಿಪಡಿಸಿ."

ಒಬ್ಬ ವ್ಯಕ್ತಿ ಯೆಮನ್‌ನಿಂದ ಬಂದಿದ್ದಾನೆ ಮತ್ತು ಆತನು ಯೆಮನ್‌ನಲ್ಲಿ ಒಂದು ವಿಷಯವನ್ನು ನೋಡಿದ್ದಾನೆ ಅದನ್ನು ದಿನಾಂಕ ಎಂದು ಹೇಳುತ್ತಾರೆ ಎಂದು ಇಬ್ನ್ ಸಿರೀನ್ ಹೇಳುತ್ತಾರೆ. ಅವರು ಅದನ್ನು ಆ ವರ್ಷ ಮತ್ತು ಆ ತಿಂಗಳು ಎಂದು ಬರೆಯುತ್ತಾರೆ. ಇದು ಅತ್ಯುತ್ತಮ ಮಾರ್ಗ ಎಂದು ಹಝ್ರತ್ ಉಮರ್ ಹೇಳಿದರು. ನೀವು ದಿನಾಂಕವನ್ನೂ ಬರೆಯಿರಿ.

ಹಿಜ್ರಿ ಕ್ಯಾಲೆಂಡರ್ ಆರಂಭ, ಯಾರು ಈ ಕ್ಯಾಲೆಂಡರ್ ಆರಂಭಿಸಿದರು? ಈ ಬಗ್ಗೆ ವಿಭಿನ್ನ ಅಭಿಪ್ರಾಯಗಳಿವೆ. ಮೊದಲ ಹೇಳಿಕೆಯ ಪ್ರಕಾರ, ಪವಿತ್ರ ಪ್ರವಾದಿ(ಸ) ರವರು ದಿನಾಂಕವನ್ನು ಸಂಕಲಿಸಲು ಸೂಚಿಸಿದರು ಮತ್ತು ದಿನಾಂಕವನ್ನು ರಬಿ-ಉಲ್-ಅವಲ್ ನಲ್ಲಿ ಬರೆಯಲಾಗಿದೆ. ಆದ್ದರಿಂದ, ಹಾಕಿಮ್ ಇಬ್ನ್ ಶಹಾಬ್ ರವರು ತಮ್ಮ ಗ್ರಂಥ ಅಲ್‌ಇಕ್ಲೀಲ್‌ನಲ್ಲಿ ಇಬ್ನೆ ಶಿಹಾಬ್ ಝುಹ್ರಿ ಅವರಿಂದ ವರದಿ ಮಾಡಿ ಬರೆಯುತ್ತಾರೆ **ಅನ್ನನ್ನಬಿಯ್ಯ ಲಮ್ಮಾ ಖದಿಮಲ್‌ಮದೀನತ ಅಮರ ಬಿತ್ತಾರೀಖ ಫಕುತಿಬ ಫೀ ರಬೀಇಲ್ ಅವ್ವಲ್**. ಪ್ರವಾದಿ(ಸ)ರವರು ಮದೀನಾಗೆ ಬಂದಾಗ, ಅವರು ದಿನಾಂಕ ಬರೆಯಲು ಸೂಚಿಸಿದರು. ಆದ್ದರಿಂದ ಇದನ್ನು ರಬಿ-ಉಲ್-ಅವಲ್ ನಲ್ಲಿ ಬರೆಯಲಾಗಿದೆ. ಅಲ್ಲಮ ಇಬ್ನ್ ಹಜರ್ ಹೇಳುತ್ತಾರೆ ಈ ವರದಿಯು 'ಮುಝಿಲ್' ಕಳ್ಪಕರ ಎಂದು ಹೇಳುತ್ತಾರೆ. ಮುಝಿಲ್ ಎರಡು ಅಥವಾ ಹೆಚ್ಚು ವರದಿಗಾರರು ಅನುಕ್ರಮವಾಗಿ ಇರುವ ವರದಿಯನ್ನು ಉಲ್ಲೇಖಿಸುತ್ತಾರೆ. ಇನ್ನೊಂದು ವರದಿಯ ಪ್ರಕಾರ, ದಿನಾಂಕದ ಆರಂಭವು ಪ್ರವಾದಿ(ಸ) ರವರು ಮದೀನಾಗೆ ವಲಸೆ ಬಂದ ದಿನದಿಂದ ಎಂದಾಗಿದೆ ಮತ್ತು ಸಾಮಾನ್ಯ ವಿಷಯವು ಇದಕ್ಕೆ ವಿರುದ್ಧವಾಗಿದೆ. ಅದೇನಂದರೆ ಹಿಜರಿಯ ದಿನಾಂಕಗಳು ಹಝ್ರತ್ ಉಮರ್(ರ)ರವರ ಖಿಲಾಫತ್ ಕಾಲಘಟ್ಟದಲ್ಲಿ ಎನ್ನಲಾಗುತ್ತದೆ.

ಮುಹಮ್ಮದ್ ಇಬ್ನ್ ಯೂಸುಫ್ ಸಲೇಹಿ, ಸುಬುಲ್ ಅಲ್-ಹುದಾ ವಾ ಅಲ್-ರಶಾದ್ ಫಿ ಸಿರತ್ ಅಲ್-ಇಬಾದ್ ನ ಲೇಖಕ, ಇಬ್ನ್ ಸಲಾಹ್ ಅವರು ಅಬು ತಾಹಿರ್ ಮಹಮ್ಮಿಶ್ ನ ಅಲ್-ಶುರುತ್ ಪುಸ್ತಕದಲ್ಲಿ ಪ್ರವಾದಿ(ಸ)ರು ದಿನಾಂಕವನ್ನು ಬರೆಯಲು ಆದೇಶಿಸಿದರು ಏಕೆಂದರೆ ಪ್ರವಾದಿ(ಸ)ರವರು ನಜ್ರಾನಿನ ಕ್ರೈಸ್ತರಿಗೆ ಪತ್ರ ಬರೆಯಲು ಸೂಚಿಸಿದಾಗ ಹಝ್ರತ್ ಅಲಿ(ರ)ರವರಿಗೆ ಹೇಳಿದರು ಇದರಲ್ಲಿ **ಅಲ್‌ಖಮಸ್ ಮಿನಲ್ ಹಿಜರ್** ಅಂದರೆ ಹಿಜ್ರತ್‌ನ ನಂತರ ಐದನೇ ವರ್ಷ ಎಂದು ಬರೆಯಿರಿ. ಹೀಗಾಗಿ ಮೊದಲ ಇತಿಹಾಸಗಾರರು ಪ್ರವಾದಿ(ಸ) ಆಗಿದ್ದರು ಮತ್ತು ಹಝ್ರತ್ ಉಮರ್(ರ)ರವರು ಇದರಲ್ಲಿ ಪ್ರವಾದಿ(ಸ)ರವರನ್ನು ಅನುಸರಿಸಿದ್ದಾರೆ. ಇನ್ನೊಂದು ದೃಷ್ಟಿಕೋನದ ಪ್ರಕಾರ, ಯಮನ್ ನಲ್ಲಿ ವಾಸಿಸುತ್ತಿದ್ದ ಹಝ್ರತ್ ಯಅಲಾ ಬಿನ್ ಉಮಯ್ಯರವರು ಇತಿಹಾಸವನ್ನು ಆರಂಭಿಸಿದರು. ಇಮಾಮ್ ಅಹ್ಮದ್ ಇದನ್ನು ನಿರೂಪಿಸಿದ್ದಾರೆ, ಆದರೆ ಅದರ ನಡುವೆ, ಅಂದರೆ 'ಅಮರ್ ಮತ್ತು' ಅಲಿ ನಡುವೆ ಅಂತರವಿದೆ. ಮೂರನೆಯ ಮತ್ತು ಅತ್ಯಂತ ಜನಪ್ರಿಯ ದೃಷ್ಟಿಕೋನದ ಪ್ರಕಾರ, ಹಿಜರಿ ಕ್ಯಾಲೆಂಡರಿನ ಇತಿಹಾಸವು ಹಝ್ರತ್ ಉಮರ್(ರ) ರವರ ಖಿಲಾಫತ್ ಕಾಲಘಟ್ಟದಲ್ಲಿ ಆರಂಭವಾಯಿತು.

ಹಿಜ್ರಿ ಕ್ಯಾಲೆಂಡರ್‌ನ್ನು ಹಿಜ್ರತ್‌ನಿಂದ ಏಕೆ ಆರಂಭಿಸಲಾಯಿತು? ಅದರ ವಿವರಣೆ ಇಲ್ಲಿದೆ. ಹಝ್ರತ್ ಉಮರ್(ರ) ವರ್ಷವನ್ನು ನಿರ್ಧರಿಸಲು ಸಲಹೆ ಕೇಳಿದಾಗ, ಒಂದು ಅಭಿಪ್ರಾಯವೆಂದರೆ ಅದು ಪ್ರವಾದಿ(ಸ) ರ ಜನನದೊಂದಿಗೆ ಆರಂಭವಾಗಬೇಕು. ಎರಡನೆಯ ಅಭಿಪ್ರಾಯವೆಂದರೆ ಅದು (ಬೆಸತ್ತಿನಿಂದ) ನಿಮಗೆ ಕಳುಹಿಸಿದ ವರ್ಷದಿಂದ ಆರಂಭವಾಗಬೇಕು. ಮೂರನೆಯ ಅಭಿಪ್ರಾಯವೆಂದರೆ ನಿಮ್ಮ ನಿಧನದ ವರ್ಷದಿಂದ ಆರಂಭಿಸಬೇಕು. ನಿಮ್ಮ(ಸ) (ಹಿಜ್ರತ್) ವಲಸೆಯ ವರ್ಷದಿಂದ ಇದು ಆರಂಭವಾಗಬೇಕು ಎಂಬುದು ನಾಲ್ಕನೆಯ ಅಭಿಪ್ರಾಯ. ಹುಟ್ಟಿದ ವರ್ಷ ಮತ್ತು ನಿಧನದ ದಿನದ ನಿರ್ಣಯದಲ್ಲಿ ಭಿನ್ನಭಿಪ್ರಾಯವಿದ್ದರಿಂದ ವಲಸೆಯ ವರ್ಷದಿಂದ ಆರಂಭಿಸುವುದು ಸೂಕ್ತವೆಂದು ಪರಿಗಣಿಸಲಾಯಿತು. ನಿಧನಗೆ ಸಂಬಂಧಿಸಿದಂತೆ, ಪ್ರವಾದಿ(ಸ) ರವರ ನಿಧನದಿಂದಾಗಿ ಮುಸ್ಲಿಮರಿಗೆ ನೋವು ಮತ್ತು ದುಃಖದ ಅಂಶವಿರುವುದರಿಂದ ಅದನ್ನು ಆಯ್ಕೆ ಮಾಡಲಾಗಿಲ್ಲ. ಆದ್ದರಿಂದ ಸಹಾಬರವರು ಹಿಜ್ರತ್ ವಲಸೆ ಹೋಗಲು ಒಪ್ಪಿದರು.

ಸಹಾಬರು ರಬಿ-ಉಲ್-ಅವ್ವಲ್ ಬದಲಿಗೆ ಮುಹರಮ್‌ನಿಂದ ವರ್ಷವನ್ನು ಏಕೆ ಆರಂಭಿಸಿದರು? ಇದಕ್ಕೆ ಕಾರಣ ಪ್ರವಾದಿ(ಸ) ರವರು ಮುಹರಂ ತಿಂಗಳಲ್ಲಿ ವಲಸೆ ಹೋಗಲು ನಿರ್ಧರಿಸಿದ್ದರು. ಝುಲ್ ಹಜ್ಜದಲ್ಲಿ ಅಖಬ ನಿಷ್ಠೆಯ ಪ್ರತಿಜ್ಞೆ (ಬೈತೆ ಅಖಬ) ನಡೆದಿತ್ತು ಮತ್ತು ಅದು ವಲಸೆಗೆ ನಾಂದಿಯಾಯಿತು. ಹೀಗಾಗಿ, ಅಖಬ ನಿಷ್ಠೆಯ ಪ್ರತಿಜ್ಞೆ ಮತ್ತು ಹಿಜ್ರತ್ ವಲಸೆಯ ನಿರ್ಧಾರದ ನಂತರ ಚಂದ್ರನು ಉದಯಿಸಿದ ತಿಂಗಳು ಮುಹರಂನ ಚಂದ್ರವಾಗಿತ್ತು. ಆದ್ದರಿಂದ, ಇದನ್ನು ಆರಂಭದ ಹಂತವನ್ನಾಗಿ ಮಾಡುವುದು ಸೂಕ್ತವೆಂದು ಪರಿಗಣಿಸಲಾಗಿದೆ. ನನ್ನ ಅಭಿಪ್ರಾಯದಲ್ಲಿ ಇದು ಇಸ್ಲಾಮಿಕ್ ಕ್ಯಾಲೆಂಡರ್‌ನಲ್ಲಿ ಮೊಹರಂ ಆರಂಭದ ಪ್ರಬಲವಾದ ಸಾಕ್ಷಿಯಾಗಿದೆ. (ಫತ್‌ಹುಲ್ ಬಾರಿ ಲಿಇಬ್ನೆ ಹಜರ್, ಸಂಪುಟ-7, ಪುಟಗಳು 314-315, ಕಿತಾಬುಲ್ ಮನಾಕಿಬ್ ಅಲ್-ಅನ್ಸರ್, ಇತಿಹಾಸದ ಅಧ್ಯಾಯ, ಹದೀಸ್-3934, ದಾರ್ ಅಲ್-ರಯ್ಯಾನ್ ಲಿತ್ತುರಾಸ್ ಖಾಹಿರ 1986) (ಸಬ್ಲುಲ್ ಹುದಾ ವರ್‌ರಶ್ಶಾದ್, ಭಾಗ-12, ಪುಟ-36-37, ದಾರುಲ್ ಕುತುಬ್ ಇಲ್ಮಿಯ ಬೈರೂತ್ 1993)

ಪ್ರವಾದಿ(ಸ)ರವರು ಯಾವಾಗ ಮದೀನಾಗೆ ಭೇಟಿ ನೀಡಿದರು? ಈ ಬಗ್ಗೆ ವಿಭಿನ್ನ ಅಭಿಪ್ರಾಯಗಳಿವೆ. ವಿವಿಧ ಸ್ಥಳಗಳಲ್ಲಿ ತಂಗುತ್ತ ಪ್ರವಾದಿ(ಸ) ಅವರು ರಬೀ-ಉಲ್-ಅವಲ್ 14 ನಬವಿ, ಅದರ ಪ್ರಕಾರ ಸೆಪ್ಟೆಂಬರ್ 20, 622ರಂದು ಮದೀನಕ್ಕೆ ತಲುಪಿದರು. ಕೆಲವು ಇತಿಹಾಸಗಾರರ ಪ್ರಕಾರ, ದಿನಾಂಕ 8ನೇ ರಬಿ-ಉಲ್-ಅವ್ವಲ್. ಕೆಲವರ ಪ್ರಕಾರ, ಅವರು ಸಫರ್ ತಿಂಗಳಲ್ಲಿ ಹೊರಟು ರಬಿ-ಉಲ್-ಅವಲ್‌ನಲ್ಲಿ ತಲುಪಿದರು. ಅವರು ತಮ್ಮ ಹಿಜ್ರತ್‌ನ್ನು ರಬ್ಬಿ ಅಲ್-ಅವಲ್‌ನ ಮೊದಲನೆಯ ದಿನ ಮಕ್ಕಾದಿಂದ ಆರಂಭಿಸಿದರು ಮತ್ತು ರಬಿ ಅಲ್-ಅವ್ವಲ್ ನ ಹನ್ನೆರಡನೆ ದಿನದಂದು ಮದೀನಕ್ಕೆ ತಲುಪಿದರು. (ಸೀರತ್ ಖಾತುಮುನ್ನಬೀಈನ್, ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಎಂ.ಎ, ಪುಟ-243)

ಹಿಜ್ರಿ ಕ್ಯಾಲೆಂಡರ್ ಯಾವ ವರ್ಷದಿಂದ ಪ್ರಾರಂಭವಾಯಿತು? ಈ ಬಗ್ಗೆಯೂ ವಿಭಿನ್ನ ಅಭಿಪ್ರಾಯಗಳಿವೆ. ಈ ಕ್ಯಾಲೆಂಡರ್ ಯಾವಾಗ ಆರಂಭವಾಯಿತು? ಇದು 16ನೇ ಹಿಜರಿನಲ್ಲಿ ಸಂಭವಿಸಿದೆ ಎಂದು ಕೆಲವರು ಹೇಳುತ್ತಾರೆ. ಕೆಲವರ ಪ್ರಕಾರ, ಇದು 17ನೇ ಹಿಜ್ರಿನಲ್ಲಿ ನಡೆಯಿತು. ಇದು 18ನೇ ಹಿಜರಿನಲ್ಲಿ ನಡೆಯಿತು ಎಂದು ಕೆಲವರು ಹೇಳುತ್ತಾರೆ. ಕೆಲವರ ಪ್ರಕಾರ, ಇದು 21ನೇ ಹಿಜರಿನಲ್ಲಿ ನಡೆಯಿತು ಎಂದು ಹೇಳುತ್ತಾರೆ. (ಫತ್‌ಹುಲ್ ಬಾರಿ ಲಿಇಬ್ನೆ ಹಜರ್, ಸಂಪುಟ-7, ಪುಟ-315, ಕಿತಾಬ್ ಮನಾಖಿಬುಲ್ ಅನ್ಸಾರ್, ಹದೀಸ್-3934, ದಾರುರ್‍ರೈಯಾನ್ ಲಿತ್ತುರಾಸ್ ಖಾಹಿರ 1986) (ಅಲ್‌ಕಾಮಿಲ್ ಫಿತ್ತಾರೀಖ್ ಲಿಇಬ್ನೆ ಅಸೀರ್, ಭಾಗ-1, ಪುಟ-13, ದಾರುಲ್ ಕುತುಬ್ ಅಲ್‌ಅರಬಿ ಬೈರೂತ್ 2012) (ಶಿಬ್ಲಿ ನೊಮಾನ, ಅಲ್-ಫಾರೂಕ್, ಪುಟ-248, ಇದಾರ ಇಸ್ಲಾಮಿಯಾತ್ ಕರಾಚಿ 2004)

ಆದಾಗ್ಯೂ, ಹೆಚ್ಚಿನವರು ಈ ಕ್ಯಾಲೆಂಡರ್ ಅನ್ನು ಹಝ್ರತ್ ಉಮರ್ ಅವರ ಕಾಲದಲ್ಲಿ ಪ್ರಾರಂಭಿಸಲಾಗಿದೆ ಎಂದು ಒಪ್ಪುತ್ತಾರೆ.

ಇಸ್ಲಾಮಿಕ ನಾಣ್ಯದ ಕುರಿತು ಸಾಮಾನ್ಯ ಚರಿತ್ರೆಗಾರರ ಅಭಿಪ್ರಾಯವೇನೆಂದರೆ, ಮೊತ್ತಮೊದಲ ನಾಣ್ಯ ಅಬ್ದುಲ್‌ಮಲಿಕ್ ಬಿನ್ ಮರ್‌ವಾನ್ ಜಾರಿಗೊಳಿಸಿದ್ದರು. ಆದರೆ ಇಸ್ಲಾಮಿಕ ನಾಣ್ಯ ಹಝ್ರತ್ ಉಮರರ(ರ) ಕಾಲದಲ್ಲಿ ಜಾರಿಯಾಯಿತು ಎಂದು ಮದೀನದ ಕೆಲವು ಚರಿತ್ರೆಗಾರರು ಹೇಳುತ್ತಾರೆ. ಅವುಗಳಲ್ಲಿ ಕೆಲವು ನಾಣ್ಯಗಳಲ್ಲಿ **ಅಲ್‌ಹಮ್ದುಲಿಲ್ಲಾಹ್**, ಕೆಲವಲ್ಲಿ **ಮುಹಮ್ಮದುರ್ರಸೂಲುಲ್ಲಾಹ್** ಮತ್ತು ಕೆಲವಲ್ಲಿ **ಲಾ ಇಲಾಹ ಇಲ್ಲಲ್ಲಾಹ್** ಎಂದು ಕೆತ್ತಲಾಗಿದ್ದುವು. ಒಂದು ಸಂಶೋಧನೆ ಪ್ರಕಾರ ಮೊಟ್ಟಮೊದಲ ಇಸ್ಲಾಮಿಕ ನಾಣ್ಯ ಡಮಸ್ಕಸ್‌ನಲ್ಲಿ ಹಿಜರೀ 17ರಲ್ಲಿ ಜಾರಿಯಾಯಿತು. (ಅಲ್‌ಫಾರೂಖ್, ಶಿಬ್ಲಿ ನುಮಾನಿ, ಪುಟ-250, ಇಸ್ಲಾಮಿಯಾತ್ ಕರಾಚಿ 2004) (ಜುಸ್ತಜೂ ಎ ಮದೀನ, ಪುಟ-310, ಅಬ್ದುಲ್ ಹಮೀದ್ ಖಾದ್ರಿ, ಓರಿಎಂಟಲ್ ಪಬ್ಲಿಕೇಷನ್ಸ್ ಪಾಕಿಸ್ತಾನ್)

ಹಝ್ರತ್ ಉಮರ್(ರ) ತನ್ನ ಖಿಲಾಫತ್ ಕಾಲದಲ್ಲಿ ಆರಂಭಿಸಿದ ಹೊಸ ಸಂಗತಿಗಳನ್ನು ಚರಿತ್ರೆಗಾರರು **ಅವ್ವಲಿಯಾತ್** ಎಂದು ಹೇಳುತ್ತಾರೆ. ಅಲ್ಲಾಮ ಶಿಬ್ಲಿ ನುಮಾನಿ ತನ್ನ ಗ್ರಂಥವಾದ **'ಅಲ್‌ಫಾರೂಖ್'**ನಲ್ಲಿ ಸುಮಾರು 44 ಅವ್ವಲಿಯಾತನ್ನು ನಮೂದಿಸಿದ್ದಾರೆ.

1. ಅವರು ಬೈತುಲ್ ಮಾಲ್‌ನ್ನು ಅಂದರೆ ಖಝಾನೆಯನ್ನು ಸ್ಥಾಪಿಸಿದರು. 2: ನ್ಯಾಯಾಲಯಗಳನ್ನು ಸ್ಥಾಪಿಸಿದರು ಮತ್ತು ಖಾಝಿಗಳನ್ನು ನೇಮಿಸಿದರು. 3: ನಂತರ ದಿನಾಂಕ ಮತ್ತು ವರ್ಷವನ್ನು ಸ್ಥಾಪಿಸಿದರು

ಅದು ಇಂದಿಗೂ ಮುಂದುವರಿಸಲಾಗಿದೆ. 4: ಅಮೀರುಲ್ ಮುಮಿನೀನ್ ಎಂಬ ಬಿರುದನ್ನು ಹಝ್ರತ್ ಉಮರ್(ರ)ರವರು ಕಾಲದ ಖಲೀಫಾಗಿ ಪಡೆಯೋಗಿಸಿದರು. 5: ಮಿಲಿಟರಿ ಕಚೇರಿಯನ್ನು ಸ್ಥಾಪಿಸಿದರು. 6: ಸ್ವಯಂಸೇವಕರ ವೇತನವನ್ನು ನೀಡಿದರು. 7: ಮಾಲ್ ಕಚೇರಿಯನ್ನು ಸ್ಥಾಪಿಸಲಾಗಿದೆ. 8: ಮಾಪನವನ್ನು ಜಾರಿಗೊಳಿಸಿದರು. 9: ಜನಗಣತಿಯನ್ನು ನಡೆಸುವುದು. 10: ಕಾಲುವೆಗಳನ್ನು ಅಗೆಯಿರಿ. 11: ನಗರಗಳನ್ನು ಜನನಿಬಿಡಗೊಳಿಸಿದರು ಉದಾಹರಣೆಗೆ: ಕುಫಾ, ಬಸ್ರಾ, ಖುಸ್ತಾತ್, ಮೊಸುಲ್ ಇತ್ಯಾದಿ. 12: ಎಂದರೆ ದೇಶಗಳು ಆಕ್ರಮಿತ ಪ್ರದೇಶಗಳನ್ನು ಪ್ರಾಂತ್ಯಗಳಾಗಿ ವಿಭಜಿಸಿದರು. ಸಂಖ್ಯೆ 13: ಉಶೂರ್, ಅಂದರೆ, ತೆರಿಗೆಯ ಹತ್ತನೇ ಒಂದು ಭಾಗ. ಉಶುರಾ ಹಝ್ರತ್ ಉಮರ್(ರ) ನ ಆವಿಷ್ಕಾರವಾಗಿದ್ದು, ವ್ಯಾಪಾರಕ್ಕಾಗಿ ವಿದೇಶಕ್ಕೆ ಹೋದ ಮುಸ್ಲಿಮರಿಗೆ ಸ್ಥಳೀಯ ಸಂವಿಧಾನದ ಪ್ರಕಾರ ವ್ಯಾಪಾರ ಸರಕುಗಳ ಮೇಲೆ ಹತ್ತು ಪ್ರತಿಶತ ತೆರಿಗೆ ವಿಧಿಸಲಾಯಿತು. ಈ ಘಟನೆಯ ಬಗ್ಗೆ ಅಬು ಮೂಸಾ ಅಶ್‌ಅರಿ(ರ)ರವರು ಹಝ್ರತ್ ಉಮರ್(ರ)ರವರಿಗೆ ತಿಳಿಸಿದರು. ಹಝ್ರತ್ ಉಮರ್(ರ) ರವರು ನಮ್ಮ ದೇಶಕ್ಕೆ ಬಂದ ಆ ದೇಶಗಳ ವ್ಯಾಪಾರಿಗಳಿಗೆ ಅಷ್ಟೇ ಪ್ರಮಾಣದ ತೆರಿಗೆ ವಿಧಿಸಬೇಕು, ಅಂದರೆ ಅವರಿಂದ ಹತ್ತು ಪ್ರತಿಶತವನ್ನು ಕೂಡ ಸಂಗ್ರಹಿಸಬೇಕು ಎಂದು ಆದೇಶಿಸಿದರು. 14: ಎಂದರೆ ನದಿಯ ಉತ್ಪಾದನೆಯ ಮೇಲೆ ತೆರಿಗೆ ವಿಧಿಸುವುದು ಮತ್ತು ಆದಾಯವನ್ನು ಸಂಗ್ರಹಿಸುವುದು. 15: ಮಿಲಿಟರಿ ವ್ಯಾಪಾರಿಗಳಿಗೆ ದೇಶದಲ್ಲಿ ಬಂದು ವ್ಯಾಪಾರ ಮಾಡಲು ಅವಕಾಶ ನೀಡಲಾಯಿತು. 16: ಜೈಲು ಸ್ಥಾಪಿಸಲಾಗಿದೆ. 17: (ದರ್ರೆ)ಬಾಗಿಲನ್ನು ಬಳಸಲಾಗಿದೆ. 18: ಅವರು ರಾತ್ರಿ ಗಸ್ತು ತಿರುಗುತ್ತಾರೆ ಮತ್ತು ತನ್ನ ಪ್ರಜೆಗಳ ಸ್ಥಿತಿಯನ್ನು ವೀಕ್ಷಿಸುವ ವಿಧಾನವನ್ನು ಕಂಡುಕೊಂಡರು. 19: ಪೊಲೀಸ್ ಇಲಾಖೆಯನ್ನು ಸ್ಥಾಪಿಸಲಾಗಿದೆ. 20: ಮಿಲಿಟರಿ ಬ್ಯಾರಕ್‌ಗಳನ್ನು ಸ್ಥಾಪಿಸಿದರು. 21: ಕುದುರೆಗಳ ಸಂತಾನದಲ್ಲಿ ಅಸೀಲ್ ಹಾಗೂ ಮುಜನ್ನಸ್‌ನಲ್ಲಿರು ವ್ಯತ್ಯಾಸವನ್ನು ತಿಳಿಸಿದರು ಅಲ್ಲಿಯವರೆಗೆ ಅರೇಬಿಯಾದಲ್ಲಿ ಇರಲಿಲ್ಲ. 22: ನಿಯೋಜಿತ ಕರಪತ್ರಗಳು. 23: ಮಕ್ಕಾದಿಂದ ಮದೀನಾಗೆ ಪ್ರಯಾಣಿಕರ ಸೌಕರ್ಯಕ್ಕಾಗಿ ಮನೆಗಳನ್ನು ನಿರ್ಮಿಸಿ. 24: ಅನಾಥರ ಪಾಲನೆಗಾಗಿ ಜೀವನಾಧಾರವನ್ನು ಕಂಡುಹಿಡಿದರು. 25: ವಿವಿಧ ನಗರಗಳಲ್ಲಿ ಅತಿಥಿಗೃಹಗಳನ್ನು ನಿರ್ಮಿಸಿದರು. 26: ಅರಬ್ಬರು ನಾಸ್ತಿಕರಾಗಿದ್ದರೂ ಅವರನ್ನು ಗುಲಾಮರನ್ನಾಗಿ ಮಾಡಲು ಸಾಧ್ಯವಿಲ್ಲ ಎಂಬ ನಿಯಮವನ್ನು ಜಾರಿಗೊಳಿಸಿದರು. 27: ಬಡವರು ಪ್ರಸ್ತುತ ಕ್ರಿಶ್ಚಿಯನ್ನರು ಮತ್ತು ಯಹೂದಿಗಳ ಜೀವನಾಧಾರವನ್ನು ಕಲ್ಪಿಸಿಕೊಟ್ಟರು. 28: ಶಾಲೆಗಳನ್ನು ಸ್ಥಾಪಿಸಿದರು. 29: ಶಿಕ್ಷಕರನ್ನು ಮತ್ತು ಮದರಸಾ ನಾಯಕರನ್ನು ನೇಮಿಸಿ, ವೇತನವನ್ನು ನಿಗದಿಪಡಿಸಿ. 30: ಪರಿಶ್ರಮದಿಂದ ಪವಿತ್ರ ಖುರ್‌ಆನ್‌ಅನ್ನು ಸಂಕಲಿಸಲು ಹಝ್ರತ್ ಅಬು ಬಕರ್(ರ) ಅವರನ್ನು ಮನವೊಲಿಸಿದರು ಮತ್ತು ಈ ಕಾರ್ಯವನ್ನು ಅವರ ಸ್ವಂತ ಕಾಳಜಿಯಿಂದ ಸಾಧಿಸಿದರು. 31: ಊಹೆಯ ತತ್ವವನ್ನು ಸ್ಥಾಪಿಸಲಾಗಿದೆ. 32: ಕಡ್ಡಾಯ ಕರ್ತವ್ಯಗಳಲ್ಲಿ 'ಅವ್ಲ್' ಸಮಸ್ಯೆಯನ್ನು ಆವಿಷ್ಕರಿಸುವುದು, ಅಂದರೆ, ಜೀವನಾಧಾರ ಇಲ್ಲದ ಕಾರಣಕ್ಕಾಗಿ ಕೆಲವು ಜನರನ್ನು ಕುಟುಂಬಕ್ಕೆ ಸೇರಿಸುವುದು. 33: ಅವರು ತರಾವೀಹ್ ನಮಾಝುನ್ನು ಬಜಮಾಅತ್ ನಿರ್ವಹಿಸುವುದನ್ನು ಸ್ಥಾಪಿಸಿದರು. 34: ಏಕಕಾಲದಲ್ಲಿ ನೀಡಲಾದ ಮೂರು ವಿಚ್ಛೇದನಗಳನ್ನು 'ತಲಾಖೆ ಬಾಯಿನ್' ಎಂದು ಘೋಷಿಸಲಾಯಿತು. ಅವರು ಅದನ್ನು ಶಿಕ್ಷೆಯಾಗಿ ಮಾಡಿದರು. 35: ಆಲ್ಕೋಹಾಲ್ ಸೇವಿಸಿದವರನ್ನು ಎಂಭತ್ತು ಚಾಟಿಏಟು ಶಿಕ್ಷೆಯನ್ನಾಗಿ ನೀಡಲು ಆದೇಶಿಸಿದರು. 36: ವ್ಯಾಪಾರ ಕುದುರೆಗಳಿಗೆ ಝಕಾತ್ ವಿಧಿಸಲಾಯಿತು. 37: ಅವರು ಬನೂ ಸಅಲಬ್‌ನ ಕ್ರೈಸ್ತರಿಗೆ ಝಕಾತನ್ನು ನಿಷ್ಚಯಿಸಿದರು. 38: ವಕ್ಫ್ ವಿಧಾನವನ್ನು ಕಂಡುಹಿಡಿದರು. 39: ಅಂತ್ಯಕ್ರಿಯೆಯ ಪ್ರಾರ್ಥನೆಯಲ್ಲಿ ಎಲ್ಲಾ ಜನರು ನಾಲ್ಕು ತಕ್ಬೀರ್‌ಗಳನ್ನು ಒಪ್ಪಿಕೊಳ್ಳುವಂತೆ ಮಾಡಲಾಯಿತು. ಅಂದಹಾಗೆ, ಸಾಮಾನ್ಯವಾಗಿ, ಇದು ಮಸ್‌ನೋನ್ ಆಗಿದೆ. ಕೊನೆಯ ತಕ್ಬೀರ್ ಗೆ ಸಲಾಮ್‌ಕಿಂತ ಮೊದಲು ಮೊದಲ ತಕ್ಬೀರ್ ನೊಂದಿಗೆ ಮೂರು ತಕ್ಬೀರ್ ಅಥವಾ ನಾಲ್ಕು ಇವೆ. 40: ಅವರು ಮಸೀದಿಗಳಲ್ಲಿ ಬೋಧಿಸುವ ವಿಧಾನವನ್ನು ಸ್ಥಾಪಿಸಿದರು ಮತ್ತು ಅವರ ಅನುಮತಿಯೊಂದಿಗೆ ತಮೀಮ್‌ದಾರಿಯವರು ಬೋಧಿಸಿದರು ಮತ್ತು ಇದು ಇಸ್ಲಾಂನಲ್ಲಿ ಮೊದಲ ಧರ್ಮೋಪದೇಶವಾಗಿದೆ. 41: ಇಮಾಮ್‌ಗಳು ಮತ್ತು ಮುಅಝ್ಝಿನರಿಗಾಗಿ ಸಂಬಳವನ್ನು ನೀಡಿದರು. 42: ಮಸೀದಿಗಳಲ್ಲಿ ರಾತ್ರಿಯಲ್ಲಿ ಬೆಳಕಿನ ವ್ಯವಸ್ಥೆ ಮಾಡಿದರು. 43: ಲೇವಡಿ ಮಾಡಿದವರನ್ನು ಶಿಕ್ಷೆ ನೀಡಿದರು. 44: ಗಝುಲ್ ಕಾವ್ಯದಲ್ಲಿ ಮಹಿಳೆಯರ ಹೆಸರನ್ನು ಬಳಸುವುದನ್ನು ನಿಷೇಧಿಸಿದರು, ಅದಾಗ್ಯೂ ಈ ಪದ್ಧತಿಯು ಅರೇಬಿಯಾದಲ್ಲಿ ಬಹಳ ಹಿಂದಿನಿಂದಲೂ ಅಭ್ಯಾಸ ಮಾಡಲಾಗುತ್ತಿತ್ತು. ಅಲ್ಲಮ ಶಿಬ್ಲಿ ಬರೆಯುತ್ತಾರೆ ಅದಲ್ಲದೇ ಹಝ್ರತ್ ಉಮರರ(ರ) ಬೇರೆಯೂ ಅವ್ವಲಿಯಾತ್ ಇವೆ. ಅವುಗಳನ್ನು ಧೈರ್ಯ್ಯಭಯದ ಕಾರಣದಿಂದ ಪ್ರಸ್ತಾಪಿಸಲಾಗುತ್ತಿಲ್ಲ.

(ಶಿಬ್ಲಿ ನೊಮಾನಿ, ಅಲ್-ಫಾರೂಕ್, ಪುಟಗಳು 401 ರಿಂದ 403, 212, ದಾರ್ ಅಲ್-ಇಶಾತ್ ಕರಾಚಿ 1991)

ಈ ಪ್ರಸ್ತಾಪ ಮುಂದುವರೆಯುವುದು. ಇನ್ಶಾ ಅಲ್ಲಾಹ್. ಈಗ ನಾನು ಕೆಲವು ದಿವಂಗತರ ಬಗ್ಗೆ ಪ್ರಸ್ತಾಪಿಸುವೆನು. ಜುಮಾ ನಮಾಝಿನ ನಂತರ ಅವರ ಜನಾಝ ನಮಾಝ್ ನಿರ್ವಹಿಸುವೆನು.

ಮೊದಲ ಪ್ರಸ್ತಾಪ ಇಂಡೋನೇಶ್ಯದ ಸನ್ಮಾನ್ಯ ಸುರಿಪ್‌ತೋ ಹಾದಿ ಸಿಸ್‌ವೋಯೋ ಸಾಹಿಬ್‌ರದ್ದಾಗಿದೆ. 79ನೇ ವಯಸ್ಸಿನಲ್ಲಿ ಕಳೆದ ತಿಂಗಳು ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಅವರು 21ನೇ ವಯಸ್ಸಿನಲ್ಲಿ ಬೈಅತ್ ಮಾಡಿದ್ದರು ಮತ್ತು ಆ ಸಮಯದಲ್ಲಿ ಸ್ಥಿರಚಿತ್ತರಾಗಿ ಇದ್ದರು. ದಿವಂಗತರು ಪತ್ನಿಯನ್ನು ಮತ್ತು ಎಂಟು ಮಕ್ಕಳನ್ನು ಅಗಲಿರುವರು. ಒಬ್ಬ ಮಗನು ಮುಬಲ್ಲಿಗ್ ಆಗಿ ಸೇವೆ ಸಲ್ಲಿಸುತ್ತಿದ್ದಾರೆ. ಸನ್ಮಾನ್ಯರು ಹಲವು ಬಾರಿ ಜಮಾಅತಿನ ಸದರ್ ಆಗಿ ಸೇವೆ ಸಲ್ಲಿಸಿದ್ದರು. ದಾರುಲ್‌ಖಝಾ ಇಂಡೋನೇಶ್ಯದಲ್ಲಿ ಖಾಝಿಯಾಗಿಯೂ ಸೇವೆ ಸಲ್ಲಿಸುವ ಸೌಭಾಗ್ಯವನ್ನು ಪಡೆದಿದ್ದರು. ತಬ್ಲೀಗ್ ಮಾಡಲು ಬಹಳ ಆಸಕ್ತಿ ಹೊಂದಿದ್ದರು. ಕ್ರಿಯಾಶೀಲರಾದ ತಬ್ಲೀಗ್ ಮಾಡುವ ವ್ಯಕ್ತಿಯಾಗಿದ್ದರು. ಯಾವುದೇ ರೀತಿ ಪರಿಸ್ಥಿತಿಯಲ್ಲೂ ತಬ್ಲೀಗ್ ಮಾಡುವ ಆವೇಶ ಕೊನೆಗೊಂಡಿರಲಿಲ್ಲ. ಅವರ ಮಗನಾದ ಮುಬಲ್ಲಿಗ್ ಅರ್‌ವಾನ್ ಹಬೀಬ್ ಹೇಳುತ್ತಾರೆ: ಹಲವು ಬಾರಿ ಬೈಕನ್ನು ಯಾರದಾದರೂ ಮನೆಯಲ್ಲಿ ಇಟ್ಟುಕೊಂಡು 20 ಕಿಲೋಮೀಟರಿಗೂ ಹೆಚ್ಚು ದೂರಕ್ಕೆ ಕಾಲ್ನಡಿಗೆಯಾಗಿ ತಬ್ಲೀಗ್ ಮಾಡಲು ಹೋಗುತ್ತಿದ್ದರು. ಬೇರೆ ಗ್ರಾಮಕ್ಕೆ ಹೋಗಲು ಕೆರೆ ಮತ್ತು ಮಲೆಗಳನ್ನು ಪಾರು ಮಾಡಿ ಹೋಗುತ್ತಿದ್ದರು. ಆ ಯಾತ್ರೆ ಬಹಳ ದುಷ್ಕರವಾಗಿರುತ್ತಿತ್ತು. ತಂದೆಯವರು ಬಹಳ ಪರಿಶ್ರಮಿ ವ್ಯಕ್ತಿಯಾಗಿದ್ದರು. ತಂದೆಯವರು ಟೀಚರ್ ಆಗಿ ಸೇವೆ ಸಲ್ಲಿಸುತ್ತಿದ್ದಾಗ ಅವರು ಸ್ಕೂಲಿನ ಪ್ರಿನ್ಸಿಪಲ್‌ರೊಡನೆ ಹೀಗೆ ವಿನಂತಿಸಿದ್ದರು: ಅವರ ಕಲಿಸುವ ದಿನವನ್ನು ವಾರಕ್ಕೆ ನಾಲ್ಕು ದಿನಗಳಿಗೆ ಸೀಮಿತಗೊಳಿಸಬೇಕು. ಅಂದರೆ ಅವರಿಗೆ ಸ್ಕೂಲಿನ ಕ್ಲಾಸುಗಳು ಎಷ್ಟಿದೆಯೋ ಅವುಗಳನ್ನು ನಾಲ್ಕು ದಿನಗಳಲ್ಲೆ ಪೂರ್ತಿಗಳಲ್ಲೇ ಪೂರ್ತಿಗೊಳಿಸಿಕೊಂಡು ಬಾಕಿ ದಿವಸ ರಜೆಕೊಡಲು ಹೇಳುತ್ತಿದ್ದರು. ಹೀಗೆ ಅವರಿಗೆ ತಬ್ಲೀಗ್ ಮಾಡಲು ಹೆಚ್ಚು ಸಮಯ ಸಿಗುತ್ತಿತ್ತು. ಗುರುವಾರದಂದು ಸ್ಕೂಲಿನಿಂದ ನೇರವಾಗಿ ತಬ್ಲೀಗಿಗಾಗಿ ಹೋಗುತ್ತಿದ್ದರು ಮತ್ತು ರವಿವಾರ ಸಂಜೆಗೆ ಮನೆಗೆ ಮರಳಿ ಬರುತ್ತಿದ್ದರು. ಕೆಲವೊಮ್ಮೆ ಸೋಮವಾರ ಬೆಳಿಗ್ಗೆ ಮನೆಗೆ ಮರಳುತ್ತಿದ್ದರು.

ಮುಬಲ್ಲಿಗ್ ಬಶಾರತ್ ಅಹ್ಮದ್ ಸಾಹಿಬ್ ಬರೆಯುತ್ತಾರೆ: ಮಧ್ಯ ಜಾವದ ವೋನೋಸೂಬು ಪ್ರದೇಶದಲ್ಲಿ ಹತ್ತು ಜಮಾಅತುಗಳು ಅವರ ಮೂಲಕ ಸ್ಥಾಪಿತವಾಗಿದ್ದುವು. ಎಲ್ಲ ಸ್ಥಿತಿಯಲ್ಲೂ ತಹಜ್ಜುದ್ ಕಡೆಗೆ ವಿಶೇಷ ಗಮನವಿತ್ತು. ಎಲ್ಲ ಪದವಿಯ ಜನರೊಡನೆ ಬಹಳ ಗೌರವಭಾವ ಮತ್ತು ಸೌಮ್ಯವಾಗಿ ವರ್ತಿಸುತ್ತಿದ್ದರು. ಒಂದು ಸಲ ಅವರು ಹೇಳಿದರು: ಮರಣದ ತನಕ ತಬ್ಲೀಗಿನಲ್ಲಿ ನಿರತನಾಗಿ ಇರುವುದಾಗಿದೆ ನನ್ನ ಬಯಕೆ. ಇದರಲ್ಲೇ ನನ್ನ ಖುಶಿ ಮತ್ತು ಆರೋಗ್ಯದ ಕೀಲಿಗೈಯಿದೆ. ಮುಬಲ್ಲಿಗ್ ಅಹ್ಮದ್ ಹಿದಾಯತ್ ಸಾಹಿಬ್ ಹೇಳುತ್ತಾರೆ: ದಿವಂಗತರು ಒಬ್ಬ ಧೈರ್ಯಶಾಲಿ ತಬ್ಲೀಗ್ ಮಾಡುವ ವ್ಯಕ್ತಿಯಾಗಿದ್ದರು. ವಿರೋಧಿಗಳಿಂದ ಬೆದರಿಕೆ ಉಂಟಾಗುವಾಗ ಎಂದಿಗೂ ಭಯಪಡುತ್ತಿರಲಿಲ್ಲ ಮತ್ತು ಕೆಚ್ಚೆದೆಯಿಂದ ಅದನ್ನು ಎದುರಿಸುತ್ತಿದ್ದರು. ಅಲ್ಲಾಹನು ಅವರೊಡನೆ ಮಗ್‌ಫಿರತ್ ಮತ್ತು ಕಾರುಣ್ಯದಿಂದ ವರ್ತಿಸಲಿ.

ಮುಂದಿನ ಜನಾಝ ನಂಕಾನ ಜಿಲ್ಲೆಯ ಅಲ್ಲಾದಾದ್ ಸಾಹಿಬ್ ಘೋಡೂರ ಮಗನಾದ ಚೌಧರಿ ಬಶೀರ್ ಅಹ್ಮದ್ ಭಟ್ಟಿ ಸಾಹಿಬ್‌ರದ್ದಾಗಿದೆ. ಅವರು 95ನೇ ವಯಸ್ಸಿನಲ್ಲಿ ಕಳೆದ ತಿಂಗಳು ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಅವರ ಮಗನಾದ ಮುಹಮ್ಮದ್ ಅಫ್‌ಝುಲ್ ಭಟ್ಟಿ ಸಾಹಿಬ್ ತನ್ಝಾನಿಯದ ಮುಬಲ್ಲಿಗ್ ಆಗಿರುವರು. ಅವರು ಹೇಳುತ್ತಾರೆ: ತಂದೆಯವರು ಜನ್ಮತಃ ಅಹ್ಮದಿಯಾಗಿದ್ದರು. ನಮಾಝ್ ಮತ್ತು ಉಪವಾಸವನ್ನು ಪಾಲಿಸುತ್ತಿದ್ದರು. ನೀತಿವಂತರೂ ನೇರಮಾತಿನವರೂ ಆಗಿದ್ದರು. ಅಹ್ಮದಿಯ್ಯತ್ ಮತ್ತು ಖಿಲಾಫತ್‌ನೊಂದಿಗೆ ಅಪಾರವಾದ ಪ್ರೀತಿಯಿತ್ತು. ಕಿರಿವಯಸ್ಸಿನಲ್ಲೇ ಖಾದಿಯಾನಿನ ಜಲ್ಸಗೆ ಹೋಗುತ್ತಿದ್ದರು. ಗ್ರಾಮದಲ್ಲಿ ಮಂತ್ರಿಸಿ ಹಾರ ಕಟ್ಟುವವರನ್ನು ಜನರು ಬಹಳವಾಗಿ ಹೆದರುತ್ತಿದ್ದರು. ನಮ್ಮ ದೇಶದಲ್ಲಿ ಇದು ಸರ್ವಸಾಧಾರಣವಾಗಿತ್ತು. ಈ ಮಂತ್ರವಾದಿಗಳನ್ನು ಹೆದರಬೇಡಿರಿ. ಅವರು ಅಲ್ಲಾಹನ ಇಚ್ಛೆಯಿಲ್ಲದೇ ನಿಮಗೆ ಯಾವುದೇ ನಷ್ಟವನ್ನು ಉಂಟುಮಾಡಲಾರರು ಎಂದು ಜನರೊಡನೆ ನನ್ನ ತಂದೆ ಹೇಳುತ್ತಿದ್ದರು. ಅವರೊಡನೆ ಜನರು ಹೀಗೆ ಹೇಳುತ್ತಿದ್ದರು:

ನೀವು ಅಹ್ಮದಿಯರಾಗಿರುವಿರಿ. ನೀವು ಇವುಗಳನ್ನು ನಂಬುವುದಿಲ್ಲ. ಆದ್ದರಿಂದ ನಿಮಗೆ ಯಾವುದೇ ಕೇಡು ಆಗುತ್ತಿಲ್ಲ. ಆದರೆ ನಮಗೆ ಬಹಳ ಭಯವಿದೆ. 1953ರಲ್ಲಿ ಪಿತೂರಿ ಶುರುವಾದಾಗ, ಅಹ್ಮದಿಯರ ವಿರೋಧಿಗಳು ಆ ಪ್ರದೇಶದಲ್ಲಿ ಮೆರವಣಿಗೆ ನಡೆಸಿದರು. ಅಹ್ಮದಿಯರ ಮನೆಗಳಿಗೆ ಬೆಂಕಿ ಹಚ್ಚಲು ಯೋಜನೆ ಮಾಡಿದರು. ಸಮೀಪ ಗ್ರಾಮದಲ್ಲಿ ಸಂಬಂಧಿಕರಾದ ಮುಖಂಡರು ಇದ್ದರು. ಅವರು ಬಹಳ ಪ್ರಭಾವಶಾಲಿ ವ್ಯಕ್ತಿಗಳಾಗಿದ್ದರು. ಆದರೆ ಅಹ್ಮದಿಯಾಗಿರಲಿಲ್ಲ. ಅವರಲ್ಲಿ ಕೆಲವರು ತಂದೆಯ ಬಳಿಗೆ ಬಂದು ಹೀಗೆ ಹೇಳಿದರು: ಅಹ್ಮದೀ ಡೇರೆಗಳಲ್ಲಿ ತಂಗಿರುವ ನಿಮ್ಮ ಸಂಬಂಧಿಕರೊಡನೆ ತಿಳಿಹೇಳಿರಿ. ಅಲ್ಲಿಂದ ಹೊರಟು ಹೋಗಲು ಹೇಳಿರಿ. ನಾಳೆ ಅಲ್ಲಿ ಬೆಂಕಿ ಹಚ್ಚುವ ಪ್ರೋಗ್ರಾಂ ಇದೆ. ಆದ್ದರಿಂದ ಅಹ್ಮದಿಯ್ಯತನ್ನು ನಿರಾಕರಿಸಲಿ. ಇಲ್ಲದಿದ್ದರೆ ಪರಿಣಾಮ ಒಳ್ಳೆಯದಾಗಲಿಕ್ಕೆ ಇಲ್ಲ. ಹೀಗೆ ತಾತ್ಕಾಲಿಕವಾಗಿ ಅಹ್ಮದಿಯ್ಯತನ್ನು ನಿರಾಕರಿಸಿರಿ, ಮೆರವಣಿಗೆ ಆದ ನಂತರ ಮರಳಿಬಂದರಾಯಿತು ಎಂದು ಅವರೊಡನೆ ಹೇಳಲಾದಾಗ, ಅವರು ಹೇಳಿದರು: ನೀವು ಚಿಂತಿಸಬೇಡಿರಿ. ನಾವು ಬಹಳ ಚಿಂತನ ಮಂಥನ ನಡೆಸಿ ಅಹ್ಮದಿಯ್ಯತ್ತನ್ನು ಸ್ವೀಕರಿಸಿದ್ದೇವೆ. ನಮಗೆ ಯಾವುದೇ ಕೇಡು ಬರುವುದಿಲ್ಲ. ನಾವು ಅಹ್ಮದಿಯ್ಯತಿಗಾಗಿ ತ್ಯಾಗಮಾಡಲು ಸನ್ನದ್ಧರಾಗಿದ್ದೇವೆ, ಆದರೆ ಒಂದು ನಿಮಿಷಕ್ಕಾದರೂ ನಮ್ಮ ವಿಶ್ವಾಸದಿಂದ ಹಿಂದೆಸರಿಯಲು ತಯಾರಲ್ಲ. ನಿಮಗೆ ಯಾವುದೇ ಸಹಾಯ ಮಾಡಲು ಸಾಧ್ಯವಲ್ಲವಾದರೆ, ಮಾಡಬೇಡಿರಿ. ನಮ್ಮ ಭರವಸೆ ಅಲ್ಲಾಹನ ಮೇಲಾಗಿದೆ. ಅದರಂತೆ ಆ ಮೆರವಣಿಗೆ ಸ್ವಲ್ಪ ದೂರದ ತನಕ ಹೋದ ಕೂಡಲೇ ಚೆಲ್ಲಾಪಿಲ್ಲಿಯಾಯಿತು. ಅಹ್ಮದಿಯರ ಡೇರೆಯ ತನಕ ಬರಲು ಅವರಿಗೆ ಧೈರ್ಯ ಬರಲಿಲ್ಲ. ದಿವಂಗತರು ಇಬ್ಬರು ಪುತ್ರಿಯರನ್ನು ಮತ್ತು ಐವರು ಪುತ್ರರನ್ನು ಅಗಲಿರುವರು. ಒಬ್ಬ ಮಗನಾದ ಸನ್ಮಾನ್ಯ ಅಫ್‌ಝಲ್ ಭಟ್ಟಿ ಸಾಹಿಬ್‌ರು ತನ್ಸಾನಿಯದಲ್ಲಿ ಸೇವೆ ಸಲ್ಲಿಸಲು ಸೌಭಾಗ್ಯ ಪಡೆಯುತ್ತಿದ್ದಾರೆ. ಕರ್ಮಮೈದಾನದಲ್ಲಿ ಇರುವ ಕಾರಣದಿಂದ ಜನಾಝ ಮತ್ತು ದಫನ್ ಕ್ರಿಯೆಗಳಲ್ಲಿ ಭಾಗವಹಿಸಲು ಸಾಧ್ಯವಾಗಲಿಲ್ಲ. ಅಲ್ಲಾಹನು ದಿವಂಗತರ ಪದವಿಗಳನ್ನು ಉನ್ನತಗೊಳಿಸಲಿ. ಅವರ ಮಕ್ಕಳಿಗೂ ಅವರ ಒಳಿತುಗಳನ್ನು ಜಾರಿಯಲ್ಲಿರಿಸಲು ಸೌಭಾಗ್ಯ ನೀಡಲಿ. ಜನಾಝದಲ್ಲಿ ಭಾಗವಹಿಸಲು ಸಾಧ್ಯವಾಗದ ಮಗನಿಗೂ ಸಹನೆ ಮತ್ತು ಧೈರ್ಯವನ್ನು ನೀಡಲಿ.

ಮುಂದಿನ ಜನಾಝ ರಬ್ವದ ದಾರುನ್ನಸ್ರ್ ಗರ್ಬಿಯ ಚೌಧರಿ ಅಲ್ಲಾ ರಖಾ ಮಲ್‌ಹಿ ಸಾಹಿಬ್‌ರ ಮಗನಾದ ಹಮೀದುಲ್ಲಾಹ್ ಖಾದಿಂ ಸಾಹಿಬ್‌ರದ್ದಾಗಿದೆ. 82ನೇ ವಯಸ್ಸಿನಲ್ಲಿ ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಅವರು ಹಝ್ರತ್ ಮಸೀಹ್ ಮೌಊದ್‌ರ ಸಹಾಬಿಯಾಗಿದ್ದ ಚೌಧರಿ ಅಲ್ಲಾಬಕ್ಷ್ ಸಾಹಿಬ್‌ರ ಮೊಮ್ಮಗ ಮತ್ತು ಮುಬಲ್ಲಿಗ್ ನಸ್ರುಲ್ಲಾಹ್ ಮಲ್‌ಹಿ ಶಹೀದ್‌ರ ತಂದೆಯಾಗಿದ್ದರು. ದಿವಂಗತರು ಉಪವಾಸ ಮತ್ತು ನಮಾಝನ್ನು ಅನುಷ್ಠಿಸುವವರು, ಸರಳಸ್ವಭಾವಿ, ಸಭ್ಯ, ಬಡವರನ್ನು ಸಹಾಯ ಮಾಡುವ ಒಬ್ಬ ನಿಷ್ಠಾವಂತ ತ್ಯಾಗಿಯಾದ ಅಹ್ಮದಿಯಾಗಿದ್ದರು. ಉದ್ಯೋಗದಲ್ಲಿರುವಾಗ ವಿರೋಧವನ್ನು ಬಹಳ ಧೈರ್ಯದಿಂದ ಕೆಚ್ಚೆದೆಯಿಂದ ಎದುರಿಸುತ್ತಿದ್ದರು. ಅವರ ಒಬ್ಬ ಮಗನು ವಖ್ಫೇ ಝಿಂದಗಿಯಾಗಿರುವರು. ರಬ್ವದಲ್ಲಿ ತಾಹಿರ್ ಹಾರ್ಟಿನಲ್ಲಿ ಕೆಲಸ ಮಾಡುತ್ತಿದ್ದಾರೆ. ಅಲ್ಲಾಹನು ಅವರೊಡನೆ ಮಗ್‌ಫಿರತ್ ಮತ್ತು ಕಾರುಣ್ಯದಿಂದ ವರ್ತಿಸಲಿ.

ಮುಂದಿನ ಜನಾಝ ಪಿಶಾವರಿನ ಮುಹಮ್ಮದ್ ಅಲಿ ಖಾನ್ ಸಾಹಿಬ್‌ರದ್ದಾಗಿದೆ. ಅವರು ಶರೀಫುಲ್ಲಾಹ್ ಸಾಹಿಬ್‌ರ ಮಗನಾಗಿದ್ದರು. 89ನೇ ವಯಸ್ಸಿನಲ್ಲಿ ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಅಲ್ಲಾಹನ ಅನುಗ್ರಹದಿಂದ 1/8 ಭಾಗದ ವಸಿಯ್ಯತ್ ಮಾಡಿದ್ದರು. ಮೂವರು ಪುತ್ರಿಯರನ್ನು ಮತ್ತು ಏಳು ಪುತ್ರರನ್ನು ಅಗಲಿರುವರು. ಇಸ್ಲಮಾಬಾದಿನಲ್ಲಿ ಇರುವ ಬುರ್‌ಹಾನ್ ಸಾಹಿಬ್‌ರ ಪತ್ನಿಯಾದ ಸಲೀಮ ಸಾಹಿಬ ಅವರ ಒಬ್ಬಳು ಮಗಳಾಗಿರುವರು. ಅವರು ಬರೆಯುತ್ತಾರೆ: ಅವರ ಕುಟುಂಬ ಮೊದಲು ಲಾಹೋರಿಗಳಾಗಿದ್ದರು. ಅನಂತರ 1954ರಲ್ಲಿ ಹಝ್ರತ್ ಖಲೀಫತುಲ್ ಮಸೀಹ್ ಸಾನಿಯರ ಕಾಲದಲ್ಲಿ ಬೈಅತ್ ಮಾಡಿಕೊಂಡು ಮರಣದ ವರೆಗೆ ಜಮಾಅತ್ ಮತ್ತು ಖಿಲಾಫತಿನೊಂದಿಗೆ ಸೇರಿಕೊಂಡಿದ್ದರು. ಧಾರ್ಮಿಕ ಅಭಿಮಾನ ಮತ್ತು ಜಮಾಅತಿನೊಂದಿಗೆ ಆಳವಾದ ಸಂಬಂಧವನ್ನು ಸ್ಥಾಪಿಸಿದ್ದರು. ಅವರ ತಂದೆ 1954ರಲ್ಲಿ ಬೈಅತ್ ಮಾಡಿದ್ದರು. ಹೇಗಿದ್ದರೂ ಅವರಿಗೆ ಜಮಾಅತಿನ ಸೇವೆ ಮಾಡಲು ಸೌಭಾಗ್ಯ ಸಿಕ್ಕಿತ್ತು. ಖುದ್ದಾಮುಲ್ ಅಹ್ಮದಿಯದ ಜಿಲ್ಲಾ ಖಾಇದ್ ಆಗಿದ್ದರು. ಅನಂತರ ವಸಿಯ್ಯತ್ ಸೆಕ್ರಟರಿ, ತಾಲೀಮುಲ್ ಖುರ್‌ಆನ್ ಸೆಕ್ರಟರಿ ಮುಂತಾದ ಸೇವೆಯನ್ನು ಸಲ್ಲಿಸಿದರು. ಹಝ್ರತ್ ಮಸೀಹ್ ಮೌಊದ್‌ರ(ಅ) ಗ್ರಂಥಗಳನ್ನು ಬಹಳ ಗಹನವಾಗಿ ಓದುತ್ತಿದ್ದರು. ಪವಿತ್ರ ಖುರ್‌ಆನಿನೊಂದಿಗೆ ಅವರಿಗೆ ಅಪಾರವಾದ ಪ್ರೀತಿಯಿತ್ತು. ಸದಾ ಪವಿತ್ರ ಖುರ್‌ಆನಿನ ಪಾರಾಯಣ ಮಾಡುತ್ತಿದ್ದರು. ಪವಿತ್ರ ಖುರ್‌ಆನಿನ ಬಹುತೇಕ ಭಾಗ ಅವರಿಗೆ ಕಂಠಪಾಠವಾಗಿತ್ತು. ದುಆ ಮಾಡುವ, ಅತಿಥಿ ಸತ್ಕಾರ ಮಾಡುವ, ಸತ್ಯಸಂಧ ಮತ್ತು ನಿಷ್ಠಾವಂತ ವ್ಯಕ್ತಿಯಾಗಿದ್ದರು. ದುರೂದ್ ಪ್ರಾರ್ಥನೆ ಬಹಳವಾಗಿ ಮಾಡುತ್ತಿದ್ದರು. ಜನರಿಗೆ ಬಹಳ ಧನಸಹಾಯ ಮಾಡುತ್ತಿದ್ದರು. ಅಹ್ಮದಿಯ್ಯತ್ ಬಿಟ್ಟರೆ ನಾವು ನಿಮ್ಮ ಪಾದಗಳಲ್ಲಿ ಅರ್ಪಣೆಗೊಳ್ಳಲು ತಯಾರಾಗಿರುವೆವೆ ಎಂದ ಅವರ ಅಹ್ಮದಿಯೇತರ ಸಂಬಂಧಿಕರು ಹೇಳಿದ್ದರು. ನನ್ನ ತಂದೆ ಅವರಿಗೆ ಹೀಗೆ ಉತ್ತರಿಸಿದರು: ನನಗೆ ನಿಮ್ಮ ತ್ಯಾಗದ ಆವಶ್ಯಕತೆಯೇನದೆ? ನಾನು ಸ್ವತಃ ಅರ್ಪಣೆಗೊಂಡಿದ್ದೇನೆ. ಈಗ ನನ್ನ ಮಾತನ್ನು ಕೇಳಿರಿ. ಮಸೀಹ್ ಮೌಊದ್‌ರನ್ನು ನಂಬಿರಿ. ಬರಲಿಕ್ಕಿದ್ದ ವ್ಯಕ್ತಿ ಬಂದಿರುವರು. ನಿಮ್ಮ ಜೀವಿತವನ್ನು ಸರಿಪಡಿಸಿರಿ. ಹೇಗಿದ್ದರೂ ಅವರ ಮಾತಿಗೆ ಅವರು ಗಮನವಹಿಸಲಿಲ್ಲ. ಮೆಲ್ಲ ಮೆಲ್ಲನೆ ಅವರ ಎಲ್ಲ ಸಂಬಂಧಿಕರು ಅವರು ಉಪೇಕ್ಷಿಸಿದರು. ಆದರೆ ಅವರು ಅಹ್ಮದಿಯ್ಯತಿನೊಂದಿಗಿನ ಸಂಬಂಧದಲ್ಲಿ ದಿನಗಳದಂತೆ ಅಭಿವೃದ್ಧಿಗೊಂಡರು. ಅಲ್ಲಾಹನು ಅವರೊಂದಿಗೆ ಮಗ್‌ಫಿರತ್ ಮತ್ತು ಕಾರುಣ್ಯದಿಂದ ವರ್ತಿಸಲಿ. ಪದವಿಗಳನ್ನು ಉನ್ನತಗೊಳಿಸಲಿ.

ಮುಂದಿನ ಜನಾಝ ಅಮೇರಿಕದ ಮೇರಿಲ್ಯಾಂಡಿನ ಸಾಹಿಬ್‌ಝಾದ ಮಹದಿ ಲತೀಫ್ ಸಾಹಿಬ್‌ರದ್ದಾಗಿದೆ. 87ನೇ ವಯಸ್ಸಿನಲ್ಲಿ ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಸಾಹಿಬ್‌ಝಾದ ಮಹ್‌ದಿ ಲತೀಫ್ ಸಾಹಿಬ್‌ರು ಸಾಹಿಬ್‌ಝಾದ ಅಬ್ದುಲ್ಲತೀಫ್ ಶಹೀದ್ ರಝಿಯಲ್ಲಾಹು ಅನ್‌ಹುರ ಮೊಮ್ಮಗನಾಗಿದ್ದರು ಮತ್ತು ಸಾಹಿಬ್‌ಝಾದ ಮುಹಮ್ಮದ್ ತಯ್ಯಬ್ ಲತೀಫ್ ಸಾಹಿಬ್‌ರ ಮಗನಾಗಿದ್ದರು. ಸಾಹಿಬ್‌ಝಾದ ಮೆಹದಿ ಲತೀಫ್ ಸಾಹಿಬ್ ಅಲ್ಲಾಹನ ಅನುಗ್ರಹದಿಂದ ಮೂಸಿಯಾಗಿದ್ದರು. ಹಝ್ರತ್ ಮಸೀಹ್ ಮೌಊದ್‌ರ(ಅ) ಗ್ರಂಥಗಳನ್ನು ಗಹನವಾಗಿ ಓದಿದ್ದರು. ಐದು ಹೊತ್ತಿನ ನಮಾಝ್ ಮತ್ತು ತಹಜ್ಜುದ್ ನಮಾಝನ್ನು ನಿಯತವಾಗಿ ಅನುಷ್ಠಿಸುತ್ತಿದ್ದರು. ಅಹ್ಮದಿಯಾ ಖಿಲಾಫತಿನ ಪ್ರೇಮಿಯಾಗಿದ್ದರು. ಬಹಳ ವಿನೀತರಾದ ವ್ಯಕ್ತಿಯಾಗಿದ್ದರು. ಅವರಿಗೆ ತಬ್ಲೀಗ್ ಮಾಡುವ ಬಹಳ ಆಸಕ್ತಿ ಹೊಂದಿದ್ದರು. ಸದಾ ಇತರರೊಡನೆ ತಬ್ಲೀಗ್ ಮಾಡಲು ಉಪದೇಶಿಸುತ್ತಿದ್ದರು. ಅಲ್ಲಾಹನು ಅವರೊಡನೆ ಮಗ್‌ಫಿರತ್ ಮತ್ತು ಕಾರುಣ್ಯದಿಂದ ವರ್ತಿಸಲಿ ಮತ್ತು ಪದವಿಗಳನ್ನು ಉನ್ನತಗೊಳಿಸಲಿ.

ಮುಂದಿನ ಜನಾಝ ಶಹ್‌ಝಾದ ಅಕ್ಬರ್ ಸಾಹಿಬ್‌ರ ಮಗನಾದ ಫೈಝಾನ್ ಅಹ್ಮದ್ ಸಮೀರ್‌ದ್ದಾಗಿದೆ. ನಮ್ಮ ಪ್ರೈವಟ್ ಸೆಕ್ರಟರಿ ರಬ್ವ ಆಫೀಸಿನ ಉದ್ಯೋಗಿಯಾಗಿದ್ದರು. ಕೋವಿಡಿನ ಕಾರಣದಿಂದ 16ನೇ ವಯಸ್ಸಿನಲ್ಲಿ ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಅತ್ಯಂತ ಬುದ್ಧಿವಂತ, ಮಿತಭಾಷಿ, ಸಭ್ಯ ಮತ್ತು ಸಾತ್ವಿಕನಾದ ಹುಡುಗನಾಗಿದ್ದನು. ವಖ್ಫೇ ನೌ ಆಗಿದ್ದನು. ತನ್ನ ಕಲಿಕೆ ಕಡೆಗೆ ಗಮನವಿದ್ದ ಮತ್ತು ಅನಾವಶ್ಯಕವಾದ ಕೆಲಸಗಳಲ್ಲಿ ಏರ್ಪಡದ ಹುಡುಗನಾಗಿದ್ದನು. ಆಟಗಳಲ್ಲೂ ಬಹಳ ಕಡಿಮೆ ಭಾಗವಹಿಸುತ್ತಿದ್ದನು. ಗೌರವ ಸ್ವಭಾವದ ಹುಡುಗನಾಗಿದ್ದನು. ಸ್ಕೂಲ್ ಬಿಟ್ಟ ನಂತರ ಹೆಚ್ಚಿನ ಸಮಯ ಮನೆಯಲ್ಲಿ ಕಳೆಯುತ್ತಿದ್ದನು. ಅಲ್ಲಾಹನು ದಿವಂಗತರ ಹುಡುಗನ ತಂದೆತಾಯಂದಿರಿಗೂ ಸಹನೆ ನೀಡಲಿ. ಅವರ ತಾತರಾದ ಖಾಜ ಅಬ್ದುಶ್ಶುಕೂರ್ ಸಾಹಿಬ್‌ರು ದೀರ್ಘಕಾಲ ಜಮಾಅತಿನ ಸೇವೆ ಸಲ್ಲಿಸಿದ್ದರು. ಅಲ್ಲಾಹನು ಹುಡುಗನೊಂದಿಗೆ ಮಗ್‌ಫಿರತ್ ಮತ್ತು ಕಾರುಣ್ಯದಿಂದ ವರ್ತಿಸಲಿ. ಪದವಿಗಳನ್ನು ಉನ್ನತಗೊಳಿಸಲಿ.

***********

**ಹಝ್ರತ್ ಮುಹಮ್ಮದ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್**

**ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ:**
"ಎಲ್ಲ ಪ್ರವಾದಿಗಳಲ್ಲಿ ಅತ್ಯಂತ ಪರಿಪೂರ್ಣ ಉಪದೇಶಗಳನ್ನು ನೀಡಿದವರು, ಅತ್ಯುನ್ನತ ಮಟ್ಟದ ಪರಿಶುದ್ಧತೆ ಹಾಗು ಜಾಣ್ಮೆಯಿಂದ ಕೂಡಿದ ಉಪದೇಶ ನೀಡಿದವರು ಮತ್ತು ಅತ್ಯುತ್ತಮ ಮಾನವೀಯ ಗುಣಗಳನ್ನು ತನ್ನ ಜೀವಿತದಲ್ಲಿ ಅಳವಡಿಸಿ ಲೋಕಕ್ಕೆ ಅತ್ಯುತ್ತಮ ಮಾದರಿಯಾಗಿ ತೋರಿಸಿಕೊಟ್ಟವರು ನಮ್ಮ ನಾಯಕರೂ ನಮ್ಮ ಮಾಲಿಕರೂ ಆದ ಹಝ್ರತ್ ಮುಹಮ್ಮದ್(ಸ) ಆಗಿರುವರು ಎಂದು ನನಗೆ ಮನವರಿಕೆ ಮಾಡಿಕೊಡಲಾಗಿದೆ." ***(ಅರ್‌ಬಈನ್ ನಂಪುಟ-1 ರೂಹಾನಿ ಖಝಾಇನ್ ಸಂಪುಟ 17, ಪುಟ 345)***

*(ಪುಟ ಸಂಖ್ಯೆ 02ರ ಉಳಿದ ಭಾಗ)*

ಅನುಗ್ರಹವಿದೆ. ನಾನು ಇನ್‌ಶಾಅಲ್ಲಾಹ್ ದುಆ ಮಾಡುವೆನು. ಇಲ್ಹಾಮ್ (ದೇವವಾಣಿ) ಅಂತೂ ನನಗೆ ಸೇರಿದ ಮಾತಲ್ಲ. **ವನ್‌ಸ್ಸುರ್‌ನಾ ಅಲಲ್ ಖೌಮಿಲ್ ಕಾಫಿರೀನ್**. ಅಷ್ಟೊಂದು ಶೀಘ್ರದಲ್ಲಿ ದೇವವಾಣಿ ಆದದ್ದು ಈ ಫಕೀರನಿಗೆ ತುಂಬ ವಿರಳ. ನನ್ನ ಭಾವನೆ ಎಂದರೆ ಇದು ನಿಮ್ಮ ನಿಷ್ಠೆಯ ಫಲವಾಗಿದೆ.

ಈ ಕೆಳಗೆ ಮೌಲ್ವಿ ಅಬ್ದುಲ್ಲ ಗಝ್ನವಿ ಸಾಹಿಬರ ಬಗ್ಗೆ ಇನ್ನೊಂದು ಘಟನೆ ಪ್ರಸ್ತುತವಿದೆ. ಅದರಿಂದ ಅವರ ಸಜ್ಜನಿಕೆಯ ಮಹಿಮೆ ಅರುಹಿದಂತಾಗುತ್ತದೆ.

ಸಯ್ಯದ್‌ನಾ ಹಝ್‌ರತ್ ಮಸೀಹ್ ಮೌಊದ್(ಅ) ನುಡಿದರು.

ಸಜ್ಜನಿಕೆಯ ಉನ್ನತ ದರ್ಜೆಯ ಓರ್ವ, ಸತ್ಯವಂತರಾದ, ಅಲ್ಲಾಹನ ದಾಸಶ್ರೇಷ್ಠರಾಗಿದ್ದರು. ಅವರು ಅಲ್ಲಾಹನ ದಿವ್ಯವಾಣಿಯಿಂದ ಅನುಗ್ರಹಿತರಾದವರಾಗಿದ್ದರು. ಮಹೋನ್ನತ ದರ್ಜೆಯ ಸುನ್ನತ್ ಪಾಲಿಸುವವರಾಗಿದ್ದರು. ಭಯಭಕ್ತಿಯುಳ್ಳವರು ಮತ್ತು ಸದ್ಗುಣಗಳ ಆಗರರಾಗಿದ್ದರು. ಅಂತೂ ಅಲ್ಲಾಹನ ಸಾನಿಧ್ಯಯುಳ್ಳವರಲ್ಲಿ ಸೇರಿದವರಾಗಿದ್ದರು. ಯಾವಾಗಲೂ ದೇವಸ್ಮರಣೆಯಲ್ಲಿ ತಲ್ಲೀನರಾಗಿದ್ದರು. ಅವನಲ್ಲಿಯೇ ಅವನ ಮಾರ್ಗದಲ್ಲಿಯೇ ಸನ್ನದ್ಧರಾಗಿದ್ದರು. ಅವರ ಹೆಸರು ಅಬ್ದುಲ್ಲ ಗಝ್ನವಿ ಎಂದಾಗಿತ್ತು. ಒಂದು ಸಂದರ್ಭದಲ್ಲಿ ನಾನು ಯೋಧರ ರೀತಿ ಅತ್ಯಂತ ವೈಭವಪೂರಿತವಾಗಿ ಜಟ್ಟಿಗಳಂತೆ ಸಶಸ್ತ್ರರಾಗಿ ನಿಂತುಕೊಂಡಿದ್ದರು. ಆಗ ನಾನು ಕೆಲವು ದಿವ್ಯವಾಣಿಗಳ ವಿವರ ನೀಡಿ ಅವರಿಗೆ ಕೇಳಿದೆನು. ನನಗೆ ಒಂದು ಸ್ವಪ್ನ ಬಂದಿದೆ ಅದರ ಅರ್ಥ ತಿಳಿಸಿರಿ. ನಾನ್ನ ಸ್ವಪ್ನದಲ್ಲಿ, ಒಂದು ಖಡ್ಗ ನನ್ನ ಕೈಯಲ್ಲಿದೆ, ಅದರ ಹಿಡಿತ ನನ್ನ ಸಂಜೆಯಲ್ಲಿದೆ ಮತ್ತು ಅದರ ತುದಿ ಆಕಾಶಕ್ಕೆ ತಲುಪಿದೆ. ನಾನು ಅದನ್ನು ಬಲಭಾಗಕ್ಕೆ ಉಪಯೋಗಿಸಿದರೆ ಸಾವಿರಾರು ವಿರೋಧಿಗಳು ಹತ್ಯೆಗೀಡಾಗುತ್ತಾರೆ. ಮತ್ತು ಎಡಕ್ಕೆ ಉಪಯೊಗಿಸಿದರೆ ಸಾವಿರಾರು ಶತ್ರುಗಳು ಸಾವಿಗೆ ತುತ್ತಾಗುತ್ತಾರೆ. ಹಝ್‌ರತ್ ಅಬ್ದುಲ್ಲ ಸಾಹಿಬ್ ದಿವಂಗತರು(ರ) ತನ್ನ ಈ ಸ್ವಪ್ನ ಕೇಳಿ ತುಂಭಾ ಸಂತೋಷಗೊಂಡರು ಮತ್ತು ಅರ್ಥಭರಿತರಾಗಿ ಮನೋಲ್ಲಾಸಿತನಾಗಿ ಕಂಡರು. ಅವರು ಹೇಳಿದರು. ಅದರ ಅರ್ಥವೇನೆಂದರೆ ಅಲ್ಲಾಹನು ನಿಮ್ಮಿಂದ ಬಹು ದೊಡ್ಡ ದೊಡ್ಡ ಕಾರ್ಯಗಳನ್ನು ಮಾಡಿಸುವವನಾಗಿದ್ದಾನೆ. ಬಲಭಾಗಕ್ಕೆ ಖಡ್ಗ ಉಪಯೋಗಿಸಿದ ವಿರೋಧಿಗಳು ಹತ್ಯೆಗೀಡಾಗಿದ್ದನ್ನು ನೋಡಿದ್ದೀರಿ. ಅದರ ತಾತ್ಪರ್ಯ ನ್ಯಾಯಪೂರ್ತಿಕರಣದ ಕಾರ್ಯವಾಗಿದೆ. ಅದು ಆಧ್ಯಾತ್ಮಿಕ ನೆಲೆಯಲ್ಲಿ ಅನುಗ್ರಹಗಳ ಕಾರುಣ್ಯಗಳ ಫಲವಾಗಿ ನೆರವೇರುವುದು ಮತ್ತು ಎಡಬದಿಯಲ್ಲಿ ಖಡ್ಗ ಉಪಯೋಗಿಸಿದ್ದನ್ನು ತಾವು ನೋಡಿರುವಿರಿ. ಅದರ ಪರಿಣಾಮವಾಗಿ ಸಾವಿರಾರು ಶತ್ರುಗಳು ನಾಶಹೊಂದಿದರು. ಅದರ ತಾತ್ಪರ್ಯ ನಿಮ್ಮ ಮೂಲಕ ಬೌದ್ಧಿಕ ರೀತಿಯಲ್ಲಿ ಎಲ್ಲಾ ಆರೋಪಗಳನ್ನು ಆಕ್ಷೇಪಗಳನ್ನು ಅಂತ್ಯಗೊಳಿಸುವನು ಮತ್ತು ಲೋಕದಲ್ಲಿ ತನ್ನ ನ್ಯಾಯೂರ್ತಿಕರಣ ಸ್ಥಾಪಿಸುವನು. ಅನಂತರ ಮತ್ತೆ ಅವರು ಹೇಳಿದರು. ನಾನು ಲೋಕದಲ್ಲಿ ಜೀವಂತವಿದ್ದಾಗ ಭರವಸೆ ಹೊಂದಿದ್ದೆ. ಅಲ್ಲಾಹನು ಅವಶ್ಯವಾಗಿ ಇಂತಹನೊಬ್ಬನನ್ನು ಕಳುಹಿಸುವನು ಎಂದು. ಮತ್ತೆ ಹಝ್‌ರತ್ ಅಬ್ದುಲ್ಲಾ ಸಾಹಿಬ್ ದಿವಂಗತರು ನನಗೆ ಒಂದು ವಿಶಾಲ ಮನೆಯತ್ತ ಕರೆದುಕೊಂಡು ಹೋದರು. ಅಲ್ಲಿ ಸತ್ಯಸಂಧರ ಒಂದು ಜಮಾಅತ್ ಸೇರಿತ್ತು. ಅಲ್ಲಿ ಎಲ್ಲರೂ ಸಶಸ್ತ್ರರಾಗಿ ಯೋಧರ ರೀತಿಯಲ್ಲಿ ಯಾವ ರೀತಿ ಸನ್ನಧರಾಗಿ ಕುಳಿತುಕೊಂಡಿದ್ದರೆಂದರೆ ಯುದ್ಧ ಸೇವೆಗೆ ಹೊರಡಬೇಕಾಗಿತ್ತೋ ಏನೋ ಎಂದು. ಅಷ್ಟರಲ್ಲಿ ನನ್ನ ಕಣ್ಣು ತೆರೆಯಿತು. **(ಇಝ್ಹಾಲ್ಲಾ ಅವ್ಹಾಮ್, ರೂಹಾನಿ ಖಝಾಯಿನ್, ಸಂಪುಟ-3, ಪುಟ-14 ಟಿಪ್ಪಣಿ)**

ಇಲ್ಲಿ ಈ ಉಲ್ಲೇಖ ಮಾಡುವುದು ಸಹ ಸಮಂಜಸ ಎನಿಸುತ್ತದೆ. ಸಯ್ಯದ್‌ನಾ ಹಜ್‌ರತ್ ಖಲೀಫತುಲ್ ಮಸೀಹ್ ಪ್ರಥಮರು(ರ) ಅವರ ಹಿರಿಯ ಸುಪುತ್ರಿ ಉಮಾಮ ಮೌಲ್ವಿ ಅಬ್ದುಲ್ಲ ಗಝ್ನವಿ ಅವರ ಪುತ್ರ ಮೌಲ್ವಿ ಅಬ್ದುಲ್ಲ ವಾಹಿದ್ ಗಝ್ನವಿಯನ್ನು ವಿವಾಹವಾಗಿದ್ದರು. ಹಯಾತೆ ನೂರ್‌ನಲ್ಲಿ ಬರೆಯಲಾಗಿದೆ. ಈ ಹುಡುಗಿಯ ವಿವಾಹ ಅವರು (ಹಝ್‌ರತ್ ಖಲೀಫತುಲ್ ಮಸೀಹ್ ಪ್ರಥಮರು) ಹಝ್‌ರತ್ ಮೌಲ್ವಿ ಅಬ್ದುಲ್ಲ ಸಾಹಿಬ್ ಗಝ್ನವಿ (ರಹ) ಅವರ ಪುತ್ರ ಮೌಲ್ವಿ ಅಬ್ದುಲ್ ವಾಹಿದ್ ಸಾಹಿಬ್‌ರೊಂದಿಗೆ ಮಾಡಿಸಿದ್ದರು. ಹಝುರತ್ ಮೌಲ್ವಿ ಅಬ್ದುಲ್ಲ ಸಾಹಿಬ್ ಗಝ್ನವಿ ಓರ್ವ ಸಜ್ಜನ, ಅಲ್ಲಾಹನ ಸ್ನೇಹಿತರಾಗಿದ್ದರು. ಅವರ ಈ ಸಜ್ಜನಿಕೆಯ ಕಾರಣದಿಂದಲೇ ಹಝ್‌ರತ್ ಖಲೀಫತುಲ್ ಮಸೀಹ್ ಪ್ರಥಮರು(ರ) ತನ್ನ ಪುತ್ರಿಯ ವಿವಾಹ ಅವರ ಪುತ್ರನೊಂದಿಗೆ ಮಾಡಿಸಿದ್ದರು. ಆದರೆ ವಿಷಾದದ ಸಂಗತಿ ಎಂದರೆ ತನ್ನ ಅನ್ಯ ಸಹೋದರರಂತೆ ಇವರು ಸಹ ಅಹ್ಮದಿಯಾ ಸಂಘಟನೆಯ ಕಡು ವೈರಿಯಾಗಿದ್ದರು. ಅಲ್ಲದೇ ಒಂದು ಸಂದರ್ಭ ಅವರು ಖಲೀಫತುಲ್ ಮಸೀಹ್ ಪ್ರಥಮ(ರ) ರವರನ್ನು ಭೇಟಿಯಾಗಲು ಖಾದಿಯಾನಿಗೆ ಬಂದಾಗ ಅವರ ತಕರಾರಿನ ನಿಮಿತ್ಯ ಹಝುರತ್ ಮಸೀಹ್ ಮೌಊದ್(ಅ) ರವರನ್ನು ಭೇಟಿಯಾಗಲು ಹೋದರು. ಹಝ್‌ರತ್ ಅಖ್‌ದಸ್ ಮಸ್ಜಿದ್ ಮುಬಾರಕ್‌ನಲ್ಲಿ ಅವರೊಡನೆ ಮಾತುಕತೆ ನಡೆಸುತ್ತಿರುವಾಗ ಹಝ್‌ರತ್ ಮೌಲ್ವಿ ಸಾಹಿಬ್, ಹಝುರತ್ ಅಖ್‌ದಸ್(ಅ) ರವರ ಯಾವ ಮಾತಿಗೂ ಉತ್ತರ ನೀಡದಿದ್ದನ್ನು ಮತ್ತು ಬೇಗ ಬೇಗ ತುಟಿ ಬಿಚ್ಚಿ ಪಟಪಟಿಸುತ್ತಿದ್ದದ್ದನ್ನು ನೋಡಿ ಚಕಿತರಾದರು. ಅವರ ಭೇಟಿಯ ನಂತರ ಅವರಿಗೆ ಕೇಳಿದರು. ಆಗ ನೀವು ಏನು ಪಠಿಸುತ್ತಿದ್ದೀರಿ. ಅವರು ಹೇಳಿದರು. ಸೂರ: ಕಹಫಿನ ಪ್ರಾರಂಭಿಕ ಹತ್ತು ಸೂಕ್ತಗಳನ್ನು ಪಠಿಸುತ್ತಿದ್ದೆ. ಹಝ್‌ರತ್ ಅಖ್‌ದಸ್(ಅ) ಈ ಮಾತು ಕೇಳಿ ತುಂಭಾ ನಕ್ಕುಬಿಟ್ಟರು.

ಸಯ್ಯದ್‌ನಾ ಹಝ್‌ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ.

ಅವರು ನನ್ನ ಕಾಲಘಟ್ಟವನ್ನು ಪಡೆದವವರಾಗುತ್ತಿದ್ದರೆ ನಾನು ನಿಶ್ಚಯಪೂರ್ವಕವಾಗಿ ಹೇಳುತ್ತೇನೆ ಅವರು ನನ್ನ ದಾವೆ ಸಮೇತ ನನಗೆ ಸ್ವೀಕರಿಸುತ್ತಿದ್ದರೇ ಹೊರತು ನಿರಾಕರಿಸುತ್ತಿರಲಿಲ್ಲ. ಆದರೆ ಆ ಸಜ್ಜನ ಪುರುಷರು ನನ್ನ ದಾವೆಯ ಮುಂಚಿತವಾಗಿಯೇ ಇಹಲೋಕ ತ್ಯಜಿಸಿದರು. ಏನೆಲ್ಲ ವಿಶ್ವಾಸದಲ್ಲಿ ಖಿನ್ನತೆಯಿತ್ತು. ಅದು ಶಿಕ್ಷಾರ್ಹವಲ್ಲ. ಏಕೆಂದರೆ ಕಾಲ್ಪನಿಕ ತಪ್ಪು ಕ್ಷಮಿಸಲ್ಪಡುತ್ತದೆ. ಶಿಕ್ಷೆಯ ನ್ಯಾಯಪೂರ್ತಿಕರಣದ ನಂತರ, ಸಂದೇಶ ತಲುಪಿದ ನಂತರ ಅನ್ವಯವಾಗುತ್ತದೆ. ಅದರಲ್ಲಿ ಯಾವ ಸಂಶಯವೂ ಇಲ್ಲ. ಅವರ ಭಯಭಕ್ತಿಯುಳ್ಳವರು ಮತ್ತು ಅಲ್ಲಾಹನ ಸಾನಿಧ್ಯ ಪಡೆಯುವವರು ಹಾಗೂ ಸಜ್ಜನರಾಗಿದ್ದರು. (ಹಖೀಖತುಲ್ ವಹೀ, ರೂಹಾನಿ ಖಝಾಯಿನ್, ಸಂಪುಟ-22, ಪುಟ-250).

ಮೌಲ್ವಿ ಅಬ್ದುಲ್ ಹಖ್ ಗಝ್ನವಿ ಓರ್ವ ಸಜ್ಜನ ಅಲ್ಲಾಹನ ನಿಷ್ಠಾವಂತ ದಾಸರಾದವರ ಒಬ್ಬ ಅನರ್ಹ ಶಿಷ್ಯರಾಗಿದ್ದರು. ಅವರಿಗೆ ಅವರ ಗುರುಗಳಂತೆ ಮಸೀಹ ಮೌಊದ್‌ರವರ ಸತ್ಯತೆಯನ್ನು ಸ್ವೀಕರಿಸಬೇಕಿತ್ತು. ಆದರೆ ದುರಾದೃಷ್ಟದಿಂದಾಗಿ ಅಬ್ದುಲ್ ಹಖ್ ಕೇವಲ ಹಝ್‌ರತ್ ಮಸೀಹ್ ಮೌಊದ್(ಅ) ರವರ ಸತ್ಯತೆಯನ್ನು ಒಪ್ಪಲಿಲ್ಲ. ಬದಲು ವಿರೋಧದ ಮುನ್ನಡಿ ಹಾಕಿದರು. ಅವರನ್ನು ಸುಲ್ಲುಗಾರ, ದಜ್ಜಾಲ್ ಎಂದು ಕರೆದರು. ಅವರನ್ನು ಮತ್ತು ಅವರ ಭವಿಷ್ಯವಾಣಿಗಳನ್ನು ಸುಳ್ಳು ಎಂದರು ಮತ್ತು ಅಮೃತಸರ ಸ್ಥಳದಲ್ಲಿ ಅವರೊಡನೆ ಮುಬಾಹಲ ಸಹ ಮಾಡಿದರು. ಮೌಲ್ವಿ ಅಬ್ದುಲ್ ಹಖ್ ಗಝ್ನವಿ ಹೇಳುತ್ತಿದ್ದ. ಆಥಮರು ಮರಣ ಹೊಂದಿದ್ದು ಹಝ್‌ರತ್ ಮಸೀಹ್ ಮೌಊದ್(ಅ) ರವರ ಮೇಲೆ ಮುಬಾಹಲದ ಒಂದು ಶಾಪವಾಗಿದೆ. ಮತ್ತು ಅದರ ಪರಿಣಾಮವಾಗಿ ಲಭಿಸಿದ ಒಂದು ಅಪಮಾನವಾಗಿದೆ. ಮುಂದಿನ ಸಂಚಿಕೆಗಳಲ್ಲಿ ನಾವು ಇನ್‌ಶಾಅಲ್ಲಾಹ್ **"ಮುಬಾಹಲ"** ದ ಸಂಪೂರ್ಣ ವರದಿ ಮತ್ತು ಮುಬಾಹಲ ನಂತರ ಸಯ್ಯದ್‌ನಾ ಹಝ್‌ರತ್ ಮಸೀಹ್ ಮೌಊದ್(ಅ) ರವರಿಗೆ ಅಲ್ಲಾಹನಿಂದ ದೊರೆತ ಗೌರವ, ಹೆಸರು, ಅನುಗ್ರಹಗಳ ವಿವರ ನೀಡುವೆವು. ಅಲ್ಲದೆ ವಿಭಿನ್ನ ರೀತಿಯ ಅಪಮಾನಗಳು, ಶಾಪಗಳು ಒಬ್ಬನಿಗೆ ದೊರೆತಿದೆ ಎಂದರೆ ಅವರು ಮೌಲ್ವಿ ಅಬ್ದುಲ್ ಹಖ್ ಗಝ್ನವಿಯಾಗಿದ್ದರು.

**(ಮನ್ಸೂರ್ ಅಹ್ಮದ್ ಮಸ್ರೂರ್)**

## ಅನ್ಯ ಗೋತ್ರಗಳೊಂದಿಗೆ ವಿವಾಹ

**ಹಝ್‌ರತ್ ಮಸೀಹ್ ಮೌಊದ್ ಅಲೂಹಿಸ್ಸಲಾಮ್ ಹೇಳುತ್ತಾರೆ:-**

"ನಮ್ಮ ಸಮುದಾಯದಲ್ಲಿ ಕಂಡುಬರುತ್ತಿರುವ ಒಂದು ಕೆಟ್ಟ ಸಂಪ್ರದಾಯವೇನೆಂದರೆ, ನಮ್ಮೊಳಗಿರುವ ಇತರ ಗೋತ್ರಗಳಿಗೆ ಹೆಣ್ಣು ಕೊಡಲು ಹಾಗೂ ಪಡೆದುಕೊಳ್ಳಲು ಇಷ್ಟಪಡುವುದಿಲ್ಲ. ಇದು ಅಹಂಕಾರ ಮತ್ತು ಮತ್ಸರದಿಂದಾಗಿದೆ. ಇದು ಶರೀಅತ್ತಿಗೆ ಅಪ್ಪಟ ವಿರುದ್ಧವೂ ಆಗಿರುತ್ತದೆ. ಎಲ್ಲಾ ಆದಮ್ ಸಂತತಿಗಳು ಏಕದೇವನ ದಾಸರಾಗಿದ್ದಾರೆ. ಹೆಣ್ಣು ಕೊಡುವ ಪಡೆಯುವ ವಿಷಯದಲ್ಲಿ ಗಮನಿಸಬೇಕಾದ ವಿಷಯವೇನೆಂದರೆ ಅವರು ಭಯಭಕ್ತಿ ಹಾಗೂ ಉತ್ತಮ ನಡತೆ ಹೊಂದಿರುವವರಾಗಿರಬೇಕು ಮತ್ತು ಅವರು ಯಾವುದೇ ರೀತಿಯ ಪಿತೂರಿಗೆ ಕಾರಣರಾಗಿರಬಾರದು.

ನೆನಪಿಡಿರಿ! ಇಸ್ಲಾಮಿನಲ್ಲಿ ಕುಲ, ಗೋತ್ರಗಳ ಕುರಿತು ಯಾವುದೇ ತಾರತಮ್ಯವಿಲ್ಲ. ಕೇವಲ ಭಯಭಕ್ತಿ ಮತ್ತು ಸಾತ್ವಿಕತೆಯೇ ಪ್ರಧಾನವಾಗಿದೆ. ಅಲ್ಲಾಹನು ಪವಿತ್ರ ಖುರ್‌ಆನಿನಲ್ಲಿ ಹೀಗೆ ಹೇಳಿದನು: **ಇನ್ನ ಅಕ್ರಮಕುಮ್ ಇಂದಲ್ಲಾಹಿ ಅತ್‌ಖಾಕುಮ್** (ಅಲ್‌ಹುಜರಾತ್:14) ಅಂದರೆ: ನಿಮ್ಮ ಪೈಕಿ ಹೆಚ್ಚು ಸಾತ್ವಿಕನಾರೋ ಖಂಡಿತವಾಗಿಯೂ ಆತನೇ ಅಲ್ಲಾಹನ ದೃಷ್ಟಿಯಲ್ಲಿ ಅತ್ಯಂತ ಗೌರವಾರ್ಹನು." (ಮಲ್ಫೂಝಾತ್ ಸಂಪುಟ-5, ಪುಟ-48-49, ಮುದ್ರಣ ಖಾದಿಯಾನ್ 2003)

**(ನಝಾರತ್ ಇಸ್ಲಾಹ್-ವ-ಇರ್‌ಶಾದ್ (ಮರ್‌ಕಝಿಯಾ, ಖಾದಿಯಾನ್)**

*(ಪುಟ ಸಂಖ್ಯೆ 01ರ ಉಳಿದ ಭಾಗ)*

ಬಹುದೇವಾರಾಧನೆಯ ಪಿಡುಗಿನ ಹೆಚ್ಚುವ ಅರಿವು ಅವರಿಗಿತ್ತು ಎಂದು. ಅದಕ್ಕಾಗಿಯೇ ಅವರು ಪ್ರಾರ್ಥಿಸಿದರು: "ಓ ಪ್ರಭೂ ನನ್ನನ್ನು ಮತ್ತು ನನ್ನ ಸಂತಾನವನ್ನು ಬಹುದೇವಾರಾಧನೆಯಿಂದ ರಕ್ಷಿಸು." ಇಲ್ಲವಾಗಿದ್ದಲ್ಲಿ ಅವರು ಪ್ರಾರ್ಥಿಸುವ ಸಮಯದಲ್ಲಿ ಮಕ್ಕದಲ್ಲಿ ಬಹುದೇವಾರಾಧನೆ ನಾಮ ಮಾತ್ರಕ್ಕೂ ಇರಲಿಲ್ಲ. ಕೇವಲ ಹಝ್ರತ್ ಇಸ್ಮಾಯಿಲ್(ಅ) ರವರ ಮನೆಯಿತ್ತು ಮತ್ತು ಅವರ ಸಂತಾನ ಹಾಗೂ ಅವರ ಶಿಷ್ಯಂದಿರು ವಾಸಿಸುತ್ತಿದ್ದರು.

ಈ ಪ್ರಾರ್ಥನೆಯಿಂದ ಇನ್ನೊಂದು ವಿಷಯ ತಿಳಿದು ಬರುವುದೇನೆಂದರೆ ದೇವ-ಏಕತ್ವ ಮತ್ತು ಬಹುದೇವಾರಾಧನೆಯ ಕಾಲಗಳು ಲೋಕದಲ್ಲಿ ಬರುತ್ತಿರುತ್ತವೆ. ಏಕದೇವತ್ವ ವಿಶ್ವಾಸ ಹೊಂದಿದ ಸಮುದಾಯಗಳು ಬಹುದೇವಾರಾಧಕರಾಗಿ ಬಿಡುತ್ತಾರೆ ಮತ್ತು ಬಹುದೇವಾರಾಧಕರು ಏಕತ್ವವಾದಿಗಳಾಗುತ್ತಾರೆ. ಮತ್ತು ದೇವ-ಏಕತ್ವದ ಉನ್ನತ ಮಟ್ಟಕ್ಕೆ ತಲುಪಿದ ಸಮುದಾಯದ ಬಗ್ಗೆ ಹೇಳಲು ಸಾಧ್ಯವಿಲ್ಲ. ಅವರು ಬಹುದೇವಾರಾಧನೆಯಿಂದ ಉಳಿಯಬಹುದೆಂದು. ಅಂದರೆ ಅವರ ವಾದವಾದ ದೇವ ಏಕತ್ವವು ಬಹುದೇವಾರಾಧನೆಯಿಂದ ಬೆಳೆದು ಪ್ರಗತಿ ಸಾಧಿಸುತ್ತದೆ ಎಂಬ ಈ ಶಿಕ್ಷಣದಿಂದ ಧರ್ಮ ಧರ್ಮಗಳ ನಡುವೆ ಈ ಬಗ್ಗೆ ಚರ್ಚೆ ನಿರರ್ಥಕವೆನಿಸುತ್ತದೆ. ಪವಿತ್ರ ಖುರ್‌ಆನ್‌ನಿಂದ ತಿಳಿದು ಬರುವುದೇನೆಂದರೆ, ದೇವ ಏಕತ್ವದ ನಂತರ ಬಹುದೇವಾರಾಧನೆ ಮತ್ತು ಬಹುದೇವಾರಾಧನೆಯ ನಂತರ ದೇವ ಏಕತ್ವದ ಕಾಲಗಳು ಬರುತ್ತಿರುತ್ತವೆ. ದೇವೇಕತ್ವದ ಕಾಲವು ಯಾವಾಗಲೂ ಬಹುದೇವ ಆರಾಧನಾ ಕಾಲಕ್ಕಿಂತ ಮೊದಲು ಬಂದಿರುತ್ತದೆ. ಈ ವಾಸ್ತವ ತತ್ವದನ್ವಯ ಏಕತ್ವಕ್ಕಾಗಿ ದೇವವಾಣಿ ಮತ್ತು ಬಹುದೇವಾರಾಧನೆಯ ಅವನತಿಯ ಸ್ಥಾನ ಒಪ್ಪಿತವಾಗಿದೆ. ಇದರ ತದ್ವಿರುದ್ಧವಾಗಿ ಇತರ ಧರ್ಮಗಳ ತುಲನೆ ಮಾಡುವವರ ದೃಷ್ಟಿಯಲ್ಲಿ ಅಲ್ಲಾಹನ (ದೇವನ) ಪರಿಕಲ್ಪನೆ, ಭಯ ಮತ್ತು ಅಚ್ಚರಿಯಿಂದ ಹುಟ್ಟಿತು ಮತ್ತು ಬಹುದೇವಾರಾಧನೆಯು ಬೆಳೆಯುತ್ತ ಏಕತ್ವದ ಹಂತಕ್ಕೆ ತಲುಪಿತು. ನೋಡಲಿಕ್ಕೆ ಈ ವಿರೋಧಭಾಸ ಲಘುವಾಗಿ ಕಾಣುತ್ತದೆ. ಆದರೆ ಅದೇ ವಿರೋಧಭಾಸದ ಕಾರಣದಿಂದಾಗಿ ಧರ್ಮ ತಿಳಿಸುತ್ತದೆ. ಅಲ್ಲಾಹನು (ದೇವನು) ಮಾನವನನ್ನು ಸೃಷ್ಟಿಸಿದನು, ಇತರ ಧರ್ಮದೊಡನೆ ತುಲನೆ ಮಾಡುವವರು ಹೇಳುತ್ತಾರೆ. ಮನುಷ್ಯನು ಅಲ್ಲಾಹನನ್ನು ಸೃಷ್ಟಿಸಿದ್ದಾನೆ, ಅಂದರೆ ಅಲ್ಲಾಹನ ಪರಿಕಲ್ಪನೆ ಮಾನವನ ಬುದ್ಧಿಶಕ್ತಿಯ ಸೃಷ್ಟಿಯಾಗಿದೆ ಮತ್ತು ಅದರ ಪರಿಪೂರ್ಣತೆ ಮಾನವನ ತತ್ವಜ್ಞಾನದಿಂದ ಪರಿಪೂರ್ಣತೆ ಸಾದಿಸಿದೆ.

ಈ ವಚನದ ಪ್ರಯುಕ್ತ ಒಂದು ಪ್ರಶ್ನೆ ಬರುತ್ತದೆ. ಇಬ್ರಾಹಿಂ(ಅ) ಬಹುದೇವಾರಾಧನೆಯಲ್ಲಿ ತೊಡಗಿರಬಹುದಿತ್ತೇ? ಇಲ್ಲದಿದ್ದಲ್ಲಿ ಅವರು ಈ ಪ್ರಾರ್ಥನೆ (ದುಆ) ಏಕೆ ಮಾಡಿದರು. ಓ ಪ್ರಭುವೇ ನನ್ನನ್ನು ಗ್ರೀಕರ (ಬಹುದೇವರಾಧನೆ) ಯಿಂದ ರಕ್ಷಿಸು ಎಂದು. ಅದರ ಉತ್ತರವೇನೆಂದರೆ ಮಾನವರಲ್ಲಿ ಎರಡು ಶಕ್ತಿಗಳಿವೆ. ಒಂದು ಅಲ್ಲಾಹನ ಸೃಷ್ಟಿಯಿಂದ ದೊರೆತದ್ದು. ಅದರ ಕುರಿತು ಅವರು ದುಆ ಮಾಡುತ್ತಿಲ್ಲ. ಉದಾಹರಣೆಗೆ ಪ್ರಭುವೇ ನನಗೆ ಒಂದೇ ಶಿರವಿರಲಿ. ಎರಡು ಆಗದಿರಲಿ. ಎರಡನೆಯ ಶಕ್ತಿ ಎಂದರೆ ಅದು ಮನುಷ್ಯನ ಪ್ರಯತ್ನದಿಂದ ಭಾವನೆಗಳಿಂದ ದೊರೆಯುತ್ತದೆ. ಅಂದರೆ ಅವನು ಸ್ವಪ್ರಯತ್ನದಿಂದ ಪ್ರಗತಿ ಸಾಧಿಸುತ್ತಾನೆ. ಅಥವಾ ಅಲ್ಲಾಹನ ವಿಶೇಷವಾದ ಅನುಗ್ರಹದಿಂದ ಇವನಿಗೆ ಇತರರಿಗಿಂತ ಉನ್ನತ ಸ್ಥಾನ ದೊರೆಯುತ್ತದೆ. ಇಂತಹ ಶಕ್ತಿಗಳಲ್ಲಿ ಅವನತಿಯ ಭಯವಿರುತ್ತದೆ. ಅದಕ್ಕಾಗಿ ಪ್ರಾರ್ಥನೆ ಮಾಡಬೇಕಾಗುತ್ತದೆ. ಅಥವಾ ಅಲ್ಲಾಹನ ವಾಗ್ದಾನವಿದ್ದರೂ ಸಹ ಅದು ಫಲಕಾರಿಯಾಗಬಹುದು. ಏಕೆಂದರೆ ಈ ಪ್ರಾರ್ಥನೆಯಲ್ಲಿ ವಾಸ್ತವವಾಗಿ ಹೇಳಿಕೊಂಡಿರುವುದ್ದೇನೆಂದರೆ, ಈ ಅನುಗ್ರಹವು ನನ್ನ ಸ್ವಂತದ್ದಲ್ಲ. ಬದಲು ಅಲ್ಲಾಹನಿಂದ ಬಹುಮಾನ ರೂಪದಲ್ಲಿ ಬಂದದ್ದಾಗಿದೆ. ಈ ನಿಜ ತತ್ವದನ್ವಯವೇ ಪ್ರವಾದಿಗಳು ಪ್ರವಾದಿತ್ವದ ಅನುಗ್ರಹಣ ಕುರಿತು ದುಆ ಮಾಡುತ್ತಿರುತ್ತಾರೆ. ಉದಾಹರಣೆಗೆ ಹಝ್ರತ್ ಇಬ್ರಾಹಿಂ(ಅ) ರವರ ದುಆಃ ಅಥವಾ ನಬಿ(ಸ) ರವರ ದುಆ-**ರಬಿ ಝಿದ್ನಿ ಇಲ್ಮಾ** ಅಥವಾ ಇಸ್ತಗ್ಫಾರ್ ಮತ್ತು ತೋಬ (ಕ್ಷಮಾಪಣೆ) ಪ್ರವಾದಿಗಳಿಂದ ವ್ಯಕ್ತವಾಗುತ್ತದೆ. ಈ ತತ್ವಗಳು ಅರಿಯದ ಕಾರಣ ಕೆಲ ಜನರು ಪ್ರವಾದಿಗಳ ಇಸ್ತಗ್ಫಾರ್ ಮತ್ತು ತೌಬಾದಿಂದ ಅನುಮಾನಕ್ಕೆ ಒಳಗಾಗುತ್ತಾರೆ ಮತ್ತು ತಿಳಿದುಕೊಳ್ಳುತ್ತಾರೆ. ಅವರು ಸಹ ಪಾಪ ಮಾಡಿದವರಾಗಿದ್ದರು ಎಂದು. ಅದಾಗ್ಯೂ ಅವರ ಇಸ್ತಗ್ಫಾರ್ ಮತ್ತು ತೌಬಾದ ಅರ್ಥವು ಅವರಿಗೆ ಅಲ್ಲಾಹನು ದಯಪಾಲಿಸಿದಂತಹ ಅನುಗ್ರಹಗಳು ಜಾರಿಯಾಗಿರುವಂತೆ ಅವರು ದುಆ ಮಾಡುತ್ತಾರೆ. ಏಕೆಂದರೆ ಅಲ್ಲಾಹನೇ ಆ ಶೃಂಖಲೆ ಜಾರಿಯಲ್ಲಿರಿಸಬಲ್ಲನು.

ಅದೇ ಕಾರಣದಿಂದ ಪವಿತ್ರ ಖುರ್‌ಆನ್‌ನಲ್ಲಿ ಪದೇ ಪದೇ ಬರುವುದು **"ವ ಅಲಲ್ಲಾಹಿ ಫಲಯುತವಕ್ಕಲಿಲ್ -ಮುತವಕ್ಕಿಲೂನ್"** ಅಂದರೆ ಅನುಗ್ರಹಿತವಾಗಿದ್ದರೂ ಮನುಷ್ಯನು ಅಲ್ಲಾಹನ ಮೇಲೆ ಭರವಸೆ ಹೊಂದಬೇಕಾಗುತ್ತದೆ. ಏಕೆಂದರೆ ದೊರೆತ ಆ ಅನುಗ್ರಹವು ಅವನಿಂದಲೇ ಪಡೆದಿರುತ್ತೇವೆ. ಆ ಕೃಪೆಯನ್ನು ಪುನರುಚ್ಛರಿಸುವುದು ತನಗಾಗಿ ಮತ್ತು ಇತರಿಗಾಗಿಯೂ ಮಾರ್ಗದರ್ಶನಕ್ಕೆ ಕಾರಣವಾಗಿರುತ್ತದೆ. **( ತ' ಫ಼್ ಸಿ ರ್ ಕಬೀರ್, ಸಂಪುಟ-3, ಪುಟ-483, ಮುದ್ರಣ ಖಾದಿಯಾನ್ 2010)**

*(ಪುಟ ಸಂಖ್ಯೆ 12ರ ಉಳಿದ ಭಾಗ)*

ವಚನ - **"ವಲೌ ತಖವ್ವಲ ಅಲೈನ ಬಅಝುಲ್ ಆಖಾವೀಲ್** ಮತ್ತು ವಚನ **ಇನ್ನಲ್ಲಝೀನ ಯಫ್ತರೂನ ಅಲಲ್ಲಾಹಿಲ್ ಕಝಿಬ ಲಾ ಯುಫ್‌ಲಿಹೂನ್"** ವಿವರಿಸುತ್ತ ಹುಝೂರ್(ಅ) ರವರ ಕೆಲವು ಭವಿಷ್ಯವಾಣಿಗಳು ಮತ್ತು ಜಮಾಅತಿನ ಪ್ರಗತಿಯ ಬಗ್ಗೆ ಮಾತನಾಡಿದಾಗ ಹೇಳಿದರು. ನಾನು ಬೈಅತ್ ಮಾಡಬಯಸುತ್ತೇನೆ. ಏಕೆಂದರೆ ಅಲ್ಲಾಹನು ನನಗೆ ದೃಷ್ಟಾಂತ ತೋರಿಸಿರುವನು. ಯಾವ ದೃಷ್ಟಾಂತವನ್ನು ನೋಡಿದ್ದೀರಿ? ಎಂದು ಕೇಳಿದಾಗ ಹೇಳಿದರು. ನಿನ್ನೆ ರಾತ್ರಿ ನಾನು ಅಲ್ಲಾಹನೊಡನೆ ತುಂಬ ಕಾಳಜಿಯಿಂದ ಕಳವಳಗೊಂಡು ಸಾಷ್ಟಾಂಗದಲ್ಲಿ ದುಆ ಮಾಡಿದೆನು ಮತ್ತು ರಾತ್ರಿ ಮಲಗಿದೆನು. ಸ್ವಪ್ನದಲ್ಲಿ ಒಂದು ದೊಡ್ಡ ಗೋಡೆಯ ಮೇಲೆ ದಪ್ಪ ಅಕ್ಷರದಲ್ಲಿ "ಅಲ್ ಅಹ್ಮದಿಯಾ" ಎಂದು ಬರೆಯಲಾಗಿತ್ತು. ಅದರಿಂದ ಅಸಾಮಾನ್ಯ ರೀತಿಯಲ್ಲಿ ಪ್ರಕಾಶ ಹೊರಡುತಿತ್ತು. ಮತ್ತೆ ನಾನು ಜಲ್ಸಸ್ಥಳಕ್ಕೆ ಪ್ರವೇಶಿಸಿದನು. ಹುಝೂರರ ಜರ್ಮನ್ ಅತಿಥಿಗಳೊಡನೆಯ ಭಾಷಣ ಕೇಳಿದೆನು. ಅದರ ನಡುವೆಯೇ ನನ್ನ ಮನಸ್ಸಿನಲ್ಲಿ ಒಂದು ಬಯಕೆ ಉಂಟಾಯಿತು. ನನಗೆ ಹುಝೂರರ ಜೊತೆ ಮತ್ತು ಅವರ ಸಮೀಪದಲ್ಲಿ ನಿಲ್ಲುವ ಅವಕಾಶ ದೊರೆತರೆ. ಎಷ್ಟು ಒಳ್ಳೆಯದಾಗಿರಬಹುದು. ಸ್ವಲ್ಪ ಸಮಯದ ನಂತರ ನನ್ನ ಮೇಲೆ ಸ್ವಪ್ನ ರೀತಿಯ ಭಾವನೆ ಬಂತು. ನಾನು ನೋಡುತ್ತಿದೇನೆ. ವೇದಿಕೆಯ ಮೇಲೆ ಹುಝೂರರ ಪಕ್ಕದಲ್ಲಿ ನಿಂತುಕೊಂಡಿದ್ದೇನೆ.

ಅವರು ಹೇಳುತ್ತಾರೆ. ಅನಂತರ ಸತ್ಯ ನನ್ನಲ್ಲಿ ಮೂಡಿತು ಮತ್ತು ನನ್ನ ಇನ್ನಷ್ಟು ಖಾತರಿಗಾಗಿ ಖುರ್‌ಆನ್‌ನಿಂದ ಹುಝೂರರ ಮಸೀಹ್ ಮೌಊದ್(ಅ) ರವರ ಸತ್ಯತೆ ಬಗ್ಗೆ ಕೇಳಿದೆ, ವಾಸ್ತವದಲ್ಲಿ ಅದರ ಮುಂಚೆಯೇ ದುಆ ನಂತರ ಸ್ವಪ್ನದಲ್ಲಿಯೇ ನನಗೆ ತೃಪ್ತಿಯಾಗಿತ್ತು. ಅಂದ ಹಾಗೆ ಜಲ್ಸದ ಮೂರನೆಯ ದಿನ ಸಾಮೂಹಿಕ ಬೈಅತ್‌ನಲ್ಲಿ ಅವರು ಭಾಗಿಯಾದರು.

* ಬೆಲ್ಜಿಯಂನಿಂದ ಬಂದ ತಂಡದಲ್ಲಿ ಮಿತ್ರರೊಬ್ಬರು ಮುಹಮ್ಮದ್ ಇರಾನಿ ಭಾಗವಹಿಸಿದ್ದರು. ಅವರ ವಯಸ್ಸು 40 ರ ಸಮೀಪದಲ್ಲಿತ್ತು. ಹಿಂದಿನ ಒಂದು ವರ್ಷದಿಂದ ತಬ್ಲೀಗ್‌ನಲ್ಲಿ ಒಳಪಟ್ಟಿದ್ದರು. ಜಲ್ಸದಲ್ಲಿ ಭಾಗವಹಿಸಿ ಹುಝೂರೆ ಅನ್ವರ್ ಅವರ ಭೇಟಿಯ ನಂತರ ಅವರಿಗೆ ಬೈಅತ್ ಮಾಡುವ ಭಾಗ್ಯ ದೊರೆಯಿತು. ಅವರು ತಮ್ಮ ಭಾವನೆಗಳನ್ನು ಹೀಗೆ ಹಂಚಿಕೊಂಡರು ನಾನು ಹಿಂದಿನ ಹತ್ತು ವರ್ಷಗಳಿಂದ ನಮಾಝ್ ನಿರ್ವಹಿಸುತ್ತಿದ್ದೇನೆ. ಅದರೆ ಇಲ್ಲಿ ಬಂದು ನನಗೆ ದೊರೆತಂತಹ ನೆಮ್ಮದಿ ನನ್ನ ಜೀವನದಲ್ಲಿ ಎಂದೂ ಅನುಭವಕ್ಕೆ ಬರಲಿಲ್ಲ.

ಅವರ ಕುರಿತು ಬೆಲ್ಜಿಯಂನ ಮುಬಲ್ಲಿಗಳು ಹೇಳುತ್ತಾರೆ. ಮುಹಮ್ಮದ್ ಇಲ್ಯಾನಿ ಸಾಹಿಬ್ ಮೂರು ದಿನಗಳು ಜಲ್ಸದ ದೃಶ್ಯಗಳನ್ನು ನೋಡಿ ಅಳುತ್ತಿದ್ದರು. ಒಂದು ವರ್ಷದ ತಬ್ಲೀಗ್ ಒಂದು ಕಡೆಯಾದರೆ ಜಲ್ಸದ ಮೂರು ದಿನಗಳು ಆ ಒಂದು ವರ್ಷದಲ್ಲಿ ಆಗದ್ದನ್ನು ಸಾಧಿಸಿ ತೋರಿಸಿದರು. ಇದು ಕೇವಲ ಅಲ್ಲಾಹನ ಅನುಗ್ರಹ ಹಾಗೂ ಖಲೀಫರ ಕಾರುಣ್ಯದಿಂದ ಸಾಧ್ಯವಾಯಿತು. ಹುಝೂರರನ್ನು ಕಂಡು ಅವರ ಮನಸ್ಸು ಪರಿವರ್ತನೆಗೊಂಡಿತು.

* ಬೆಲ್‌ಜಿಯಮ್‌ದಿಂದ ಬಂದ ಮೂರು ಅತಿಥಿಗಳು ಅಲ್ಲಾಹನ ಅನುಗ್ರಹದಿಂದ ಹುಝೂರರ ಕೈಯಲ್ಲಿ ಬೈಅತ್ ಮಾಡಿದರು ಮತ್ತು ಬೈಅತ್ ಮಾಡಿದ ನಂತರ ಹೇಳಿದರು. ನಮಗೆ ಇಲ್ಲಿ ಪ್ರಥಮ ಬಾರಿಗೆ ಜಮಾಅತಿನ ವಿಷಯ ತಿಳಿಯಿತು. ಖಲೀಫತುಲ್ ಮಸೀಹರ ವ್ಯಕ್ತಿತ್ವವನ್ನು ಕಂಡು ಮತ್ತು ಅವರ ಭಾಷಣಗಳನ್ನು ಕೇಳಿ ಬೈಅತ್ ಮಾಡುವ ನಿರ್ಣಯ ಕೈಗೊಳ್ಳಲು ಯಾವ ಆತಂಕವು ಕಂಡು ಬಂದಿಲ್ಲ. ನಮಗೆ ಈ ಭಾಗ್ಯ ದೊರೆತದ್ದು ತುಂಬ ಸಂತೋಷದ ವಿಷಯವಾಗಿದೆ. ನಾವು ಮರಳಿ ಹೋಗಿ ನಮ್ಮ ಎಲ್ಲ ಮಿತ್ರ ಬಳಗಕ್ಕೆ ಅಹದಿಯತ್ತಿನ ಸಂದೇಶ ತಲುಪಿಸುವೆನು.

* ಓರ್ವ ಸೀರಿಯನ್ ಯುವಕ ಬೈಅತ್ ಮಾಡಿ ಮನೆಗೆ ಮರಳಿದಾಗ ಅವರ ಚಿಕ್ಕಪ್ಪ ಜಮಾಅತ್ ಮತ್ತು ಜಲ್ಸದ ಬಗ್ಗೆ ಅವರಿಂದ ವಿಚಾರಿಸಿದರು. ಆ ಯುವಕ ಜಲ್ಸದಲ್ಲಿ ಕೇಳಿದ ಮಾತುಗಳನ್ನು ಮತ್ತು ಅಹ್ಮದಿಯಾ ಜಮಾಅತಿನ ವಿಶ್ವಾಸಗಳ ಬಗ್ಗೆ ಕೇಳಿದ್ದೆಲ್ಲ ವಿವರಿಸಿದೆನು. ಜಲ್ಸದ ಮರುದಿನವೇ ಅವನ ಫೋನು ಬಂತು. ನನ್ನ ಚಿಕ್ಕಪ್ಪ ಸಹ ಅಹ್ಮದಿಯತ್ತಿನಲ್ಲಿ ಸೇರಬಯಸುತ್ತಾರೆ. ಅವರು ಹೇಳುತ್ತಾರೆ. ಅಹ್ಮದಿಯತ್ತಿನ ಸತ್ಯತೆಯಲ್ಲಿ ಯಾವ ಸಂಶಯವೂ ಇಲ್ಲ. ನಾನು ತಕ್ಷಣ ಈ ಪವಿತ್ರ ಜಮಾಅತಿನಲ್ಲಿ ಸೇರ ಬಯಸುತ್ತೇನೆ. **(ಮುಂದುವರಿಯುವುದು)**

EDITOR
TARIQ AHMED IDRIS.
Mobile : +91 8050330779
e-mail: kannadabadar@gmail.com
website:www.akhbarbadarqadian.in

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613

Weekly **BADAR** Qadian

Distt: Gurdaspur (Pb.) INDIA Qadian - 143516

Postal Reg. No: 3000039689/2020-22 Vol No.02, Thursday, 12 August 2021, Issue No. 32

MANAGER
SHAIKH MUJAHID AHMAD.
Mobile : +91 99153 79255
e-mail:managerbadrqnd@gmail.com
www.alislam.org/badr

ANNUAL SUBSCRIPTION:Rs.575/- (Per Issue: 10/- ) (WEIGHT: 20-50, grms / issue)

## *ಸಯ್ಯದನಾ ಹಝ್ರತ್ ಅಮೀರುಲ್ ಮೂಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್‌ರವರ ಜರ್ಮನಿಯ ಪ್ರವಾಸ (ಮೇ, ಜೂನ್ 2015)*

**(ಬದರ್ ಸಂಚಿಕೆ 31ರ ವರದಿಯ ಉಳಿದ ಭಾಗ)**

* ಜರ್ಮನ್ ಮಹಿಳಾ ಪತ್ರಕರ್ತೆ ತಮ್ಮ ಅಂತಿಮ ಪ್ರಶ್ನೆ ಕೇಳುತ್ತ ಹೇಳಿದರು. ಜರ್ಮನಿಯ ಜನರಿಗಾಗಿ ನಿಮ್ಮ ಸಂದೇಶವೇನು?

ಆಗ ಹುಝೂರ್ ಹೇಳಿದರು. ಜರ್ಮನ್ ಜನವರು ವಿಶಾಲ ಮನೋಭಾವದವರಾಗಿದ್ದಾರೆ. ಯೂರೋಪಿಯನ್ ಒಕ್ಕೂಟ ರಕ್ಷಣೆಗಾಗಿ ಪ್ರಯತ್ನಪಡುತ್ತಿದ್ದಾರೆ. ನಾನು ಅದೇ ಹೇಳುವೆನು. ನೀವು ಅದನ್ನು ಜಾರಿಯಲ್ಲಿಡಿ. ನಿಮ್ಮ ದೇಶವು ಒಂದು ಇಡೀ ಯೂರೋಪ್ ಒಕ್ಕೂಟದ ಮುಖಂಡತ್ವ ವಹಿಸಬೇಕಾಗಿದೆ. ಅಮೇರಿಕಾ ಬಯಸುವುದು ನೀವು ದುರ್ಬಲರಾಗಬೆಕು. ತೀರ ದುರ್ಬಲರಾಗಬೇಕು ಎಂಬುದೇ ಅವರ ಬಯಕೆ. ಆದರೆ ನೀವು ನಿಮ್ಮ ದೇಶ ಮತ್ತು ಈ ಉಪಖಂಡವನ್ನು ಶಾಂತಿಪೂರ್ಣವಾಗಿಸ ಬಯಸುವುದಾದರೆ ನೀವು ಒಗ್ಗೂಡಿ ಇರಬೇಕಾಗುತ್ತದೆ.

* ಸಂದರ್ಶನದ ಈ ಕಾರ್ಯಕ್ರಮ 8 ಗಂಟೆ 45 ನಿಮಷದವರೆಗೆ ನಡೆಯಿತು. ಈಗ ಕಾರ್ಯಕ್ರಮದನ್ವಯ ಜಲ್ಸ ಸ್ಥಳ Karsruhe ದಿಂದ ಬೈತುಸ್ಸುಬೂಹ್ (ಫ್ರೆಂಕ್‌ಫರ್ಟ್) ಕ್ಕಾಗಿ ಪ್ರಯಾಣ ಬೆಳೆಸಬೇಕಾಗಿತ್ತು. ಹುಝೂರ್(ಅಬಿಅ) ತಮ್ಮ ವಸತಿ ನಿಲಯದಿಂದ ಹೊರ ಬಂದಾಗ ಮುಕರ್ರಮ್ ಮುನವರ್ ಅಹ್ಮದಿ ಶಹೀದ್ (ಲಾಹೋರ್) ಅವರ ಕುಟುಂಬ ಮತ್ತು ಮಕ್ಕಳು ಒಂದು ಭಾಗದಲ್ಲಿ ನಿಂತಿದ್ದರು. ಈ ಕುಟುಂಬವು ಬೆಲ್ಜಿಯಂನಿಂದ ಬಂದಿತ್ತು. ಹುಝೂರ್(ಅಬಿಅ) ಪ್ರೀತಿಪೂರ್ವಕವಾಗಿ ಅವರ ಬಳಿ ಬಂದು ಅವರ ಕುಟುಂಬದವರೊಡನೆ ಮಾತನಾಡಿ ಅವರ ಕುಶಲೋಪರಿ ವಿಚಾರಿಸಿದರು.

ಪುಟ್ಟ ಬಾಲಿಕೆ ಕೇಳಿದಳು. ಹುಝೂರ್ ತಾವು ನಮ್ಮ ಮನೆಗೆ ಯಾವಾಗ ಬರುವಿರಿ? ಆಗ ಹುಝೂರ್ ಪ್ರೀತಿಯಿಂದ ಹೇಳಿದರು. ನಿಮ್ಮ ಮನೆ ನನ್ನ ಪ್ರಯಾಣದ ಹಾದಿಯಲ್ಲಿಯೇ ಇದ್ದರೆ ಇನ್‌ಶಾಅಲ್ಲಾಹ್ ಬಂದು ಹೋಗುವೆನು. ಅನಂತರ 8 ಗಂಟೆ 50 ನಿಮಿಷಕ್ಕೆ ಹುಝೂರ್ ಸಾಮೂಹಿಕವಾಗಿ ದುಆ ಮಾಡಿಸಿದರು. ಮತ್ತು ಪ್ರವಾಸ ತಂಡವು ಇಲ್ಲಿಂದ ಫ್ರೆಂಕ್‌ಫರ್ಟ್ ಹೊರಟಿತು. ಹುಝೂರ್ ಅನ್ವರ್(ಅಬಿಅ) ಅವರ ವಾಹನ ಜಲ್ಸಸ್ಥಳ ಆವರಣದಿಂದ ಹೊರ ಬರುತ್ತಲೇ ರಸ್ತೆಯ ಎರಡೂ ಬದಿಯಲ್ಲಿ ಪುರುಷ ಸ್ತ್ರೀಯರು, ಬಾಲಕ, ಬಾಲಕಿಯರಾದಿಯಾಗಿ ಸುತ್ತಲೂ ಸಾವಿರಾರು ಜನ ನಿಂತು, ತನ್ನ ಕೈಗಳನ್ನು ಬೀಸುತ್ತ ತನ್ನ ಪ್ರಿಯ ಇಮಾಮರಿಗೆ ವಿದಾಯ ಕೋರಿದರು. ಜನರು ನಿರಂತರವಾಗಿ ಘೋಷಣೆ ಹಾಕುತ್ತಿದ್ದರು. ಸುಮಾರು ಒಂದು ಗಂಟೆ 40 ನಿಮಿಷದ ಪ್ರಯಾಣ ನಂತರ ಹತ್ತೂವರೆ ಗಂಟೆಗೆ ಹುಝೂರ್ ಬೈತುಸ್ಸುಬೂಹ್ ಆಗಮಿಸಿದರು. ಹುಝೂರ್ ಮಸೀದಿಯ ಸಭಾಂಗಣಕ್ಕೆ ಬಂದು ನಮಾಝ್ ಮಾಗ್ರೀಬ್ ಮತ್ತು ಇಶಾ ಜಮಾ ಮಾಡಿ ನಿರ್ವಹಿಸಿಕೊಟ್ಟರು. ನಮಾಝ್ ನಿರ್ವಹಣೆಯ ನಂತರ ತನ್ನ ವಸತಿನಿಲಯಕ್ಕೆ ತೆರಳಿದರು.

### ಬೈಅತ್ ಮಾಡಿದ ಬಂಧುಗಳ ವಿಶ್ವಾಸವರ್ಧಕ ಅನಿಸಿಕೆಗಳು

* ಇಂದು ಅಲ್ಲಾಹನ ಅನುಗ್ರಹದಿಂದ 43 ಜನರು ಹುಝೂರೆ ಅನ್ವರ್(ಅಬಿಅ) ಅವರ ಶುಭಹಸ್ತದಲ್ಲಿ ಬೈಅತ್ ಮಾಡುವ ಭಾಗ್ಯ ಪಡೆದರು. ಈ ಬೈಅತ್ ಮಾಡಿದವರು 9 ವಿವಿಧ ಸಮುದಾಯದವರಾಗಿದ್ದರು. ಬೈಯತ್ ಮಾಡಿದ ಬಂಧುಗಳ ಸಂತೋಷ ವರ್ಣಾನಾತೀತವಾಗಿತ್ತು. ಕೆಲ ಬಂಧುಗಳು ತಮ್ಮ ಅನಿಸಿಕೆ ಭಾವನೆಗಳನ್ನು ಹಂಚಿಕೊಂಡಿದ್ದಾರೆ. ಅವು ಈ ಕೆಳಗಿನಂತಿದೆ.

* ಸ್ಪೇನ್‌ನಿಂದ ಬಂದ ಓರ್ವ ಅರಬ್ ಮಿತ್ರರು ಇದ್ರೀಸ್ ಸಾಹಿಬರಿಗೂ ಸಹ ಈ ಜಲ್ಸದಲಿ ಬೈಅತ್ ಮಾಡುವ ಭಾಗ್ಯ ದೊರೆಯಿತು. ಅವರು ಹೇಳುತ್ತಾರೆ. ನಾನು ಜಲ್ಸದ ವ್ಯವಸ್ಥೆ, ಶಿಸ್ತುಪಾಲನೆ ಮತ್ತು ಇಷ್ಟು ದೊಡ್ಡ ಸಮಾವೇಶ ನೋಡಿ ಅಚ್ಚರಿಯಾಯಿತು. ಈ ಸಮಾವೇಶ ಒಬ್ಬ ಖಲೀಫರ ಹಿಂದೆ ಒಂದೇ ಮಾಲೆಯಲ್ಲಿ ಪೋಣಿಸಿದ ಮುತ್ತಿನಂತಿತ್ತು. ಈ ದೃಶ್ಯ ಮನಮುಟ್ಟುವಂತಿತ್ತು.

ಅವರು ಹೇಳಿದರು. ನನ್ನ ಸಂತೋಷಕ್ಕೆ ಪಾರವೇ ಇಲ್ಲ ಮತ್ತು ನನ್ನ ಅಭಿಲಾಷೆಯಿದೆ. ನಾನು ಪ್ರತಿ ಜಲ್ಸದಲ್ಲಿ ಹಾಜರಾಗುವೆನು. ಏಕೆಂದರೆ ಹಾರ್ದಿಕವಾಗಿ ಮತ್ತು ಆತ್ಮೀಯವಾಗಿ ಈ ಜಲ್ಸದೊಂದಿಗೆ ನನ್ನ ಸಂಬಂಧ ಏರ್ಪಟ್ಟಿದೆ.

* ಸ್ಪೇನ್‌ನಿಂದಲೇ ಬಂದ ಇನ್ನೊರ್ವ ಅರಬ್ ಮಿತ್ರರಾದ ಮುಹಮ್ಮದ್ ಅಲ್-ಅರಬಿ ಸಾಹಿಬರು ಸಹ ಅದೆ ಜಲ್ಸದಲ್ಲಿ ಬೈಅತ್ ಮಾಡುವ ಭಾಗ್ಯ ಪಡೆದರು. ಅವರು ಹೇಳುತ್ತಾರೆ.

ನನಗೆ ಈ ಮಹೋನ್ನತವಾದ ಜಲ್ಸದಲ್ಲಿ ವಿವಿಧ ದೇಶಗಳಿಂದ ಬಂದ ಅಹ್ಮದಿಯರ ಜೊತೆಗೂಡಿ ತುಂಬ ಸಂತೋಷವಾಗಿದೆ. ಅವರ ಆತಿಥ್ಯ ಮತ್ತು ನೀತಿ ರೀತಿಯನ್ನು ಪ್ರಶಂಸಿಸದೆ ಇರಲು ಸಾಧ್ಯವಿಲ್ಲ. ನಾನು ಹಲವು ಇಸ್ಲಾಮಿ ಜಮಾಅತುಗಳನ್ನು ನೋಡಿರುತ್ತೆನೆ. ಆದರೆ ಯಾವ ಜಮಾಅತ್‌ನಲ್ಲೂ ಈ ಮಾದರಿ ಕಾಣಲಿಲ್ಲ. ಒಂದೇ ಕೈಯಲ್ಲಿ ಒಟ್ಟುಗೂಡುವ ಈ ದೃಶ್ಯ ಅಹ್ಮದಿಯಾ ಜಮಾಅತಿನಲಿ ಮಾತ್ರ ಕಾಣಬಹುದಾಗಿದೆ.

* ಸಅದ್ ಬಿನ್ತ್ ಝುರೂಖ್ ಸಾಹಿಬ ಎಂಬ ಮರಾಕಶ್ ಅಹ್ಮದಿ ಮಹಿಳೆ, ಸ್ಪೇನಿನಿಂದ ಜಲ್ಸ ಸಾಲಾನಕ್ಕೆ ಹಾಜರಾಗಲು ತನ್ನ ಅಹ್ಮದಿಯೇತರ ಸಹೋದರಿ, ಸಹೋದರಿಯ ಪತಿ ಮತ್ತು ಅವರ ಇಬ್ಬರು ಮಕ್ಕಳ ಸಹಿತ ಆಗಮಿಸಿದ್ದರು. ಅವರು ಹೀಗೆ ತಮ್ಮ ಭಾವನೆಗಳನ್ನು ಹಂಚಿಕೊಂಡಿದ್ದಾರೆ.

ನಾನು ಹುಝೂರರನ್ನು MTA ಪರದೆಯ ಮೇಲೆ ಕಾಣುತ್ತಿದ್ದೆ. ಆದರೆ ನೇರವಾಗಿ ಕಂಡಾಗ ಹುಝೂರ್ ಅನ್ವರ್ ಅವರ ಪವಿತ್ರ ಮುಖವು ಪ್ರಕಾಶ ಸೂಸುವಂತೆ ಭಾಸವಾಯಿತು. ನನ್ನ ನಾಲಿಗೆಯಿಂದ ತಕ್ಷಣ ಹೊರಟಿತು. ಅಲ್ಲಾಹುವೆ ಅವರು ಮನುಷ್ಯರಲ್ಲ, ಮಲಕ್ (ದೇವದೂತ) ಗಳಾಗಿದ್ದಾರೆ.

ನಮಗೆ ಜಲ್ಸದಲ್ಲಿ ತುಂಬ ಸಂತೋಷ ದೊರೆಯಿತು. ಜಲ್ಸದ ಎಲ್ಲ ಭಾಗಿದಾರರು ತಮ್ಮ ಉನ್ನತಮಟ್ಟದ ನೈತಿಕ ಪ್ರಭಾವ ಬೀರಿದರು. ನಾನು ನನ್ನ ಅಹ್ಮದಿಯೇತರರ ಸಹದೋರಿ ಮತ್ತು ಅವರ ಪತಿಯನ್ನು ಜೊತೆಯಲ್ಲಿ ಕರೆ ತಂದಿದ್ದೆ. ಅವರೂ ಹುಝೂರರ ಭಾಷಣ ಆಲಿಸಿದರು. ಅವರ ಮೇಲೂ ಆಳವಾದ ಪ್ರಭಾವ ಬೀರಿತು. ಅಲ್ಲಾಹನ ಅನುಗ್ರಹದಿಂದ ಅವರಿಬ್ಬರೂ ಸಹ ಅದೇ ಜಲ್ಸದಲ್ಲಿ ಬೈಅತ್ ಪಡೆದರು. ಅವರ ಸ್ಥಿರತೆಗಾಗಿ ದುಆ ಬಯಸುತ್ತೇನೆ.

* ಮುಕರ್ರಮ್ ಅಬ್ದುಲ್ಲ ಸೆರೀನ್ ಸಾಹಿಬ್ ಅವರ ತಂದೆ ಅನೇಕ ವರ್ಷಗಳಿಂದ ಅಹ್ಮದಿಯರಾಗಿದ್ದಾರೆ, ಅವರು ತಮ್ಮ ತಂದೆಯವರ ಜೊತೆಯಲ್ಲಿ ರಷ್ಯದಲ್ಲಿ ವಾಸಿಸುತ್ತಿದ್ದರು. ಆದರೆ ಈಗ ವಿದ್ಯಾಭ್ಯಾಸದ ಕಾರಣದಿಂದಾಗಿ ಹಾಲೆಂಡಿನಲ್ಲಿ ವಾಸಿಸುತ್ತಿದ್ದಾರೆ. ಅವರ ತಂದೆಯವರ ಮುಖಾಂತರ ಅವರಿಗೆ ತಬ್ಲೀಗ್ ಆಗುತಿತ್ತು. ಆದರೆ ಇನ್ನು ಅವರು ಬೈಅತ್ ಮಾಡಿರಲಿಲ್ಲ. ಈ ವರ್ಷ ಅವರು ತಮ್ಮ ತಂದೆಯರ ಜೊತೆಯಲ್ಲಿ ಈ ಜಲ್ಸದಲ್ಲಿ ಭಾಗವಹಿಸಲು ಬಂದಿದ್ದರು. ಜಲ್ಸದ ಮೊದಲ ದಿನ ಪ್ರಶ್ನೋತ್ತರ ಸಭೆಯ ನಂತರ ನಮ್ಮ ಮುಬಲ್ಲಿಗರು ಹಝ್ರತ್ ಮಸೀಹ್ ಮೌಊದ್(ಅ) ರವರ ಸತ್ಯತೆ ಕುರಿತು ಹೇಳಿದರು. ಅದರ ಅಂತ್ಯದಲ್ಲಿ ಅವರಿಗೆ ಹೇಳಿದರು. ನೀವು ಅಲ್ಲಾಹನೊಡನೆ ದುಆ ಮಾಡಿರಿ. ಓ ಅಲ್ಲಾಹ್ ಈ ಜಲ್ಸದಲ್ಲಿ ಈ ವ್ಯಕ್ತಿಯ ಸತ್ಯಶೋಧನೆಗಾಗಿ ಬಂದಿರುವೆನು ನನಗೆ ಮಾರ್ಗದರ್ಶನ ನೀಡು ಎಂದು. ಅವರು ಹೇಳಿದರು. ನಾನು ಇದಕ್ಕಿಂತ ಮುಂಚೆಯೇ ದುಆ ಮಾಡಿರುತ್ತೇನೆ. ಆದರೆ ಏನು ಪರಿಣಾಮ ಆಗಲಿಲ್ಲ. ಅವರಿಗೆ ಮನವರಿಕೆ ಮಾಡಲಾಯಿತು. ದುಆ ಒಮ್ಮೆ ಮಾತ್ರ ಮಾಡುವುದಲ್ಲ. ಏಕೆಂದರೆ ದುಆ ಜೊತೆಯಲ್ಲಿ ಕೆಲವು ಶರತ್ತುಗಳಿರುತ್ತವೆ. ಅದನ್ನು ಮನದಲ್ಲಿಟ್ಟುಕೊಂಡು ನೀವು ಕಾಳಜಿಯಿಂದ ಕೆಲ ಅವಧಿಯವರೆಗೆ ದುಆ ಮಾಡಬೇಕು.

ಜಲ್ಸದ ಮರುದಿನ ಹುಝೂರ್ ಅನ್ವರ್ ರವರ ತಬ್ಲೀಗಿ ಅತಿಥಿಗಳ ಜೊತೆಯಲ್ಲಿ ಆದ ಸಭೆಯ ನಂತರ ಅವರು ಹೇಳಿದರು. ನನಗೆ ಖುರ್‌ಆನ್‌ನಿಂದ ಮಸೀಹ್ ಮೌಊದ್(ಅ) ರವರ ಸತ್ಯತೆಯ ಬಗ್ಗೆ ಯಾವುದಾದರು ಒಂದು ಸಾಕ್ಷ್ಯ ಹೇಳಿ, ನಮ್ಮ ಮುಬಲ್ಲಿಗರು ಅವರಿಗೆ

*(ಪುಟ ಸಂಖ್ಯೆ-11 ರಲ್ಲಿ ಮುಂದುವರಿಸಲಾಗಿದೆ)*

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.